ಗೌರಿ


ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

09 ಮಾರ್ಚ್ 2016 ಪುಟ 20 ರೂ. 15/-



ಕೃಷ್ಣಶಾಸ್ತ್ರಿ ಬಾಳಿಲರಿಗೆ ನಮನ




ರಾಜ್ಯದ ಅಮಿತ್ ಶಾ?



ನಮ್ಮ ಹೆಮ್ಮೆಯ ಪುತ್ರರು



ಮನು ಬಳಿಗಾರ್ ಸಂದರ್ಶನ



ಸಾಹಿತ್ಯ ಯಾರಿಗೂ ಸೀಮಿತವಲ್ಲ

ಪಂಚಾಯಿತ್ ಫಲಿತಾಂಶ


ಮಂಡ್ಯ
ಜೆಡಿಎಸ್ ಗೆಲುವಿನಲ್ಲಿ ಅಂಬಿಯ ಪಾತ್ರ

ಕೊಡಗು
ಕಾಂಗ್ರೆಸ್‌ಗೆ ಶಸ್ತ್ರಚಿಕಿತ್ಸೆ ಅಗತ್ಯ

ಕರಾವಳಿ
ದಿಕ್ಕೆಡಿಸುವ ಕೇಸರಿ ಉಪದ್ರವಿ ಸರ್ವಾಧಿಕಾರಿ

ದೇಶದ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಿದ ಇಬ್ಬರು ಯುವಕರ

ಅಂಚಿನಿಂದ...



ಡಾ.ವಾಸು ಎಚ್.ವಿ.

ಬಹುಶಃ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸುವುದು ಎಂದರೆ ಇದೇ ಇರಬಹುದೇ? ಈಗಾಗಲೇ ತಮ್ಮ ಹಕ್ಕುಗಳಿಗಾಗಿ, ದೇಶದ ಪ್ರಜಾತಂತ್ರಕ್ಕಾಗಿ ಹೋರಾಡುತ್ತಿದ್ದವರು ಬೀದಿಗಳಲ್ಲೇ ಇದ್ದರು. ಆದರೆ, ಇದುವರೆಗೆ ಆ ರೀತಿ ಬೀದಿಗಿಳಿಯದವರು ಅಥವಾ ಈಚಿನ ವರ್ಷಗಳಲ್ಲಿ ಮನೆ ಸೇರಿಕೊಂಡಿದ್ದವರು ಎಲ್ಲರೂ ಎದ್ದು ನಿಂತು ಧಿಕ್ಕಾರ ಹೇಳುತ್ತಿರುವ ಸಂದರ್ಭವಿದು. ಎಲ್ಲಕ್ಕಿಂತ ಆಶ್ಚರ್ಯವೆಂದರೆ, ದೇಶದ ಆತ್ಮಸಾಕ್ಷಿಯನ್ನು ನಾಶ ಮಾಡುತ್ತಿದ್ದ, ವಿಕೃತಗೊಳಿಸುತ್ತಿದ್ದ ಮಾಧ್ಯಮಲೋಕದ ಒಂದಷ್ಟು ಜನ ಎಚ್ಚೆತ್ತುಕೊಂಡಿರುವುದು. 'ಇನ್ನೂ ನಾನು ಸಹಿಸಿಕೊಂಡಿದ್ದರೆ ನನ್ನ ಅಂತರಾತ್ಮ ಒಪ್ಪುವುದಿಲ್ಲ' ಎಂದು ಹೇಳಿ ಜೀ ನ್ಯೂಸ್‌ಗೆ ರಾಜೀನಾಮೆ ಇತ್ತ ವಿಶ್ವದೀಪಕ್ ಅದಕ್ಕೊಂದು ಉದಾಹರಣೆ. ಅರ್ನಬ್ ಗೋಸ್ವಾಮಿಯನ್ನು ಹೆಸರಿಸಿ, ಮುಖಪುಟದಲ್ಲಿ ಆತನ ಫೋಟೋ ಹಾಕಿ 'ಇವನೇ ಭಾರತದ ಸುದ್ದಿಮನೆಗಳನ್ನು ಕೊಂದ ಪಾಪಿ' ಎಂದು ದೇಶವ್ಯಾಪಿ ಪ್ರಸಾರ ಹೊಂದಿರುವ ಔಟ್‌ಲುಕ್ ಎಂಬ ಒಂದು ಆಂಗ್ಲ ವಾರಪತ್ರಿಕೆ ಬರೆದಿರುವುದು ಐತಿಹಾಸಿಕ. ದೆಹಲಿಯ ಬೀದಿಗಳಲ್ಲಿ ನಿರ್ಭಯಳಿಗಾಗಿ ಸಾವಿರಗಟ್ಟಲೆ ಸೇರಿದ್ದ ಯುವಕರು-ವಿದ್ಯಾರ್ಥಿಗಳು ಈ ಸಾರಿ ಇನ್ನೂ ವಿಶಾಲವಾದ ಕ್ಯಾನ್‌ವಾಸನ್ನು ಹರಡಿದ್ದರು. ಅವರು ಇಡೀ ದೇಶದ ಉಳಿವಿನ ಬಗ್ಗೆ ಘೋಷಣೆ ಕೂಗುತ್ತಿದ್ದರು. ಸಂದೇಹವೇ ಇಲ್ಲ; ದೇಶದ ಆತ್ಮಸಾಕ್ಷಿ ಎಚ್ಚರಗೊಳ್ಳುತ್ತಿದೆ.

ಇದು ಇವತ್ತಿನ ಸಂದರ್ಭದ ಕಾರಣಕ್ಕೆ ರೂಪುಗೊಂಡಿರುವ ಎಚ್ಚರವಾಗಿದೆ; ಈ ಸಂದರ್ಭವನ್ನು ಕಾಲ ಮತ್ತು ದೇಶಗಳು ರೂಪಿಸಿವೆಯೆನ್ನುವುದು ನಿಜ. ಆದರೂ ಈ ಇಬ್ಬರು ಯುವಕರೇ ಇಂತಹ ಎಚ್ಚರದ ಪ್ರತೀಕಗಳಾಗಿರುವುದು ಆಕಸ್ಮಿಕವಲ್ಲ. ರೋಹಿತ್ ತನ್ನ ಸಾವಿನ ನಂತರ ದಂತಕಥೆಯಾದವ; ಕನ್ಹಯ್ಯ ಬದುಕಿದ್ದಾಗಲೇ ದಂತಕಥೆಯಾದ. ರೋಹಿತ್‌ನ ಸಾವಿನ ಬಿಸಿ ತಡೆದುಕೊಳ್ಳಲಾಗದೇ ಒದ್ದಾಡುತ್ತಿದ್ದವರು, ಅದರಿಂದ ಬಚಾವಾಗುವುದಕ್ಕೆ ಕನ್ಹಯ್ಯನನ್ನು ಬಲಿ ಹಾಕಲು ನೋಡಿದರು. ಆದರೆ, ಈಗ ಇಬ್ಬರೂ ಸೇರಿ ಅವರನ್ನು ಕಾಡಲಾರಂಭಿಸಿದ್ದಾರೆ. ಇಂಥದು ಕೆಲವು ಐತಿಹಾಸಿಕ ಸಂದರ್ಭಗಳಲ್ಲಷ್ಟೇ ಸಾಧ್ಯವಾಗುತ್ತದೆ.

ಈ ಇಬ್ಬರೇ ಇಂದು ಹೊಸ ಭಾರತದ ಪ್ರತಿಭಟನೆಯ ಸಂಕೇತಗಳಾದುದಕ್ಕೆ ಮಹತ್ವವಿದೆ. ಇಬ್ಬರೂ 28ರ ಆಸುಪಾಸಿನ ಯುವಕರು. ಜಾಗತೀಕರಣ ಮತ್ತು ಕೋಮುವಾದದ ಜಂಟಿ ರಥಯಾತ್ರೆ ದೇಶವನ್ನು ಆವರಿಸಲು ಆರಂಭಿಸಿದ ವರ್ಷಗಳಲ್ಲಿ ಹುಟ್ಟಿದವರು. ರೋಹಿತ್‌ನ ಮೂಲ ಗುಂಟೂರು ಜಿಲ್ಲೆಯ ಗುರಜಾಲ ಹಳ್ಳಿ. ಅಸ್ಪೃಶ್ಯ ಮೂಲದ, ಅತೀ ಹಿಂದುಳಿದ ಸಮುದಾಯದ ಮನೆಯಲ್ಲಿ, ಕಷ್ಟದ ಬಾಲ್ಯವನ್ನು ಕಳೆದ ವ್ಯಕ್ತಿ ತಾನು ಒಳಗೂ, ಹೊರಗೂ ದುಡಿದು ಮಕ್ಕಳನ್ನು ಸಲುಹಿದ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಆಸೆ ಕೊನೆತನಕ ಬಿಟ್ಟಿರಲಿಲ್ಲ, ತನ್ನ ಡೆತ್‌ನೋಟಿನಲ್ಲೂ ತಾಯಿಗೆ ಕಳಿಸಬೇಕಾದ ದುಡ್ಡಿನ ಬಗ್ಗೆ ಬರೆದಿದ್ದ ರೋಹಿತ್. ಕನ್ಹಯ್ಯ 'ಬಲಾಢ್ಯ' ಭೂಮಿಹಾರ್ ಜಾತಿಗೆ ಸೇರಿದವ. ಆದರೆ, ಬಿಹಾರದ ಬೇಗುಸರಾಯಿ ಜಿಲ್ಲೆಯ ಬಿಹಟ್ ಹಳ್ಳಿ ಆತನ ಮೂಲ. ದೆಹಲಿಯಿಂದ 1,200 ಕಿ.ಮೀ ದೂರದ ಈ ಹಳ್ಳಿಯಲ್ಲಿನ ಕನ್ಹಯ್ಯನ ಕುಟುಂಬವು ಬಹಳ ಸ್ಥಿತಿವಂತವೇನಲ್ಲ, ಪಾರ್ಶ್ವವಾಯು ಪೀಡಿತ ತಂದೆ ಮತ್ತು ಅಂಗನವಾಡಿ ಕಾರ್ಯಕರ್ತೆಯಾಗಿರುವ ತಾಯಿ. ಎರಡೂ ಈ ದೇಶದ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಕುಟುಂಬಗಳು.

ಇಬ್ಬರೂ ಅಂಬೇಡ್ಕರ್ ಮತ್ತು ಮಾರ್ಕ್ಸ್‌ರನ್ನು ಪ್ರೀತಿಸಿದವರು. ಬಹುಶಃ ರೋಹಿತ್‌ಗೆ ಅಂಬೇಡ್ಕರ್ ಹೆಚ್ಚು ಪ್ರಿಯವಿದ್ದಿರಬಹುದು; ಕನ್ಹಯ್ಯನಿಗೆ ಮಾರ್ಕ್ಸ್. ಕನ್ಹಯ್ಯನ ಭಾಷಣ, ರೋಹಿತ್‌ನ ಫೇಸ್‌ಬುಕ್ ಪುಟ ಮತ್ತು ಡೆತ್‌ನೋಟ್ ನೋಡಿದರೆ ಒಂದು ಅಂಶ ಸ್ಪಷ್ಟ. ಇವರ ನಂಬಿಕೆಗಳು ಕುರುಡಾಗಿರಲಿಲ್ಲ. ರೋಹಿತ್ ಜಗತ್ತಿನ ಶ್ರೇಷ್ಠ ಬರಹಗಾರರು ಮತ್ತು ವಿಜ್ಞಾನಿಗಳನ್ನು ಓದಿ ಬಲ್ಲವನಾಗಿದ್ದ. (ಆತನ ಫೇಸ್‌ಬುಕ್ ಪುಟವನ್ನು ನೋಡಿದರೆ ಕನಿಷ್ಠ ನೂರು ಅದ್ಭುತ ಮಾತುಗಳು ಮತ್ತು ಫೋಟೋಗಳು ಸಿಗುತ್ತವೆ. ವಿಕೃತ ಆರೆಸ್ಸೆಸ್ಸಿನವನೊಬ್ಬ ಅದರಲ್ಲಿ ಕೇವಲ 3 ಫೋಟೋಗಳನ್ನು ಆಯ್ದುಕೊಂಡು ಪ್ರಚಾರ ಮಾಡುತ್ತಿದ್ದಾನೆ. ರೋಹಿತ್ ಕೈಯ್ಯಲ್ಲಿ ಮದ್ಯದ ಬಾಟಲ್ ಇಟ್ಟುಕೊಂಡಿರುವ ಫೋಟೋಗಳು. ಆ ಮೂರು ಬಿಟ್ಟರೆ ಉಳಿದ ನೂರು ಚಿತ್ರಗಳಲ್ಲಿ ಜ್ಞಾನ, ಜಗತ್ತಿನ ಸಾಮಾನ್ಯ ಜನರ ಬದುಕಿನ ಕುರಿತ ಆಶಯಗಳೇ ತುಳುಕುವುದು ಕಾಣುತ್ತದೆ. ಆದರೆ, ತನ್ನ ಅಭಿರುಚಿಗೆ ತಕ್ಕ ಮೂರು ಫೋಟೋಗಳನ್ನು ಮಾತ್ರ ಸಂಘಿ ಆಯ್ದುಕೊಂಡಿದ್ದ. ಕನ್ಹಯ್ಯ, ತನ್ನ ಪಿಎಚ್‌ಡಿಗೆ ಆಯ್ದುಕೊಂಡಿರುವುದು ದಕ್ಷಿಣ ಆಫ್ರಿಕಾದಲ್ಲಿ ಬದಲಾವಣೆ ಬಂದದ್ದು ಹೇಗೆ ಎಂಬ ವಿಷಯವನ್ನು. ಜೆಎನ್‌ಯುನ ಆಫ್ರಿಕನ್ ಸ್ಟಡೀ ಸೆಂಟರ್‌ನಲ್ಲಿ ಈತನ ಅಧ್ಯಯನ ನಡೆಯುತ್ತಿತ್ತು. ಅಂದರೆ, ಈ ದೇಶದ ಮೂಲೆಗಳಿಂದ ಸಾಮಾನ್ಯರಲ್ಲಿ ಸಾಮಾನ್ಯ ಕುಟುಂಬಗಳಿಂದ ಬಂದವರು ಜಾಗತಿಕ ವಿದ್ವತ್ತನ್ನು ತಮ್ಮ ಕೈವಶ ಮಾಡಿಕೊಳ್ಳಲು ಅತ್ಯುನ್ನತ ಶಿಕ್ಷಣ ಸಂಸ್ಥೆಗಳ ತನಕ ಬಂದಿದ್ದಾರೆ. ಈ ರೀತಿ ಬಂದವರು ದೇಶದ ಸಮಸ್ತ ಜನತೆಯ ಪರವಾದ ಚಿಂತನೆ ಹಾಗೂ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದಾರೆ. ಇವರಲ್ಲದೇ ಇನ್ಯಾರು ಹೊಸ ಭಾರತದ 'ಪೋಸ್ಟರ್ ಬಾಯ್'ಗಳಾಗಬೇಕಿತ್ತು?

ರೋಹಿತ್ ಸಾಯಬಾರದಾಗಿತ್ತು ಅಷ್ಟೇ. ಆದರೆ, ತನ್ನ ಸಾವು ಮಾತ್ರವೇ ದೇಶದ ಆತ್ಮಸಾಕ್ಷಿಗೆ ಏಟು ಕೊಡಬಹುದೆಂದು ರೋಹಿತ್ ಭಾವಿಸಿದ್ದಿರಬಹುದೇ? ಆತನ ಸಾವಿಗೆ ಕಾರಣವಾದ ಘಟನಾವಳಿಗಳು ಮತ್ತು ಡೆತ್‌ನೋಟ್ ಆ ಸೂಚನೆಗಳನ್ನು ನೀಡುತ್ತವೆ. ಅದೇನೇ ಇರಲಿ, ರೋಹಿತ್ ಭಾರತದ ಸಮಾಜದ ರಚನೆಯೊಳಗೇ ಇರುವ ಸಮಸ್ಯೆಗಳನ್ನು, ವಿಶ್ವವಿದ್ಯಾಲಯದೊಳಗೆ ವಿವಿಧ ರೀತಿಯಲ್ಲಿ ಹರಿಯುವ ಜಾತಿ ತಾರತಮ್ಯದ ಧೋರಣೆಗಳ ಕುರಿತು ನಿರ್ಲಕ್ಷ್ಯ ಮಾಡಲು ಸಾಧ್ಯವಾಗದ ರೀತಿಯಲ್ಲಿ ಪ್ರಶ್ನೆಗಳನ್ನೆಬ್ಬಿಸಿ ಹೋಗಿದ್ದಾರೆ.

ಇವೆಲ್ಲದರ ಪರಿಣಾಮವಾಗಿ ಭಾರತದ ಆತ್ಮಸಾಕ್ಷಿ ಎಚ್ಚರಗೊಂಡಿದೆ. ರವೀಶ್‌ಕುಮಾರ್ ಎಂಬ ಎನ್‌ಡಿಟಿವಿಯ ಹಿರಿಯ ಪತ್ರಕರ್ತರು 'ಈ ಕಗ್ಗತ್ತಲೇ ನಮ್ಮ ಟಿವಿಯ ಚಿತ್ರವಾಗಿದೆ' ಎಂಬ ಅರ್ಧಗಂಟೆಯ ಕಾರ್ಯಕ್ರಮ ನಡೆಸಿ, ಇಡೀ ದೃಶ್ಯ ಮಾಧ್ಯಮದ ಗೋಸುಂಬೆತನವನ್ನು ಬಯಲಿಗೆಳೆದಿದ್ದಾರೆ. ರಾಜ್‌ದೀಪ್ ಸರ್ದೇಸಾಯಿ ಮತ್ತು ಬರ್ಖಾದತ್ ಇದನ್ನೇ ದೇಶದ್ರೋಹ ಎಂದು ಕರೆಯುವುದಾದರೆ ನಾವೂ ದೇಶದ್ರೋಹಿಗಳೇ ಎಂದು ಬಹಿರಂಗವಾಗಿ ಹೇಳಿದ್ದಲ್ಲದೇ, ತಮ್ಮ ಮಾಜಿ ಸಹೋದ್ಯೋಗಿ ಅರ್ನಬ್ ಗೋಸ್ವಾಮಿಯ ನೀಚತನದ ಮೇಲೆ ಉಗುಳಿದರು. ಇದುವರೆಗೆ ತರ್ಕಹೀನವಾಗಿ ಮತ್ತು ಕುತರ್ಕದಿಂದ ಗೋಸ್ವಾಮಿಯಂತಹವರು ಪ್ರಜಾತಂತ್ರದ ಮೇಲೆ ನಡೆಸುತ್ತಿದ್ದ ದಾಳಿಯನ್ನು ಯಾವ ರೀತಿ ಎದುರಿಸುವುದು ಎಂದು ಗೊತ್ತಿಲ್ಲದೆ ಹಲವರು ಪರದಾಡುತ್ತಿದ್ದರು. ಆದರೆ ಮೊದಲ ಬಾರಿಗೆ ಅದನ್ನು ತರ್ಕದಿಂದ, ಸತ್ಯದಿಂದ ಬಹುತೇಕರು ಎದುರಿಸಿ ನಿಂತರು.

ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದ ತನ್ನ ನಿಲುವನ್ನು, ಧೋರಣೆಯನ್ನು ಮತ್ತು ಸ್ವಾಯತ್ತತೆಯನ್ನು ಸಮರ್ಥಿಸಿಕೊಂಡ ರೀತಿ ಅನನ್ಯವಾದುದು. ಪ್ರತಿನಿತ್ಯ ಸಾವಿರಗಟ್ಟಲೆ ಸಂಖ್ಯೆಯಲ್ಲಿ ಕೂತು, ನಿಂತು, ಭಾಷಣ ಮಾಡಿ, ಘೋಷಣೆ ಕೂಗಿ ಪ್ರತಿರೋಧ ತೋರಿದ್ದಲ್ಲದೇ, ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಮೆಟ್ಟಿಲುಗಳ ಮೇಲೆ ರಾಷ್ಟ್ರೀಯತೆಯ ಕುರಿತ ಅತ್ಯುನ್ನತ ಮಟ್ಟದ ವಿಚಾರಗೋಷ್ಠಿಗಳನ್ನು ಏರ್ಪಡಿಸಿದರು. ಇಡೀ ವಿದ್ಯಮಾನವು ಒಬ್ಬ 'ದಲಿತ್ ಸ್ಕಾಲರ್' ವಿದ್ಯಾರ್ಥಿಯ ಆತ್ಮಹತ್ಯೆ ಮತ್ತು ಮತ್ತೊಬ್ಬ 'ಎಡಪಂಥೀಯ' ವಿದ್ಯಾರ್ಥಿ ನಾಯಕನ ಬಂಧನವಾಗಿ ಉಳಿದುಕೊಳ್ಳಲಿಲ್ಲ, ಜನರ ಸಮಸ್ಯೆಗಳು, ದೇಶದ ರಚನೆಯೊಳಗಡೆಯೇ ಇರುವ ಸಮಸ್ಯೆಗಳು, ಫ್ಯಾಸಿಸಂ, ಪ್ರಜಾತಂತ್ರ, ರಾಷ್ಟ್ರೀಯತೆ ಇವೆಲ್ಲವುಗಳೂ ಚರ್ಚೆಯ ಕೇಂದ್ರಕ್ಕೆ ಬಂದು ನಿಂತವು.

ಪಟಿಯಾಲಾ ಹೌಸ್ ಕೋರ್ಟಿನಲ್ಲಿ ನಡೆಸಿದ ಹಲ್ಲೆ, ನಕಲಿ ವಿಡಿಯೋಗಳು, ರೋಹಿತ್-ಕನ್ಹಯ್ಯಾರ ಬಗ್ಗೆ ನಡೆಸಿದ 3ನೇ ದರ್ಜೆಯ ಕೀಳು ಪ್ರಚಾರ, ರಾಜಸ್ತಾನದ ಎಂಎಲ್‌ಎ ನಡೆಸಿದ ಕಾಂಡೋಮ್ ಗಣತಿ ಇವ್ಯಾವುವೂ ಸಂಘಪರಿವಾರವನ್ನು ರಕ್ಷಿಸಲಿಲ್ಲ, ಬದಲಿಗೆ ಒಂದರ ನಂತರ ಇನ್ನೊಂದು ಅವರಿಗೆ ಮುಳುವಾದವು. ಈ ನೀಚ ಕೃತ್ಯಗಳಿಗಿಂತ ಮುಂಚೆ ಅವರು ದಾಳಿ ಮಾಡಿದ್ದು ದೇಶಪ್ರೇಮ-ದೇಶದ್ರೋಹದ ಚೀರಾಟದ ಮೂಲಕ. ಪಠಾನ್‌ಕೋಟ್ ದಾಳಿ, ಸಿಯಾಚಿನ್ ಹಿಮಪಾತಗಳಲ್ಲಿ ನಮ್ಮ ಸೈನಿಕರು ಸತ್ತಿದ್ದು ಅವರಿಗೆ ದೇಶಪ್ರೇಮದ ಅಲೆಯನ್ನು ದೊಡ್ಡದಾಗಿಸುವ ಅವಕಾಶ ಕಲ್ಪಿಸಿಕೊಟ್ಟಿತ್ತು. ಆದರೆ, ರೋಹಿತ್‌ನ ಹತ್ಯೆ ಮತ್ತು ಜೆಎನ್‌ಯುನಲ್ಲಿ ನಡೆದ ಘಟನೆಗಳ ನಂತರ ದೇಶದ ಯುವಕರು ನಿಜವಾದ ದೇಶಪ್ರೇಮವೆಂದರೆ ಯಾವುದು ಎಂಬುದನ್ನು ಅರಿಯಲಾರಂಭಿಸಿದ್ದರು. ಕನ್ಹಯ್ಯನ ಕರುಳಿನಿಂದ ಹೊರಟ 'ದಾರಿದ್ರ್ಯದಿಂದ ಸ್ವಾತಂತ್ರ್ಯ, ಸಂಘವಾದದಿಂದ ಸ್ವಾತಂತ್ರ್ಯ, ಫ್ಯೂಡಲಿಸಂನಿಂದ ಸ್ವಾತಂತ್ರ್ಯ, ಬ್ರಾಹ್ಮಣವಾದದಿಂದ ಸ್ವಾತಂತ್ರ್ಯ, ಬಂಡವಾಳಶಾಹಿಯಿಂದ ಸ್ವಾತಂತ್ರ್ಯ' ಘೋಷಣೆಯು ನಿಜವಾದ ದೇಶಪ್ರೇಮ ಏನೆಂಬುದನ್ನು ಇವೆಲ್ಲದರಿಂದ ಬಾಧಿತರಾದ ದೇಶದ ಯುವಜನತೆಯು ಅರ್ಥಮಾಡಿಕೊಳ್ಳುತ್ತಿದೆ. ಹಾಗಾಗಿಯೇ ನಂತರ ನಡೆದ ಯೋಧರ ಹತ್ಯೆಗೆ ಶ್ರದ್ಧಾಂಜಲಿ ... ಜನರು, ಹೋರಾಟವನ್ನು ಮುಂದುವರಿಸಿದ್ದಾರೆ.

ಈ ಹೋರಾಟವೇ ದೇಶದ್ರೋಹ ಎನ್ನುವುದಾದರೆ ನಾನೂ ದೇಶದ್ರೋಹಿಯೇ ಎಂದು ಹೇಳುತ್ತಿರುವ ಪಟ್ಟಿಯೂ ಬೆಳೆಯುತ್ತಿದೆ. ಮೋದಿ ಮುಟ್ಟಿ ನೋಡಿಕೊ... ರೀತಿಯಲ್ಲಿ ತಮಿಳುನಾಡಿನ ಬರಹಗಾರ್ತಿ ... ಕಂದಸಾಮಿ ಬರೆದಿದ್ದಾರೆ. ಅಲ್ಲಿಂದ ಶುರುವಾಗಿ ನ... ಚಾಮ್‌ಸ್ಕಿಯವರೆಗೆ ಪ್ರಪಂಚದ ಬಹಳ ಲೇ... ವಿದ್ವಾಂಸರು ದೇಶದ ಜನರ ಜೊತೆ ನಿಂತಿದ್ದಾರೆ. ಅಸ... ಹೆಚ್ಚಾಗುತ್ತಿದೆ ಮತ್ತು ಅದಕ್ಕೆ ನೇರವಾಗಿ ಸರ್ಕಾರದ ಕು... ಎಂಬ ಕಾರಣಕ್ಕೆ ಲೇಖಕರು ಪ್ರಶಸ್ತಿಗಳನ್ನು ... ನೀಡಿದ್ದರು. ಆಗ, ಲೇಖಕರ ವಿರುದ್ಧ ಸಂಘಪ... ಹಾಗೂ ಮಾಧ್ಯಮಗಳ ಒಂದು ವಿಭಾಗವು ಸಮ... ಸಾರಿತ್ತು. ಈಗ ಲೇಖಕರು ಹೋರಾಟ ನಡೆಸುತ್ತಿ... ದೇಶದ ಭವಿಷ್ಯದ ತಲೆಮಾರು ಚಳವಳಿ ನಡೆಸು... ಅವರೊಂದಿಗೆ ಲೇಖಕರು ಮತ್ತು ಮಾಧ್ಯಮದಲ್ಲಿ... ಆತ್ಮಸಾಕ್ಷಿ ಇರಿಸಿಕೊಂಡಿರುವವರೆಲ್ಲರೂ ಜೊತೆಯಾ...

ವಿಶ್ವದೀಪಕ್ ಜೀನ್ಯೂಸ್‌ಗೆ ಬರೆದ ಪತ್ರದಲ್ಲಿ ... ಮಾತುಗಳನ್ನು ಓದಿದರೆ ಉದಾರವಾದಿ ಪ್ರಜಾತಂ... ಎದುರಾಗಿರುವ ಅಪಾಯದ ವಾಸನೆ ಮತ್ತು ... ನಿಜವಾದ ಪ್ರಜಾತಂತ್ರವಾದಿಗಳು ಹಾಗೂ ದೇಶಪ್ರೇ... ಎಚ್ಚೆತ್ತಿರುವುದು ಕಾಣುತ್ತದೆ. 'ನನ್ನ ಮುಂದೆ ... ದಾರಿಗಳಿವೆ. ನಾನು ಒಂದೋ ಪತ್ರಿಕೋದ್ಯಮ... ಬಿಟ್ಟುಬಿಡಬೇಕು. ಇಲ್ಲವೇ ಈ ಸದ್ಯ ನಾನಿ... ಪರಿಸ್ಥಿತಿಯಿಂದ ಹೊರಗೆ ಬರಬೇಕು. ... ಎರಡನೆಯದ್ದನ್ನು ಆರಿಸಿಕೊಂಡಿದ್ದೇನೆ. ನನಗೆ ಗೊ... ಈ ಸದ್ಯ ನನಗೆ ಎಲ್ಲೂ ಕೆಲಸ ಸಿಗದೇ ಹೋಗಬಹು... ನಾನು ಇಲ್ಲೇ ಇದ್ದರೆ, ಹತ್ತಿರ ಹತ್ತಿರ ಒಂದು ... ರೂ.ಗಳಷ್ಟು ಸಂಬಳ ನನಗೆ ಸಿಗಬಹುದು ಎಂದೂ ... ಗೊತ್ತು. ನಾನು ಇಲ್ಲಿ ಒಳ್ಳೆಯ ವೇತನ... ಸಂಪಾದಿಸಬಹುದಾದರೂ, ಇದರಿಂದ ಸಿಗುವ ... ಸುಖಗಳು ನನ್ನಿಂದ ನಾನು ಕೊಡಲಾಗದಷ್ಟು ಮೌಲ್ಯ... ನನ್ನಿಂದ ಕಿತ್ತುಕೊಳ್ಳುತ್ತವೆ. ಸಾಧಾರಣ ಮಧ್ಯಮವ... ಕುಟುಂಬದಿಂದ ಬಂದಿರುವ ನನಗೆ, ಸಂಬಳವಿಲ್ಲದೇ ಹ... ರೀತಿಯ ತೊಂದರೆಗಳು ಎದುರಾಗಲಿವೆ, ಆದರೆ ... ನನ್ನ ಆತ್ಮಸಾಕ್ಷಿಯನ್ನು ಅದುಮಿಡಲಾರೆ.'


ದೆಹಲಿಯಲ್ಲಿ ರೋಹಿತನ ಸಾವಿಗೆ ನ್ಯಾಯ ಕೇ... 'ಚಲೋ ದಿಲ್ಲಿ' ರ‍್ಯಾಲಿಯಲ್ಲಿ ಎಡಪಂಥೀಯರಿದ್ದರು, ಕಾಂ... ಇತ್ತು, ಮುಸ್ಲಿಮರಿದ್ದರು, ದಲಿತ ಸಂಘಟನೆಗಳಿದ್ದವು, ... ಆದ್ಮಿ ಪಕ್ಷವಿತ್ತು, ದೇಶದ ವಿವಿಧ ಭಾಗಗಳ ವಿದ್ಯಾ... ಪ್ರತಿನಿಧಿಗಳಿದ್ದರು. ಇಷ್ಟೇ ಅಲ್ಲ, ಜೆಎನ್‌ಯು ... ಎಬಿವಿಪಿ ಘಟಕದ ಮೂವರು ಪದಾಧಿಕಾರಿಗಳೂ ... ವಿಚಾರವನ್ನು ಮುಂದಿಟ್ಟು ರಾಜೀನಾಮೆ ನೀಡಿದ ಮಹ... ಬೆಳವಣಿಗೆಯನ್ನೂ ನಾವು ನೋಡಿದೆವು. ಇನ್ನೊ... ಸಂಗತಿಯನ್ನು ಇಲ್ಲಿ ದಾಖಲಿಸಬೇಕು. ಈಗೀಗ ದೆಹಲಿ... ನಡೆಯುತ್ತಿರುವ ಹಲವು ಹೋರಾಟ... ಮುಂಚೂಣಿಯಲ್ಲಿರುವವರು ಯುವತಿಯರು. ಈ... ನಡೆದ 'ಯುಜಿಸಿ ಆಕ್ರಮಿಸಿಕೊಳ್ಳಿ' ಚಳವಳಿ... ಅದಕ್ಕೊಂದು ನಿದರ್ಶನ. ಕನ್ಹಯ್ಯನ ಬಂಧನದ ನ... ಅಲ್ಲಿನ ಹೋರಾಟದ ನೇತೃತ್ವ ಹೊತ್ತಿರುವುದು ಉಪಾ... ಶೆಹ್ಲಾ ರಷೀದ್. ಆಕೆ ಮಾಡಿದ ಭಾಷಣದ ತುಣ... ಲಕ್ಷಾಂತರ ಯುವಕ-ಯುವತಿಯರ ಮೊಬೈಲ್‌ಗ... ಹರಿದಾಡುತ್ತಿದೆ. ಹಾಗೆಯೇ ಜೆಎನ್‌ಯು ವಿದ್ಯಾರ್ಥಿ ಸ... ಪ್ರಧಾನ ಕಾರ್ಯದರ್ಶಿ ರಾಮ ನಾಗಾ, ದ... ಸಮುದಾಯಕ್ಕೆ ಸೇರಿದ ವಿದ್ಯಾರ್ಥಿ.

ದೇಶದಲ್ಲಿ ಯಾರೆಲ್ಲರೂ ಒಗ್ಗಟ್ಟಾಗಬೇಕಿತ್ತೋ, ಅವ... ಆತ್ಮಸಾಕ್ಷಿಯನ್ನು ಕದಡಿದ ಕಳೆದೆರಡು ತಿಂ... ವಿದ್ಯಮಾನಗಳು ಭಾರತವು ಭವಿಷ್ಯದಲ್ಲಿ ಸಾಗಬೇಕಿ... ದಿಕ್ಕಿನ ಕುರಿತು ಭರವಸೆಯನ್ನು ಮೂಡಿಸುತ್ತಿದೆ.









ಕನ್ಹಯ್ಯ ಮತ್ತು ಉಮರ್ ಎಂಬ ನನ್ನ ಪುತ್ರರು




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಹೈದರಾಬಾದ್ ಮುಕ್ತ ವಿಶ್ವವಿದ್ಯಾಲಯದಲ್ಲಿ
ೀಹಿತ್ ವೇಮುಲ ಎಂಬ ದಲಿತ ವಿದ್ಯಾರ್ಥಿ
ಹತ್ಯೆಗೆ ಶರಣಾದಾಗ ನಾನು ಫೇಸ್‌ಬುಕ್ ಎಂಬ
ಲತಾಣದಲ್ಲಿ 'ನಿರ್ಭಯ ಭಾರತದ ಮಗಳು,
ಗೆಯೇ ರೋಹಿತ್ ವೇಮುಲ ಭಾರತದ ಮಗ'
ದು ಬರೆದಿದ್ದೆ. ಅರ್ಥಾತ್ ಅವರಿಬ್ಬರೂ
ರತದ ಎಲ್ಲರ ಮಕ್ಕಳು - ನನ್ನ ಮಗಳು ಮತ್ತು
ಗ ಕೂಡ - ಎಂಬುದು. ಈಗ, ನಮ್ಮ ಮತ್ತು
ಮ್ಮ ಈ ಪತ್ರಿಕೆಯಲ್ಲಿ, 'ಕನ್ಹಯ್ಯ ಮತ್ತು ಉಮರ್
ಬ ನನ್ನ ಪುತ್ರರು' ಎನ್ನುತ್ತಿದ್ದೇನೆ. ಯಾಕೆಂದರೆ,
ಗೊಮ್ಮೆ ನನಗೆ ಪುತ್ರರು ಇದ್ದಿದ್ದರೆ ಸತ್ಯವಾಗಲು
ರು ಈ ಕನ್ಹಯ್ಯ ಮತ್ತು ಉಮರ್ ತರಹವೇ
ಬೇಕಿತ್ತು ಎನಿಸುತ್ತಿದೆ. ಹೀಗನ್ನಿಸುತ್ತಿರುವುದು
ನ್ನೊಬ್ಬಳಿಗೇ ಅಲ್ಲ. ನನ್ನ ಮಿತ್ರ ಗಿರೀಶ್ ನಿಕ್ಕಮ್
ಡ "ನನಗೆ ಮಕ್ಕಳಿಲ್ಲ. ಇದ್ದಿದ್ದರೆ ನನ್ನ ಮಗ
ಥವಾ ಮಗಳು ಈ ಕನ್ಹಯ್ಯನಂತಿದ್ದರೆ ನನಗೆ
ತೋಷವಾಗುತ್ತಿತ್ತು" ಎಂದು ಕಾಮೆಂಟ್
ಾಡಿದ್ದಾನೆ. ಜೊತೆಗೆ ದೆಹಲಿ ವಿಶ್ವವಿದ್ಯಾಲಯದಲ್ಲಿ
ದಿ ಅಧ್ಯಾಪಕರಾಗಿರುವ ಅಪೂರ್ವಾನಂದ್
ಬುವವರು 'ಉಮರ್ ಖಾಲಿದ್, ನನ್ನ ಪುತ್ರ'
ಬ ಲೇಖನವನ್ನೇ ಬರೆದಿದ್ದಾರೆ.

ನಮ್ಮೆಲ್ಲರಿಗೆ ಯಾಕೆ ಈ ಇಬ್ಬರು ಯುವಕರ
ಗ್ಗೆ ಹೀಗನ್ನಿಸುತ್ತಿದೆ? ಅಪೂರ್ವಾನಂದರ ಲೇಖನದ





ುಖ್ಯಾಂಶಗಳು ಹೀಗಿವೆ:

'ಉಮರ್ ನನ್ನ ಮಗ' ಎಂದು ಹೇಳಲು
ಇಷ್ಟಪಡುತ್ತೇನೆ. ನಾನು ಅವನನ್ನೆಂದೂ ಭೇಟಿ
ಗಿಲ್ಲ, ಅವನ ಪರಿಚಯವೂ ನನಗಿಲ್ಲ. ಆದರೂ
ತ ನನ್ನ ಮಗ ಎಂದು ಹೇಳಲು ಇಷ್ಟಪಡುತ್ತೇನೆ.
ನಗೆ ಗಂಡು ಮಕ್ಕಳಿಲ್ಲ, ನನಗಿರುವವಳು ಒಬ್ಬಳೇ
ಹೆಣ್ಣುಮಗಳು. ಆಕೆ ಈಗಿನ್ನೂ ಸ್ವತಂತ್ರವಾಗಿ
ಯೋಚಿಸುವ ಶಕ್ತಿಯನ್ನು ಪಡೆಯುವ
ುವತಿಯಾಗುವ ಹಂತದಲ್ಲಿದ್ದಾಳೆ. ಆದರೆ
ಉಮರ್ ಆ ಹಂತವನ್ನು ಮೀರಿ ಬೆಳೆದಿದ್ದಾನೆ. ಈಗ
ಈಗಿನ್ನೂ ಸ್ವತಂತ್ರವಾಗಿ ಯೋಚಿಸುವ ಬುದ್ಧಿಯನ್ನು
ಹೊಂದಿದ್ದಾನೆ. ಜೊತೆಗೆ ಆತನ ಹೃದಯವು ಈ
ಭೂಮಿಯ ಮೇಲೆ ಶೋಷಣೆಗೆ
ಳಗಾಗಿರುವವರಿಗೆ ಮಿಡಿಯುತ್ತದೆ, ಅಂಥವರಿಗೆ
ಾಗುವ ಅನ್ಯಾಯಗಳ ವಿರುದ್ಧ ಕೋಪದಿಂದ
ುದಿಯುತ್ತದೆ, ಸಮಾನತೆಗಾಗಿ ಕಣ್ಣೀರಿಡುತ್ತದೆ.

ಪ್ರತಿ ತಂದೆ ಮತ್ತು ತಾಯಿ ಆಶಿಸುವ ಮತ್ತು
ಹೆಮ್ಮೆಪಡುವಂತಹ ಮಗ ಉಮರ್. ಯಾಕೆಂದರೆ
ಆತ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ,
ತಂದೆತಾಯಂದಿರ ವಿರುದ್ಧವೇ ಬಂಡಾಯವೇಳುವ
ಧೈರ್ಯವನ್ನು ಹೊಂದಿದ್ದಾನೆ, ತನ್ನ ಸಂಸಾರ,
ಸಮುದಾಯ ಮತ್ತು ಧರ್ಮ ತನ್ನ ಸುತ್ತ
ಸ್ಥಾಪಿಸಿರುವ ಪಂಜರವನ್ನು ಸೀಳಿ ಹೊರಬರುವ
ಸಾಮರ್ಥ್ಯವನ್ನು ಹೊಂದಿದ್ದಾನೆ, ಇತರರಂತೆ
ಕಟ್ಟುಪಾಡುಗಳನ್ನು ಮೀರಲು ಹೆದರದೆ ತನ್ನ
ಮಾನವೀಯತೆಯನ್ನು ಸಾಬೀತುಪಡಿಸಲು
ಯತ್ನಿಸುತ್ತಾನೆ.

ಉಮರ್‌ನಂತಲ್ಲದೆ ನಮ್ಮ ಯುವಜನತೆ
ಹೇಗಿರಬೇಕು? ಕೇವಲ ವಿಧೇಯರಾದ,
ಸಂಪ್ರದಾಯಿಗಳಾದ ಯುವಜನತೆಯನ್ನು
ಹೊಂದಿರುವ ದೇಶ ನಿಜಕ್ಕೂ ದುರ್ದೈವಿ ದೇಶ.
ೆ ತುಂಬ ಸಂಬಳ ಸಿಗುವ ಕೆಲಸಕ್ಕಾಗಿ
ಹಾತೊರೆಯುವ, ಆಡಳಿತಾಂಗದ ಚಕ್ರದಲ್ಲಿ
ಹಲ್ಲುಗಳಾಗಲು ಕಾತರರಾಗಿರುವ, ಇತರೆ
ಮಾನವಕುಲವನ್ನೇ ದಮನ ಮಾಡಿ ಲಾಭವನ್ನು
ಲೆಕ್ಕಹಾಕಲು ಸಜ್ಜಾಗಿರುವ ಯುವಜನತೆಯನ್ನು
ಮಾತ್ರ ಪಡೆದಿರುವ ದೇಶ ನತದೃಷ್ಟ ದೇಶ.

ಆದರೆ ಇವತ್ತು ಹೀಗೆ ತನ್ನ ಖಾಸಗಿ ಸುಖಕ್ಕೆ
ತನ್ನ ಆತ್ಮವನ್ನೇ ಮಾರಿಕೊಂಡಿರುವ ಯುವಜನತೆ
ಫೇಸ್‌ಬುಕ್ ಮತ್ತು ಟ್ವಿಟ್ಟರ್‌ನಂತಹ
ಜಾಲತಾಣಗಳಲ್ಲಿ ದೇಶಪ್ರೇಮದ ಬಗ್ಗೆ 'ಕ್ಲಿಕ್'
ಮಾಡುತ್ತಾ ಕೂತಿದ್ದಾರೆ. ಯಾಕೆಂದರೆ ಉಮರ್
ಅವರಂತಾಗಲು ನಿರಾಕರಿಸಿದ ಎಂಬ ಕೋಪ
ಅವರಿಗೆ.

ಉಮರ್ ಎಂಬುದು ಉಮರ್‌ನ ಹೆಸರಷ್ಟೇ
ಹೊರತು ಆತ ಮುಸಲ್ಮಾನನಲ್ಲ. ಆತನ ತಂದೆ
ಮತ್ತು ಕುಟುಂಬದವರು ಸಂಪ್ರದಾಯಸ್ಥ
ಮುಸಲ್ಮಾನರು. ಅವನ ತಂದೆ ಹಿಂದೊಮ್ಮೆ
ಸಿಮಿಯ ಸದಸ್ಯರಾಗಿದ್ದವರು. ಆದರೆ ಉಮರ್ ತನ್ನ
ತಂದೆಗಿಂತ ವಿಭಿನ್ನ ಮಾರ್ಗ ಹಿಡಿಯಲು
ನಿರ್ಧರಿಸಿದ. ಯಾಕೆಂದರೆ ಕೇವಲ ಮುಸಲ್ಮಾನ
ಸಮುದಾಯದ ಬಗ್ಗೆ ಮಾತನಾಡುವ ಸಿಮಿಯ
ರಾಜಕಾರಣ ಆತನಿಗೆ ಬೇಕಿರಲಿಲ್ಲ. ಆತ ತನ್ನ
ಸಂಸಾರದ ಮಾರ್ಗವನ್ನು ತಿರಸ್ಕರಿಸಿ ನಾಸ್ತಿಕನಾದ
ಮತ್ತು ಕಟ್ಟರ್ ಎಡಪಂಥೀಯನಾದ. ಆತ ಆಯ್ಕೆ
ಮಾಡಿಕೊಂಡ ಸಂಘಟನೆಯು ದಲಿತರ ಹಕ್ಕುಗಳ
ಬಗ್ಗೆ ಮತ್ತು ಲಿಂಗತಾರತಮ್ಯದ ಬಗ್ಗೆ ಸರಿಯಾದ
ನಿಲುವುಗಳನ್ನು ತೆಗೆದುಕೊಳ್ಳಲಿಲ್ಲ ಎಂದು ಅದಕ್ಕೂ
ರಾಜೀನಾಮೆ ಕೊಟ್ಟು ಹೊರಬಂದ.

ಒಬ್ಬ ಬಂಡಾಯಗಾರನ ಪ್ರೀತಿಯ ಹಿಂದೆ
ಸಕಾರಣಗಳಿರುತ್ತವೆ. ಅವು ವೈಯಕ್ತಿಕ ಕಾರಣಗಳಲ್ಲ,
ತನಗೆ ವ್ಯಕ್ತಿಗತವಾಗಿ ಗೊತ್ತಿಲ್ಲದಿರುವವರಿಗೂ
ಎಲ್ಲೋ ಯಾರಿಗೋ ಅನ್ಯಾಯವಾದರೆ, ಹಿಂಸೆ
ಆದರೆ, ಐತಿಹಾಸಿಕವಾಗಿ ಅನ್ಯಾಯವಾದರೆ
ಅವರೆಲ್ಲರಿಗೂ ಮಿಡಿಯುವ ಮನಸ್ಸು
ಬಂಡಾಯಗಾರನದ್ದು. ಕಾಮು ಅವರು ಇಂತಹ
ಪ್ರೀತಿಯನ್ನು 'ವಿಚಿತ್ರ ಪ್ರೀತಿ' ಎಂದು ಕರೆದಿದ್ದರು.
ಈ ಪ್ರೀತಿಯ ಹಿಂದೆ ಲೆಕ್ಕಾಚಾರಗಳಿರುವುದಿಲ್ಲ,
ಇದರ ಹಿಂದೆ ಅನುಮಾನಗಳಿರುವುದಿಲ್ಲ. ಇಂತಹ
ಪ್ರೀತಿಯಿಂದ ತುಂಬಿರುವ ಬಂಡಾಯಗಾರ ತನ್ನ
ಭವಿಷ್ಯದ ಬಗ್ಗೆ ಚಿಂತಿಸುವುದಿಲ್ಲ. ತತ್ತ್ವಜ್ಞಾನಿಗಳು
ಮನುಷ್ಯರು ಮಾತ್ರ ಭವಿಷ್ಯದ ಬಗ್ಗೆ ಚಿಂತಿಸುತ್ತಾರೆ
ಎನ್ನುತ್ತಾರೆ. ಆದರೆ ಬಂಡಾಯಗಾರ ತನ್ನ
ಭವಿಷ್ಯಕ್ಕಾಗಿ ಯೋಜನೆಗಳನ್ನು ಹಾಕಿಕೊಂಡು
ಅದಕ್ಕಾಗಿ ಬದುಕುವುದಿಲ್ಲ. ಆತ ಈಗಿನ
ಅಗತ್ಯತೆಗಳಿಗೆ, ಈಗಿನ ಮಾನವಕುಲಕ್ಕೆ ತನ್ನೆಲ್ಲವನ್ನು
ಮುಡುಪಾಗಿಡುತ್ತಾನೆ. ಕಾಮು ಹೇಳುತ್ತಾರೆ 'ನಾವು
ಈಗಿನ ಅಗತ್ಯತೆಗಳಿಗೆ ನಮ್ಮೆಲ್ಲದನ್ನು ಅರ್ಪಿಸುವ
ಮೂಲಕ ಭವಿಷ್ಯಕ್ಕೆ ನಾವು ಅಪಾರವಾದ
ಕೊಡುಗೆಯನ್ನು ನೀಡುತ್ತೇವೆ.'

ಬೇಕಿದ್ದರೆ ಉಮರ್ ಯಾವುದೋ
ಸುರಕ್ಷಿತವಾದ ಭವಿಷ್ಯವನ್ನು ಆಯ್ದುಕೊಳ್ಳಬಹುದಿತ್ತು,
ಹಾಗೆ ಮಾಡುವ ಮೂಲಕ ತಾನು ತನ್ನ
ಸಿದ್ಧಾಂತವನ್ನು ಬೆಂಬಲಿಸುತ್ತಿದ್ದೇನೆ ಎಂದು
ವಾದಿಸಬಹುದಿತ್ತು, ಆದರೆ ಆತ ಆ ಸುರಕ್ಷತೆಯ
ಬದಲಾಗಿ ಅಸುರಕ್ಷತೆಯನ್ನು ಆಯ್ಕೆ
ಮಾಡಿಕೊಂಡಿದ್ದಾನೆ.

ಉಮರ್ ತನ್ನನ್ನು ಯಾವುದೇ ಗಡಿಗಳಿಲ್ಲದ
ಮಾನವ ಎಂದು ನಂಬಿದ್ದಾನೆ. ಆತನಿಗೆ
ರಾಷ್ಟ್ರೀಯವಾದದ ಬಂಧನ ಬೇಕಿಲ್ಲ. ಆತ ನಮಗೆ
ರೇಶೆಲ್ ಕೊರಿ ಎಂಬ ಅಮೆರಿಕನ್ ಯುವತಿಯನ್ನು
ನೆನಪಿಸುತ್ತಾನೆ. ಅಮೆರಿಕದಲ್ಲಿರುವ ಕೊಲಂಬಿಯಾದ
ನಿವಾಸಿಯಾಗಿದ್ದ ರೇಶೆಲ್ ಸಾಗರಗಳನ್ನು ದಾಟಿ
ಇಸ್ರೇಲಿಗೆ ಹೋಗಿ, ಇಸ್ರೇಲಿನ ಸೈನ್ಯದ
ಟ್ಯಾಂಕರ್‌ಗಳು ಪ್ಯಾಲಸ್ತೇನಿಯರ ಮನೆಗಳನ್ನು ಧ್ವಂಸ
ಮಾಡಲು ಮುಂದಾದಾಗ ಅಡ್ಡ ನಿಂತಳು. ಇಸ್ರೇಲಿ
ಟ್ಯಾಂಕರ್‌ಗಳು ರೇಶಲ್ ತಮ್ಮ ಮಿತ್ರ ದೇಶದ ಪ್ರಜೆ
ಎನ್ನುವುದನ್ನೂ ಲೆಕ್ಕಿಸದೆ ಆಕೆಯನ್ನು
ಕೊಂದುಹಾಕಿದವು. ನಾವು ಅದೆಷ್ಟೇ ಭಯಪಟ್ಟರೂ
ನಮ್ಮ ಲೌಕಿಕ ಪ್ರಪಂಚವನ್ನು ಮತ್ತು ರಾಷ್ಟ್ರೀಯ
ಇರುವಿಕೆಯನ್ನು ಶುದ್ಧೀಕರಿಸಲು ನಮಗೆ ಉಮರ್
ಮತ್ತು ರೇಶೆಲ್ ತರಹದ ಇನ್ನೂ ಹೆಚ್ಚಿನ
ಯುವಜನತೆಯ ಅವಶ್ಯಕತೆ ಇದೆ.

ಉಮರ್ ಈಗ ವಾಪಸ್ ಬಂದು
ಜೆಎನ್‌ಯುನಲ್ಲಿ ತನ್ನ ಮಿತ್ರರೊಂದಿಗಿದ್ದಾನೆ.
ಆತ ಹೇಳಿದ್ದನ್ನು ನೀವೆಲ್ಲ ಕೇಳಿದ್ದೀರಿ. ಆತ
ಹೇಡಿಯಲ್ಲ. ಬದಲಾಗಿ ಉದ್ರಿಕ್ತಗೊಂಡಿರುವ
ದೇಶವನ್ನೇ ಎದುರಿಸಲು ಮುಂದಾಗಿರುವ
ಧೈರ್ಯಶಾಲಿ. ಆದರೆ ಪ್ರಶ್ನೆ ಏನೆಂದರೆ
ಅವನೊಂದಿಗೆ ಕಣ್ಣಿಗೆ ಕಣ್ಣಿಟ್ಟು ನೋಡುವ
ಧೈರ್ಯ ನಮ್ಮ ದೇಶದವರಿಗೆ
ಇದೆಯೇ? ಕಳೆದ ಹತ್ತು
ದಿನಗಳಿಂದ ಅಂತರ್‌ಜಾಲದಲ್ಲಿ
ಆತನನ್ನು ಅಪಮಾನಿಸಿ
ಗಲ್ಲಿಗೇರಿಸಿದ ಜನರಿಗೆ ಆ
ಧೈರ್ಯವಿದೆಯೇ?

ಉಮರ್, ಕನ್ಹಯ್ಯ ಮತ್ತು
ಅವರ ಮಿತ್ರರು ಇವತ್ತು
ಭಾರತೀಯರ 'ದೇಶಪ್ರೇಮ'ಕ್ಕೆ
ತಮ್ಮ ರಕ್ತವನ್ನೇ ಅರ್ಪಿಸಿ ತಮ್ಮ
ಪ್ರಾಣವನ್ನು ಉಳಿಸಿಕೊಳ್ಳುವ ಸ್ಥಿತಿ
ನಿರ್ಮಾಣವಾಗಿದೆ. ನಮಗೆ
ಅಂತಃಸಾಕ್ಷಿ ಏಂಬುದು ಇದ್ದರೆ
ನಾವೆಲ್ಲ ಇವರಿಬ್ಬರನ್ನು
ನಮ್ಮವರನ್ನಾಗಿಸಿಕೊಳ್ಳಬೇಕಿದೆ.

ಉಮರ್ ಮತ್ತು ಕನ್ಹಯ್ಯ ತರಹದವರು
ಹಾಕಿದ ಸವಾಲುಗಳನ್ನು ಸಹಿಸದ, ಅವರು ಕೇಳುವ
ಪ್ರಶ್ನೆಗಳಿಗೆ ಉತ್ತರಿಸದೆ ಶಿಕ್ಷಿಸುವ, ಅವರೊಂದಿಗೆ
ನಿಲ್ಲದ ದೇಶ ನಾಶವಾಗುತ್ತದೆ. ಅಂತಹ ದೇಶಕ್ಕೆ
ನಾವು ನಮ್ಮ ಉಮರ್‌ಗಳನ್ನು ಬಲಿಕೊಡದಿರೋಣ.
ನಾವು ಅವರಿಂದ ದೂರ ಆಗದಿರೋಣ. ನಾವು
ನಮ್ಮ ಮಕ್ಕಳನ್ನು ಕೊಲೆ ಮಾಡದಿರೋಣ.'

ಅಪೂರ್ವಾನಂದರ ಈ ಲೇಖನ
ಅರ್ಥಗರ್ಭಿತವಾಗಿರುವುದರಿಂದ ಅದರ ಭಾಗಗಳನ್ನು
ಆಯ್ದು ಇಲ್ಲಿ ಕೊಟ್ಟಿದ್ದೇನೆ.


ನನ್ನ ಪ್ರಕಾರ ರೋಹಿತ್, ಕನ್ಹಯ್ಯ ಮತ್ತು
ಉಮರ್ ಈ ದೇಶದ ಎಚ್ಚೆತ್ತ ಯುವಪೀಳಿಗೆಯ
ಪ್ರತಿನಿಧಿಗಳು. ಆದರೆ ಈ ಎಚ್ಚೆತ್ತ
ಯುವಜನತೆಯನ್ನು ಮಟ್ಟಹಾಕಲು ಮನುವಾದಿಗಳು
ಎಂದಿನಂತೆ ಸಜ್ಜಾಗಿ ನಿಂತಿದ್ದಾರೆ. ಅದನ್ನು ಸಾಧಿಸಲು
ಅವರ ಕೈಗಳಲ್ಲಿ ಭಗವದ್ಗೀತೆ ಇದೆ, ಮನಸ್ಸಿನಲ್ಲಿ
ಜಾತಿವ್ಯವಸ್ಥೆ ಇದೆ, ಮಿದುಳನ್ನು ಆರೆಸ್ಸೆಸ್
ಆಕ್ರಮಿಸಿಕೊಂಡಿದೆ. ಜೊತೆಗೆ ಅವರ ಕಾಲುಗಳಡಿ
ಪೆದ್ದು ಶಿಖಾಮಣಿಗಳಾದ- ಸಾಕ್ಷರಿಗಳಾದರೂ ಬುದ್ಧಿ
ಬೆಳೆಸಿಕೊಂಡಿಲ್ಲದ- ಶೂದ್ರ ಸಮೂಹ ದೊಡ್ಡ
ಸೈನ್ಯದಂತೆ ನಿಂತಿದೆ. ಆ ಸಮೂಹವೇ ರೋಹಿತ್
ವೇಮುಲನನ್ನು ಅಸಹಾಯಕನನ್ನಾಗಿಸಿ ಆತ್ಮಹತ್ಯೆಗೆ
ದೂಡಿದ್ದು. ಆದರೆ ಕನ್ಹಯ್ಯ ಮತ್ತು ಉಮರ್
ದೇಶದಾದ್ಯಂತ ಸಾವಿರಾರು ವಿದ್ಯಾರ್ಥಿಗಳ ಜೊತೆ
ನಿಂತು ಇನ್ನು ಮುಂದೆ 'ರೋಹಿತ್‌ನಂತೆ
ಆತ್ಮಹತ್ಯೆಗಳಾಗಲು ಬಿಡುವುದಿಲ್ಲ' ಎಂದು
ಪಣತೊಟ್ಟರಲ್ಲದೆ ಆತನ ಹೋರಾಟವನ್ನೂ
ತಮ್ಮದಾಗಿಸಿಕೊಂಡು ಮುಂದುವರೆದಿದ್ದಾರೆ.

ಕನ್ಹಯ್ಯ 'ಆಜಾದಿ'(ಸ್ವಾತಂತ್ರ್ಯ)ಯನ್ನು
ಕೇಳಿದ್ದಾದರೂ ಯಾವುದರಿಂದ? ಅವತ್ತು
ಜೆಎನ್‌ಯು ಆವರಣದಲ್ಲಿ ನಿಂತ ಕನ್ಹಯ್ಯ (ಅವತ್ತು
ಆತನ ಬೆನ್ನಿಗೆ ನಿಂತದ್ದೂ ಇದೇ ಉಮರ್) ಸ್ವಾತಂತ್ರ್ಯ
ಬೇಕು ಎಂದಿದ್ದು ಆರೆಸ್ಸೆಸ್‌ನಿಂದ,
ಮತೀಯವಾದದಿಂದ,
ಜಾತಿವ್ಯವಸ್ಥೆಯಿಂದ,
ಮನುವಾದದಿಂದ, ಅನ್ಯಾಯದಿಂದ,
ಬಂಡವಾಳಶಾಹಿಯಿಂದ,
ದಮನದಿಂದ..... ಹೀಗೆ ನಮ್ಮ
ಸಮಾಜವನ್ನು ಕಿತ್ತು ತಿನ್ನುತ್ತಿರುವ
ಹಲವಾರು ಸಾಮಾಜಿಕ ಪಿಡುಗುಗಳಿಂದ
ಆತ ಸ್ವಾತಂತ್ರ್ಯ ಕೇಳಿದ್ದು, ಅದನ್ನು
ಕೊಡದಿದ್ದರೆ ಕಿತ್ತುಕೊಳ್ಳುತ್ತೇವೆ ಎಂದು
ಘೋಷಿಸಿದ್ದು. ಇದು ಹೇಗೆ
ದೇಶದ್ರೋಹವಾಗುತ್ತದೆ? ಬದಲಾಗಿ
ಸಾಮಾಜಿಕ, ಆರ್ಥಿಕ, ಲೈಂಗಿಕ,
ರಾಜಕೀಯ ಪಿಡುಗುಗಳನ್ನು
ಪ್ರೋತ್ಸಾಹಿಸುತ್ತಿರುವವರು, ತಮ್ಮ
ಸ್ವಾರ್ಥಕ್ಕೆ ಗುರಾಣೀ
ಆಗಿಸಿಕೊಂಡಿರುವವರು ದೇಶದ್ರೋಹಿಗಳು
ಅಲ್ಲವೆ?


ಇನ್ನು ಉಮರ್ ಅಜ್ಞಾತವಾಸದಿಂದ
ಹೊರಬಂದು ಹೇಳಿದ್ದೂ ಮುಖ್ಯವಾಗಿದೆ.
"ನಮ್ಮನ್ನು ಹೆದರಿಸಲು ಅವರು ಯತ್ನಿಸುತ್ತಿದ್ದಾರೆ.
ಆದರೆ ನಾವು ಹೆದರುವುದಿಲ್ಲ. ನಾವು ಯೋಚಿಸಿದರೆ
ಅವರಿಗೆ ಭಯವಾಗುತ್ತದೆ. ಆದರೆ ನಾವು
ಯೋಚಿಸುವುದನ್ನು, ಪ್ರಶ್ನಿಸುವುದನ್ನು ನಿಲ್ಲಿಸುವುದಿಲ್ಲ.
ನಾವು ನಮ್ಮ ವಿಶ್ವವಿದ್ಯಾಲಯಗಳಲ್ಲಿ ರೋಹಿತ್
ವೇಮುಲನ ಆತ್ಮಹತ್ಯೆ ಆದಂತೆ ಇನ್ನೊಂದು ಸಾವು
ಸಂಭವಿಸಲು ಬಿಡುವುದಿಲ್ಲ. ನಾವು ಯಾವ ಜಾತಿ,
ಧರ್ಮ, ರಾಷ್ಟ್ರದ ಗಡಿಗಳಿಗೆ
ಸೀಮಿತವಾಗಿರುವುದಿಲ್ಲ" ಎಂದು ಉಮರ್
ಹೇಳಿದ್ದು ಮೈನವಿರೇಳಿಸುವಂತಿತ್ತು ಮಾತ್ರವಲ್ಲ, ಆ
ಯುವಕನ ಕನಸುಗಳ ಅಭಿವ್ಯಕ್ತಿಯಂತಿತ್ತು. ಇವತ್ತು
ಕೂಡ ನ್ಯಾಯಾಲಯದ ಮುಂದೆ ಅಫ್ಜಲ್ ಗುರುವಿಗೆ
ಅನ್ಯಾಯವಾಗಿದ್ದರ ಬಗ್ಗೆ ತಾನು ವಿವಿಯಲ್ಲಿ
ಮಾತನಾಡಿದ್ದು ನಿಜ ಎಂದು ಹೇಳುವ ಕೆಚ್ಚೆದೆಯನ್ನು
ತೋರಿದ್ದಾನೆ ಈ ಬಡಕಲು ದೇಹದ ಉಮರ್!


ರೋಹಿತ್, ಕನ್ಹಯ್ಯ ಮತ್ತು ಉಮರ್ ಇವತ್ತು
ಅಂಬೇಡ್ಕರ್ ಮತ್ತು ಮಾರ್ಕ್ಸ್ ಪ್ರತಿಪಾದಿಸಿದ
ಸಮಾನತಾವಾದವನ್ನು ಎತ್ತಿಹಿಡಿದಿರುವ ಯುವಕರು.
ರೋಹಿತ್ ಈಗ ದೈಹಿಕವಾಗಿ ಇಲ್ಲದಿದ್ದರೂ ನಮ್ಮ
ಯುವಜನತೆಯಲ್ಲಿ ಜೀವಂತವಾಗಿರುವ ಚೇತನ. ಈ
ಮೂವರೂ ಯುವಕರು ಸಾಮಾನ್ಯರಲ್ಲ. ಅವರೆಲ್ಲರೂ
ಪ್ರತಿಭಾವಂತರು, ಸೂಕ್ಷ್ಮ ಮನಸ್ಸಿನವರು,
ಉತ್ಸಾಹದಿಂದ ತುಂಬಿರುವವರು, ಸಮಾಜದ ಬಗ್ಗೆ
ಅಪಾರ ಕಾಳಜಿಯನ್ನು ಹೊಂದಿರುವವರು,
ಅನ್ಯಾಯದ ವಿರುದ್ಧ ದನಿ ಎತ್ತುವ ಸಾಮರ್ಥ್ಯ
ಉಳ್ಳವರು, ನಮ್ಮ ಸಮಾಜದ ಬಗ್ಗೆ ಅಪಾರ ಕಳಕಳಿ
ಹೊಂದಿರುವವರು.


ಯಾರು ತಾನೆ ಇಂತಹ ಯುವಕರನ್ನು ತಮ್ಮ
ಮಕ್ಕಳು ಎಂದು ಹೆಮ್ಮೆಯಿಂದ
ಘೋಷಿಸುವುದಿಲ್ಲ... ಕೊಳಕು ಮನಸ್ಸಿನ ಚಡ್ಡಿಗಳ
ಹೊರತಾಗಿ?! ●



















ಕರಾವಳಿ

ದಕ್ಷಿಣದಲ್ಲಿ ದಿಕ್ಕೆಡಿಸುವ ಕೇಸರಿ ಉತ್ತರದಲ್ಲಿ ಉಪದ್ರವಿ ಸರ್ವಾಧಿಕಾರಿ








ಕರಾವಳಿಯ ಮೂರು ಜಿಲ್ಲೆಗಳ ಪಂಚಾಯ್ತಿ ಫೈಟಿಂಗ್‌ನಲ್ಲಿ ಎರಡು ನಮೂನೆಯ ಬೆಚ್ಚಿಬೀಳಿಸುವ ಫಲಿತಾಂಶ ಬಂದಿದೆ. ದಕ್ಷಿಣ ಕರಾವಳಿಯ ಉಡುಪಿ ಹಾಗು ದಕ್ಷಿಣ ಕನ್ನಡದಲ್ಲಿ ಕಂಗೆಡಿಸುವ ಕೇಸರಿ ಪಡೆಯ ಅಟ್ಟಹಾಸ ಮತ್ತೆ ಮಾರ್ದನಿಸಿದೆ! ಮನುಷ್ಯತ್ವ ವಿರೋಧಿ ಹಿಂದೂತ್ವದ ಹಿಂದು ಅನಿರೀಕ್ಷಿತವಾದ ದಿಗ್ವಿಜಯವನ್ನೇ ಮಾಡಿದೆ. ಅತ್ತ ಉತ್ತರ ಕರಾವಳಿಯ ಕಾರವಾರ ಜಿಲ್ಲೆಯಲ್ಲಿ ಹಿಟ್ಲರ್‌ಶಾಹಿ ದೇಶಪಾಂಡೆ ಪಂಚಾಯ್ತಿಯೇ ಪುನಃ ಪಾರುಪತ್ಯಕ್ಕೆ ಬಂದಿದೆ. ದಕ್ಷಿಣದಲ್ಲಿ ಬಿಜೆಪಿ ಯಾವುದೇ ಜನಪರ-ಅಭಿವೃದ್ಧಿ ಅಸ್ತ್ರಗಳಿಲ್ಲದೆ ಬರೀ ಹಿಂದೂತ್ವದ ಹೆದರಿಕೆ ಹುಟ್ಟಿಸಿ ಗೆದ್ದಂತೆಯೇ ಉತ್ತರದಲ್ಲಿ ದೇಶಪಾಂಡೆಯ ಪಾಳೆಗಾರಿಕೆಯ ದಾದಾಗಿರಿಯಿಂದ ಕಾಂಗ್ರೆಸ್ ಗೆದ್ದಿದೆ.

ಕಾಂಗ್ರೆಸ್ ಹಾಗು ಬಿಜೆಪಿ ಸಮಬಲದಲ್ಲಿರುವ ಭ್ರಮೆ ದಕ್ಷಿಣ ಕರಾವಳಿಯ ಅಖಾಡ ಮೂಡಿಸಿತ್ತು. ಆದರೆ ಹಿಂದೂತ್ವದ ಹೊಗೆ ಮತ್ತು ಕಾಂಗ್ರೆಸ್ ಮಂತ್ರಿ-ಶಾಸಕರ ಬಗೆಗಿನ ಅಸಮಾಧಾನ ಗುಪ್ತಗಾಮಿನಿಯಾಗಿ ಹರಿಯುತ್ತಿರುವುದು ಬಿಜೆಪಿ ಡಾನ್‌ಗಳಿಗೇ ಗೊತ್ತಾಗಿರಲಿಲ್ಲ. ಕಾಂಗ್ರೆಸ್‌ನ ಆಸ್ಕರ್, ಆತನ ನಿರ್ವಂಡಿ ಸೇನೆಯ ಸೇನಾಧಿಪತಿಗಳಾದ ರಮಾನಾಥ್ ರೈ, ವಿನಯಕುಮಾರ್ ಸೊರಕೆ, ಯು.ಟಿ. ಖಾದರ್ ಮತ್ತು ಅಭಯ್ ಜೈನ್‌ರಂಥ ಹೇತ್ಲಾಂಡಿಗಳಿಗೆ ಚಡ್ಡಿಗಳ ವ್ಯವಸ್ಥಿತ-ರಹಸ್ಯ ಪ್ರಚಾರ ತಂತ್ರಕ್ಕೆ ಸರಿಯಾದ ಸ್ಟ್ರಾಟಜಿ ಹೆಣೆಯಲಿಕ್ಕೆ ಸಾಧ್ಯವೇ ಆಗಲಿಲ್ಲ. ದುಡ್ಡು ಕೊಟ್ಟು ಗೊಡ್ಡು ಕೋಣ ಪ್ರತಾಪಚಂದ್ರ ಶೆಟ್ಟಿಯನ್ನು ಗೆಲ್ಲಿಸಿದ ಹ್ಯಾಂಗೋವರ್‌ನಲ್ಲೇ ತೇಲಾಡಿದ ಆಸ್ಕರ್ ಗ್ಯಾಂಗಿಗೆ ಪಂಚಾಯ್ತಿ ಕದನದ ಪಟ್ಟುಗಳೇ ಕೊನೆವರೆಗೂ ಅರ್ಥವೇ ಆಗಿರಲಿಲ್ಲ!

ಅವಿಭಜಿತ ದಕ್ಷಿಣ ಕನ್ನಡವನ್ನು ಆಳುತ್ತಿರುವ ನಾಲ್ಕು ಮಂತ್ರಿಗಳಿಗೆ ತಂತಮ್ಮ ವಿಧಾನಸಭಾ ಕ್ಷೇತ್ರದಲ್ಲೇ ಮುಖ ಉಳಿಸಿಕೊಳ್ಳಲಾಗಿಲ್ಲ. ಇನ್ನು ಜಿಲ್ಲಾ ಮಟ್ಟದಲ್ಲಿ ಇವರೇನು ಸೆಣಸಾಡಿಯಾರು? ಕಾಂಗ್ರೆಸ್‌ನಲ್ಲಿ ಈ ಬಾರಿ ಭಿನ್ನಮತ-ಬಂಡಾಯವೇನೂ ಇರಲಿಲ್ಲ. ಆದರೆ ಬಿಜೆಪಿಯ ಕೇಸರಿ ಕರಾಮತ್ತಿಗೆ ಪ್ರತಿಯಾಗಿ ಸ್ಕೆಚ್ ಹಾಕುವ ತಾಕತ್ತು ಯಾವ ಮಂತ್ರಿ-ಶಾಸಕನಲ್ಲೂ ಇರಲಿಲ್ಲ. ಇದಕ್ಕೆ ಸಮಾನಾಂತರವಾಗಿ ಬಿಜೆಪಿ-ಭಜರಂಗಿ ತಂಡ ಯೋಜನಾಬದ್ಧವಾಗಿ ಮನೆ-ಮನೆ ಪ್ರಚಾರ ನಡೆಸಿತು. ರಾಜ್ಯ ಬಿಜೆಪಿ ಅಧ್ಯಕ್ಷನಾಗುವ ಆಸೆಯಲ್ಲಿ ಸಂಸದ ನಳಿನ್ ಡಾನ್ ಕಲ್ಲಡ್ಕನ ಬಗೆಗಿನ ಅಸಮಾಧಾನ ತೋರಿಸಿಕೊಳ್ಳದೇ ಪಕ್ಷನಿಷ್ಠೆಯಿಂದ ಕೆಲಸ









ಮಾಡಿದ್ದಾನೆ. ಬ್ಲೂಬಾಯ್ ಪಾಲೆಮಾರ್, ಕಚ್ಚೆಹರುಕ ರಘುಪತಿ ಭಟ್ಟ, ಕೇಂದ್ರ ಮಂತ್ರಿ ಸದಾನಂದ ಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಕುಂದಾಪುರದ ಹಾಲಾಡಿ ಶೆಟ್ಟಿ, ಸುಕುಮಾರ ಶೆಟ್ಟಿ, ಲಾಲಾಜಿ ಮೆಂಡನ್, ಸುನಿಲ್‌ಕುಮಾರ್... ವಗೈರೆಗಳು ಮುಂದೆ ಶಾಸಕ-ಸಂಸದರಾಗುವ ಲೆಕ್ಕಾಚಾರದಿಂದ ಜಿಪಂ-ತಾಪಂ ಕಾಳಗವನ್ನು ಕರಾರುವಾಕ್ಕಾಗಿ ಬಳಸಿಕೊಂಡರು. ಕಾಂಗ್ರೆಸ್‌ನ ಮಂತ್ರಿ-ಶಾಸಕರು ನಿಂತಲ್ಲೇ ಅಷ್ಟು ಕೋಟಿ ಅನುದಾನ ತಂದಿದ್ದೇನೆ, ಇಷ್ಟು ಲಕ್ಷದ ಅಭಿವೃದ್ಧಿ ಮಾಡಿದ್ದೇನೆ ಎಂದು ಬಿಡವಾತ ತೋರಿಸಿದರೆ, ಬಿಜೆಪಿಯವರು ಸದ್ದು ಮಾಡದೆ ಜನರಿಗೆ ಮಂಕುಬೂದಿ ಎರಚಿದರು.

ಎಲ್ಲಕ್ಕಿಂತ ಹೆಚ್ಚಾಗಿ ಕೆಲಸಕ್ಕೆ ಬಾರದ ಕಾಂಗ್ರೆಸ್ ಮಂತ್ರಿ-ಶಾಸಕರ ಬಗ್ಗೆ ದಕ್ಷಿಣ ಕರಾವಳಿ ಜನರಿಗೆ ಬೇಜಾರು-ಜಿಗುಪ್ಸೆ ಬರತೊಡಗಿದೆ. ಪಂಚಾಯ್ತಿ ಫಲಿತಾಂಶ ಇದನ್ನು ನಿಸ್ಸಂಶಯವಾಗಿ ಸಾಬೀತುಮಾಡಿದೆ. ತನ್ನ ಮುಖ ತೋರಿಸಿ ಒಂದೇ ಒಂದು ಮತ ತರಲಾಗದ ಆಸ್ಕರ್ ಫರ್ನಾಂಡಿಸ್ ತನ್ನಂಥದೇ ವೇಸ್ಟ್‌ಬಾಡಿ ಪ್ರತಾಪಚಂದ್ರ ಶೆಟ್ಟಿಯಂಥವರ ಬೆಳೆಸುತ್ತಿದ್ದಾರೆ. ಆಸ್ಕರ್ ತಂಡ ಜನಸಂಪರ್ಕದ ಜಯಪ್ರಕಾಶ್ ಹೆಗ್ಡೆಯನ್ನು ಪಕ್ಷದಿಂದ ಹೊರಹಾಕಿದೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಪ್ರತಾಪ್ ಬದಲಿ ಹೊಸ ಮುಖಕ್ಕೆ ಅವಕಾಶ ಕೊಟ್ಟಿದ್ದರೆ ಈಗಾದಷ್ಟು ಹೀನಾಯ ಸೋಲು ಕಾಂಗ್ರೆಸ್‌ಗೆ ಆಗುತ್ತಿರಲಿಲ್ಲ. ಪ್ರತಾಪ್‌ರಿಂದ ಕುಂದಾಪುರ ಭಾಗದಲ್ಲಿ ಎಷ್ಟು ಹಾನಿಯಾಗಿದೆಯೋ ಅಷ್ಟೇ ಜಖಮ್ ಜಯಪ್ರಕಾಶ್‌ರಿಂದ ಬ್ರಹ್ಮಾವರ ಭಾಗದಲ್ಲಿ ಕಾಂಗ್ರೆಸ್‌ಗೆ ಆಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿಯ ಹತ್ತು ಶಾಸಕರಲ್ಲಿ ಒಂಚೂರು ಮಾನ ಉಳಿಸಿಕೊಂಡವರೆಂದರೆ, ಬೆಳ್ತಂಗಡಿಯ ವಸಂತ ಬಂಗೇರಾ ಮತ್ತು ಪುತ್ತೂರಿನ ಶಕುಂತಲಾ ಶೆಟ್ಟಿ ಇಬ್ಬರೇ. ಬಂಟ್ವಾಳದಲ್ಲಿ ರಮಾನಾಥ ರೈ ಬಿಜೆಪಿಗಿಂತ ಒಂದು ಸ್ಥಾನ ಹೆಚ್ಚು ಪಡೆದಿದ್ದಾರಾದರೂ ಇದು ಮಂತ್ರಿಗಿರಿಗೆ ಅಪಮಾನವೇ! ಖಾದರ್ ಭಾಯ್ ಬಣ್ಣವೂ ಮಸುಕಾಗಿದೆ. ಮೊಯ್ದೀನ್ ಬಾವಾ ಸುರತ್ಕಲ್ ಏರಿಯಾದಲ್ಲಿ ಬರ್ಬಾದ್ ಆಗಿದ್ದಾರೆ. ಸುಳ್ಯದಲ್ಲಿ ಕಾಂಗ್ರೆಸ್ ಖಾಲಿಯಾಗಿದೆ! ಅವರ ಮೈಮೇಲೆ ಏರಿಹೋಗುವ ಸೊಕ್ಕಿನ ಸಚಿವ ಅಭಯಚಂದ್ರ ಜೈನ್‌ಗೆ ಮೂಡಬಿದಿರೆಯ ಜನ ಮುಖಮೂತಿ ನೋಡದೆ ಚಚ್ಚಿದ್ದಾರೆ. ಅಲ್ಲಿ ಆತನ ಸಾಧನೆ ಸೊನ್ನೆ. ಇಂತಹ ಅನಾಹುತಕಾರಿಗಳಿಂದಾಗಿಯೇ ಕಾಂಗ್ರೆಸ್ ದಕ್ಷಿಣ ಕನ್ನಡದಲ್ಲಿ ಐರಾಣಾಗಿ ಹೋಗಿದೆ. ಒಟ್ಟೂ 36 ಕ್ಷೇತ್ರದಲ್ಲಿ ಸೆಣಸಾಡಿದ ಕಾಂಗ್ರೆಸಿಗರು ಅಲ್ಲೊಂದು, ಇಲ್ಲೊಂದು ಸ್ಥಾನ ಗೆಲ್ಲುತ್ತ 15 ತಲುಪುವಷ್ಟರಲ್ಲೇ ಸುಸ್ತಾಗಿ ನೆಲಕಚ್ಚಿಬಿಟ್ಟರು. ಬಿಜೆಪಿ ಕಳೆದ ಬಾರಿಗಿಂತ ಮೂರು ಕ್ಷೇತ್ರ ಕಮ್ಮಿ ಗೆದ್ದರೂ ಗದ್ದುಗೆ ಮಾತ್ರ ಬಿಟ್ಟು ಕೊಡಲಿಲ್ಲ. ಮತದಾರರನ್ನು ಮಂದಗೊಳಿಸಿ ವಶೀಕರಿಸಿಕೊಳ್ಳುವ ಬಿಜೆಪಿಗರ ವರಸೆಗಳೆದುರು ಒಣ ಆವೇಶದ ಕಾಂಗ್ರೆಸ್ ಧೀರರು ಶರಣಾಗಿ ಹೋದರು. 5 ತಾ.ಪಂ.ಗಳಲ್ಲಿ ಬಂಟ್ವಾಳ, ಮಂಗಳೂರು ಬಿಟ್ಟರೆ ಉಳಿದೆಲ್ಲೆಡೆ ಬಿಜೆಪಿಯದೇ ಕಾರುಬಾರು.

ಬಿಜೆಪಿಗರನ್ನೇ ಬೆಚ್ಚಿಬೀಳಿಸುವ ಫಲಿತಾಂಶ ಉಡುಪಿ ಜಿಲ್ಲೆಯಲ್ಲಿ ಬಂದಿದೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ ಮತ್ತಾತನ ಬೆನ್ನಿಗೆ ನಿಂತಿದ್ದ ಕುಂದಾಪುರದ ಎಡಬಿಡಂಗಿ ಶಾಸಕ ಹಾಲಾಡಿ ಶೆಟ್ಟಿಗಳಿಗೆ ಬಿಜೆಪಿ ಜಿಪಂ ಅಧಿಕಾರ ಹಿಡಿಯಲು ತಿಣುಕಾಡ ಬೇಕಾಗುತ್ತದೆಂಬ ಭಾವನೆಯಿತ್ತು. ಮಣಿಪಾಲದಲ್ಲಿ ಸ್ಟಾರ್ ಹೊಟೇಲ್ ಶುರುಮಾಡಿ 'ದಂಧೆ'ಗಿಳಿದಿರುವ ಮಾಜಿ ಶಾಸಕ ರಘುಪತಿ ಭಟ್ಟನಿಗೂ ಪಂಚಾಯ್ತಿ ಚುನಾವಣೆ ಗೆಲ್ಲುವ ಬಗ್ಗೆ ಅನುಮಾನಗಳಿತ್ತು. ಆದರೆ ಆ ಪಕ್ಷ 26 ಕ್ಷೇತ್ರದಲ್ಲಿ ಬರೋಬ್ಬರಿ 20 ಕಡೆ ಗೆದ್ದು ಜಿಪಂ ಗದ್ದುಗೆ ಹಿಡಿದಿದೆ! ಕಾಂಗ್ರೆಸ್‌ನ ಸ್ವಯಂ ಘೋಷಿತ ಮುಂದಾಳುಗಳಾದ ಆಸ್ಕರ್, ಸೊರಕೆ, ಪ್ರಮೋದ್ ಮಧ್ವರಾಜ್ ವಗೈರೆಗಳು ಮೈ-ಕೈ ಮುಟ್ಟಿಕೊಂಡು ಪಂಚಾಯ್ತಿ ಫೈಟಿಂಗ್‌ನ ಏಟು ಎಲ್ಲೆಲ್ಲಿ ಬಿದ್ದಿದೆ ಎಂದು ನೋಡಿಕೊಳ್ಳುತ್ತಿದ್ದಾರೆ.


ಕಾರ್ಕಳದಲ್ಲಿ ಕಾಂಗ್ರೆಸ್ ವೀಕ್. ಭಜರಂಗಿ ಶಾಸಕ ಸುನಿಲ್‌ಕುಮಾರನ ಬಿಲ್ಲವ ಜಾತಿ ಕಾರ್ಡ್ ಆಟ, ಹಿಂದೂತ್ವದ ಹಿಕಮತ್ತಿನ ಎದುರು ಅತಿಸಣ್ಣ ಸಮುದಾಯ (ಕ್ಷೌರಿಕ)ದ ಮಾಜಿ ಶಾಸಕ ಗೋಪಾಲ ಭಂಡಾರಿಯ ಜನಪರ ಬದ್ಧತೆ, ಕೆಲಸಗಾರಿಕೆಯ ಒಳ್ಳೆತನ ವ್ಯರ್ಥವಾಗುತ್ತಿದೆ! ಹೀಗಾಗಿ ನಿರೀಕ್ಷೆಯಂತೆ ಕಾರ್ಕಳದ ಅಷ್ಟೂ ಐದು ಕ್ಷೇತ್ರ ಚಡ್ಡಿ ಕಿಸೆ ಸೇರಿದೆ! ಉಡುಪಿ ತಾಲ್ಲೂಕಿನ ವ್ಯಾಪ್ತಿಯ ಮಂತ್ರಿ ಸೊರಕೆಯ ಕಾಪು ವಿಧಾನಸಭಾ ಕ್ಷೇತ್ರ ಮತ್ತು ಸಂಸದೀಯ ಕಾರ್ಯದರ್ಶಿ ಪ್ರಮೋದ್ ಮಧ್ವರಾಜ್‌ರ ಖುದ್ದು ಉಡುಪಿ ಕ್ಷೇತ್ರದಲ್ಲಿ ಕಾಂಗ್ರೆಸ್ ನಿರ್ನಾಮವಾಗಿ ಹೋಗಿದೆ! ಇದಕ್ಕೆ ಜನರೊಂ... ಬೆರೆಯದೆ ಅತಿರಂಜಿತ ಅಭಿವೃದ್ಧಿಯ ಅಂಕಿ-ಅಂಶ ಕೊ... ಸೊರಕೆ ಮತ್ತು ಪ್ರಮೋದ್‌ರ ರಾಜಕಾರಣವೇ ಕಾ... ಈ ಪ್ರಮೋದ್ ಎಂಬ ಫಿಶ್‌ಮಿಲ್, ಬಿಲ್ಡರ್ ಉದ್ಯ... ಆತನ ಸಿರಿವಂತಿಕೆಯ ಗರವೇ ಮುಳುವಾಗಿದೆ.


ಒಂದು ಸಾವಿರದ ಮುನ್ನೂರು ಕೋಟಿ ರೂ. ಅನು... ತಂದಿದ್ದೇನೆಂದು ತಮಟೆ ಬಾರಿಸುವ ಪ್ರಮೋದ್ ... ಹಣದಲ್ಲಿ ಎಷ್ಟು ಜನರಿಗೆ ಅನುಕೂಲವಾಗು... ವ್ಯಯವಾಗಿದೆ ಎಂಬ ತಿಳಿವಳಿಕೆಯೂ ಇಲ್ಲ. ಜನ... ತನ್ನ ಸಾಧನೆ ತಿಳಿಸುವ ಪರಿಯೂ ತಿಳಿದಿಲ್ಲ. ಸಾಧನೆ... ಬುಕ್‌ಲೆಟ್ ಮಾಡಿ ಹಂಚಿದರೆ ಓಟು ಬರುತ್ತದೆ, ಎದು... ಸಿಕ್ಕವನ ಕಿಸೆಗೆ ಐನೂರರ ನೋಟು ತುರುಕಿ... ಯಾರ್ಯಾರದೋ. ಮದುವೆ-ಮುಂಜಿ-ಸೋಬನಕ್ಕೆ 'ದ... ಮಾಡಿದರೆ ಪಂಚಾಯ್ತಿ ಫೈಟಿಂಗ್‌ನಲ್ಲಿ ಗೆಲ್ಲುತ್ತೇವೆ ಎ... ಭ್ರಮೆ ಪ್ರಮೋದ್‌ಗೆ. ಇದೇ ಆತನನ್ನು ಮಕಾಡೆ ಮಲಗಿ... ಎರಡೇ ಎರಡು ಜಿ.ಪಂ. ಸ್ಥಾನ ಗೆಲ್ಲುವಷ್ಟಕ್ಕೆ ಪ್ರಮೋ... ಏದುಸಿರು ಬಿಡುತ್ತಾ ಕುಕ್ಕರಿಸಿಬಿಟ್ಟಿದ್ದಾನೆ. ಪಂಚಾ... ಫಲಿತಾಂಶ ಆತ ಮತ್ತೆ ಶಾಸಕನಾಗುವುದು ಅಷ್ಟು ಸುಲಭ... ಎಂಬುದಕ್ಕೆ ಸಂಕೇತದಂತಿದೆ. ಈ ಫಲಿತಾಂಶದಿಂದಾದರೂ ಆತ ಎಚ್ಚೆತ್ತುಕೊಳ್ಳಬೇಕಿದೆ.


ಮಂತ್ರಿ ಸೊರಕೆಯೂ ಎರಡೇ ಎರಡು ಜಿಪಂ ಸ... ಗೆದ್ದ 'ಕೀರ್ತಿ'ಗೆ ಪಾತ್ರರಾಗಿದ್ದಾರೆ. 'ಶಿರ್ವ' ಎಂಬ ಕ್ರಿಶ್ಚಿಯ... ಸಮುದಾಯ ಹೆಚ್ಚಿರುವ ಜಿಪಂ ಕ್ಷೇತ್ರದಲ್ಲಿ ಸೊರಕೆ ಮ... ಉಳಿದಿದೆ. ಹಿರಿಯಡ್ಕದಲ್ಲಿ ಕಾಂಗ್ರೆಸನ್ನು ಬಜ... ಬಂಡಾಯಗಾರರೆ ಗೆಲ್ಲಿಸಿದ್ದಾರೆಯೇ ಹೊರತು ಸೊರ... ಸಾಧನೆಯೇನಲ್ಲ. ಬ್ರಹ್ಮಾವರ ಏರಿಯಾದಲ್ಲಿ ಜಯಪ್ರಕಾ... ಹೆಗ್ಡೆ ಫ್ಯಾಕ್ಟರ್ ಕಾಂಗ್ರೆಸ್‌ಗೆ ಗಂಡಾಂತರ ತಂದಿ... ಬ್ರಹ್ಮಾವರದಂಥ ಗಂಡುಮೆಟ್ಟಿನ ಸ್ಥಳದಲ್ಲೇ ಕಾಂಗ್ರೆ... ಹೈರಾಣಾಗಿದೆ. ಹೊರಗಿನಿಂದ ಆಮದು ಮಾಡಿ ತಂ... ಶೀಲಾಶೆಟ್ಟಿ ಇಲ್ಲಿ ಸಣ್ಣ ಅಂತರದಲ್ಲಿ ಗೆದ್ದು ಬಿಜೆಪಿ ಪತಾ... ಹಾರಿಸಿದ್ದಾರೆ. ಕೇವಲ ನೂರಿಪ್ಪತ್ತು ಮತದಿಂದ ಗೆದ್ದಿರು... ಬ್ರಹ್ಮಾವರ ಕ್ಷೇತ್ರದಲ್ಲಿ 900ರಷ್ಟು ನೋಟಾ ಮತ... ಬಿದ್ದಿದೆ. ಕಾಂಗ್ರೆಸ್‌ನ ಅಯೋಗ್ಯ ಮುಂದಾಳುಗಳ ಹಣೆಬರ... ಈ ನೋಟಾ ತೋರಿಸುವಂತಿದೆ.


ಒಟ್ಟು 26 ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿರುವ 6ರಲ್ಲಿ ... ಉಡುಪಿಯಲ್ಲಾದರೆ 2 ಕುಂದಾಪುರದಲ್ಲಿ. ಕುಂದಾಪುರ... 10ರಲ್ಲಿ ಬಿಜೆಪಿ ಅನಾಮತ್ತಾಗಿ 8 ಕ್ಷೇತ್ರ ಬಗಲಿ... ಹಾಕಿಕೊಂಡಿದೆ. ಅಚ್ಚರಿಯ ಸಂಗತಿಯೆಂದರೆ, ಉಡು... ಜಿಲ್ಲೆಯ ಕಾಂಗ್ರೆಸ್ ಮಂತ್ರಿ-ಶಾಸಕರಲ್ಲಿ ತುಂಬ ನಿಷ್ಠೆ... ಬದ್ಧತೆ-ವೃತ್ತಿಪರ ರಾಜಕೀಯ ತಂತ್ರಗಾರಿಕೆಯಿಂದ ಹೋರಾ... ನಡೆಸಿದ್ದ ಬೈಂದೂರಿನ ಶಾಸಕ ಗೋಪಾಲ ಪೂಜಾರಿ ಹೀನಾಯ ಹಿನ್ನಡೆ ಕಂಡಿದ್ದಾರೆ. ಎಲೆಕ್ಷನ್‌ಗೆ ಎರಡ್ಮೂರು ತಿಂಗಳಿರುವಾಗಲೇ ತೂಕದ ಜನ ಬಳಕೆಯ ಮದನಕುಮಾರ್... ರಾಜು ಪೂಜಾರಿಯಂಥವರ ಅಖಾಡಕ್ಕೆ ಕಳಿಸಿದ್ದ ಗೋಪಾಲ... ಪೂಜಾರಿಗೆ ಸಿಕ್ಕಿದ್ದು ಬರೀ ಎರಡು ಸ್ಥಾನ ಮಾತ್ರ... ಬೈಂದೂರಲ್ಲಿ ಆಗಿರುವ ಸೋಲು ಕಾಂಗ್ರೆಸ್‌ನ ಸೊಂಟವನ್ನ...














...ರಿದು ಹಾಕಿದೆ. ಜಿಪಂ ಅಧಿಕಾರ ಹಿಡಿವ ಕನಸಿಗೆ ...ಳ್ಳಿಯಾಗಿದ್ದ ಗೋಪಾಲ ಪೂಜಾರಿ ವೈಫಲ್ಯ ಕಾಂಗ್ರೆಸಿಗರ ...ಡ್ಡ ನಿರೀಕ್ಷೆ ಇದ್ದಿದ್ದೇ ಈ ಬೈಂದೂರಿನ ಮೇಲಾಗಿತ್ತು, ...ಂದಾಪುರ ಕ್ಷೇತ್ರದಲ್ಲಿ ಜೆಪಿ ಪ್ರಭಾವ ಕೆಲಸ ಮಾಡಿದೆ. ...ಂಗ್ರೆಸ್‌ಗೆ ಇಲ್ಲಿ ಒಂದೇ ಒಂದು ಸೀಟು ಗೆಲ್ಲಲು ಆಗಿಲ್ಲ. ...ಜೆಪಿ 'ಸಹ' ಎಮ್ಮೆಲ್ಲೆ ಹಾಲಾಡಿ ಶೆಟ್ಟಿ ಬಲದ ಜತೆಗೆ ...ಂಗ್ರೆಸ್‌ನ ನಾಲಾಯಕ್ ಎಮ್ಮೆಲ್ಸಿ ಪ್ರತಾಪ್‌ರ ಹೇಡಿತನವೂ ...ರಿ ಕುಂದಾಪುರದಲ್ಲಿ ಕಾಂಗ್ರೆಸ್ ಖತಂ ಆಗಿದೆ.

ಒಂದಂತೂ ಖರೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ...ಜೆಪಿ ಸರ್ಕಾರ-ಮಂತ್ರಿ-ಶಾಸಕರ ದುರಾಡಳಿತ, ಅನೈತಿಕತೆ, ...ಮಾನವೀಯತೆಯಿಂದ ಕಾಂಗ್ರೆಸ್‌ಗೆ ಲಾಭವಾಗಿ 10 ...ಂಗ್ರೆಸ್ ಶಾಸಕರು ಗೆದ್ದಿದ್ದರು. ಇವರಲ್ಲಿ ಒಂದೆರಡು ...ವರ ಬಿಟ್ಟರೆ ಉಳಿದವರ್‍ಯಾರಿಗೂ ಸ್ವಂತ ಯೋಗ್ಯತೆ, ...ನ ನಂಬಿಕೆ ಬೆಳೆಸಿಕೊಳ್ಳಲು ಆಗಲೇ ಇಲ್ಲ; ಬಿಜೆಪಿಯ ...ಂದೂತ್ವ-ನೈತಿಕ ಪೊಲೀಸ್‌ಗಿರಿ ಮಟ್ಟ ಹಾಕಲು ...ಧ್ಯವಾಗಿಲ್ಲ. ಪ್ರಮೋದ್, ಸೊರಕೆ, ರೈಗಳಂಥ ಅಧಿಕ ...ಸಂಗಿಗಳಿಗೆ ದುರಹಂಕಾರ ಬೆಳೆದುಬಿಟ್ಟಿದೆ. ಇನ್ನಾದರೂ ... ಮಂತ್ರಿ-ಶಾಸಕರು ನೆಲಕ್ಕಿಳಿದು ಜನರ ನೋವು-ಸಮಸ್ಯೆಗೆ ...ದಿಸದಿದ್ದರೆ, ಹಿಂದೂತ್ವದ ಹರಾಮಿತನಕ್ಕೆ ತಡೆಹಾಕದಿದ್ದರೆ ...ಾಜಿಗಳಾಗೋದು ಗ್ಯಾರಂಟಿ. ಇದು ಪಂಚಾಯ್ತಿ ...ಲಿತಾಂಶದ ಸ್ಪಷ್ಟ ಪಾಠ!!


* * *

ನಜೀರ್ ಸಾಬರು ಪಂಚಾಯ್ತಿ ವ್ಯವಸ್ಥೆ ಜಾರಿಗೆ ತಂದ ...ಳಿಗೆಯಿಂದಲೂ ಉತ್ತರ ಕನ್ನಡ ಜಿಲ್ಲಾ ಪಂಚಾಯ್ತಿ ಎಂದರೆ ...ದು ದಗಲುಬಾಜಿ 'ದೇಶಪಾಂಡೆ ಪಂಚಾಯ್ತಿ'! ...ೋಷಪಾಂಡೆ ದಳದಲ್ಲಿದ್ದಾಗ ಉ.ಕನ್ನಡದ ಜಿಪಂ-...ಪಂಗಳು ದಳದ ಪಾಲಾಗುತ್ತಿದ್ದವು. ಆತ ಕಾಂಗ್ರೆಸ್‌ಗೆ ...ಗೆದ ನಂತರ ಕಾಂಗ್ರೆಸ್ ಪಂಚಾಯ್ತಿ ಆಗುತ್ತಿದೆ. ...ಕೇಂದ್ರೀಕರಣ ವ್ಯವಸ್ಥೆಯ ಮೂಲಭೂತ ಆಶಯಕ್ಕೆ ಭಂಗ ...ರುವ ಸಕಲ ಹಿಕಮತ್ತು ಮಾಡುತ್ತಾ ಬಂದಿರುವ ...ೇಶಪಾಂಡೆಯ ನಿಷ್ಠಾವಂತ ಗುಲಾಮರು, ಗೂಂಡಾಗಳೇ ...ಪಂ ಸದಸ್ಯ, ಅಧ್ಯಕ್ಷ, ಉಪಾಧ್ಯಕ್ಷರಾಗುತ್ತ ಬಂದಿರುವುದು ...ಲ್ಲೆಯ ಗ್ರಾಮೀಣಾಭಿವೃದ್ಧಿಗೆ ಗಂಡಾಂತರಕಾರಿಯಾಗಿ ...ಟ್ಟಿದೆ! ಬಿಜೆಪಿ ಒಳಜಗಳದಿಂದ ದುರ್ಬಲವಾಗಿರು...ವುದರಿಂದ ಬಿಜೆಪಿ ಈ ಬಾರಿಯೂ ಜಿಪಂ ಗದ್ದುಗೆ ...ರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿತ್ತು. ಕುಮಟಾ-...ಳಿಯಾಳ ಬಿಟ್ಟರೆ ಮತ್ತೆಲ್ಲೂ ಬೇರುಗಳಿಲ್ಲದ ಜೆಡಿಎಸ್‌ಗೆ ...ಪಂ ಗದ್ದುಗೆ ಏರುವ ತಾಕತ್ತು ಇಲ್ಲ ಬಿಡಿ.

ಆದರೂ ದೇಶಪಾಂಡೆಗೆ ಈ ಸಲ ಕಾಂಗ್ರೆಸ್ ...ಲ್ಲಿಸುವುದು ಸುಲಭವಲ್ಲ ಎಂಬ ಅಭಿಪ್ರಾಯ ಜಿಲ್ಲೆಯಲ್ಲಿತ್ತು. ಅದು ನಿಜವಾಗಿದೆ. ಆದರೆ ಕಾಂಗ್ರೆಸ್‌ನ ಬಂಡಾಯಗಾರರು ...ೆಚ್ಚು ಆರಿಸಿ ಬರಬಹುದೆಂಬ ಲೆಕ್ಕಾಚಾರ ತಲೆಕೆಳಗಾಗಿ ...ಜೆಪಿ, ಜೆಡಿಎಸ್‌ಗೆ ಅನುಕೂಲವಾಗಿದೆ. ಹಾಗಾಗಿ ಬಿಜೆಪಿ ಈ ಬಾರಿ ಕಳೆದ ಸಲಕ್ಕಿಂತ ಮೂರು ಸ್ಥಾನ ಮತ್ತು ಜೆಡಿಎಸ್ ಒಂದು ಸೀಟು ಜಾಸ್ತಿ ಪಡೆದಿವೆ. ವಿ.ಎಸ್. ನಾಯ್ಕ್, ವಿಠ್ಠಲ ಪೂಜಾರಿಯಂಥ ತೂಕದ ಬಂಡುಕೋರರು ಸೋತಿದ್ದಾರೆ. ಗುರು ದೇಶಪಾಂಡೆಗೇ ಸೆಡ್ಡು ಹೊಡೆದು ಜೋಯಿಡಾದ ರಾಮನಗರದಲ್ಲಿ ವಿಲಾಸ್ ನಾಯಕ್ ಎಂಬ ಕಾಡುಗಳ್ಳ-ಮರಳುಗಳ್ಳ ಗೆದ್ದಿದ್ದಾನೆ. ಇಡೀ ಜಿಲ್ಲೆಯಲ್ಲಿ ದೇಶಪಾಂಡೆಗೆ ಮೈಮುಟ್ಟಿಕೊಂಡು ನೋಡುವಂಥ ಹೊಡೆತ ಸಿದ್ದಾಪುರದಲ್ಲಿ ಬಿದ್ದಿದೆ.

ಸಿದ್ದಾಪುರದ ತನ್ನ ರೌಡಿ ಚೇಲಾ ಷಣ್ಮುಖ ಗೌಡನ ಗೂಂಡಾ ಸಾಮ್ರಾಜ್ಯ ಕಾಪಾಡಲು ದಂಡಪಿಂಡಗಳಿಗೆಲ್ಲ ದೇಶಪಾಂಡೆ ಕಣಕ್ಕಿಳಿಸಿದ್ದರು. ಜನ ಬಳಕೆಯ ನಿಷ್ಠಾವಂತ ಕಾರ್ಯಕರ್ತರಿಗೆ ಅನ್ಯಾಯ ಮಾಡಿದ್ದರು. ಹೀಗಾಗಿ ತಾಲ್ಲೂಕಿನ ಮೂರು ಕ್ಷೇತ್ರದಲ್ಲಿ ಬಂಡಾಯಗಾರರು ಸಿಡಿದೆದ್ದಿದ್ದರು. ಇದರಲ್ಲಿ ಹಲಗೇರಿ ಕ್ಷೇತ್ರ ಸುಮಂಗಲಾ ನಾಯ್ಕಳನ್ನು ಗೆಲ್ಲಿಸಿಕೊಳ್ಳಲು ಆಕೆಯ ಪತಿ ವಸಂತ ನಾಯ್ಕ್ ಎಂಬ ಆ್ಯಂಗ್ರಿ ಯಂಗ್‌ಮ್ಯಾನ್ ಸಫಲವಾಗಿದ್ದಾನೆ. ಉಳಿದೆರಡು ಕಡೆ ಬಿಜೆಪಿಗೆ ಕಾಂಗ್ರೆಸ್ ಬಂಡಾಯದಿಂದ ಅನಿರೀಕ್ಷಿತ ಜಯ ಸಿಕ್ಕಿದೆ. ಫಲಿತಾಂಶ ದೇಶಪಾಂಡೆಯ ಶಿಷ್ಯ ಷಣ್ಮುಖ ಗೌಡನಿಗೆ ಭರ್ಜರಿ ಮುಖಭಂಗ ಮಾಡಿದೆ. ಗೌಡನನ್ನು ಸಿದ್ದಾಪುರ ರಾಜಕಾರಣದಿಂದ ಹೊರಹಾಕಲು ಜನರು ರೆಡಿಯಾಗಿದ್ದಾರೆಂಬುದು ಇನ್ನಾದರೂ ದೋಷಪಾಂಡೆ ಸಾಹೇಬರಿಗೆ ಅರ್ಥವಾದೀತಾ? ತಾಲ್ಲೂಕು ಪಂಚಾಯ್ತಿ ಆಡಳಿತ ಹಿಡಿಯಲಿಕ್ಕೂ ಆಗದು ಷಣ್ಮುಖ ಗೌಡನನ್ನು ಜನ ಒದ್ದು ಓಡಿಸಿದ್ದಾರೆ.

ಕಾಂಗ್ರೆಸ್ 23 ಕ್ಷೇತ್ರದಲ್ಲಿ ಗೆದ್ದರೆ ಬಿಜೆಪಿ 11 ಕ್ಷೇತ್ರ ಪಡೆದಿದೆ. ಜೆಡಿಎಸ್ ಎರಡು ಕಡೆ ಗೆಲುವು ಕಂಡಿದೆ.



ಬಂಡುಕೋರರು 3 ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಒಟ್ಟೂ 39 ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿರುವ ಕೇವಲ 23 ದೇಶಪಾಂಡೆ ಪಟಾಲಮ್‌ಗೆ ಎಚ್ಚರಿಕೆ ನೀಡಿದೆ. ಹಾಗೋ ಹೀಗೋ ಅಧಿಕಾರ ಹಿಡಿದಿರುವ ದೇಶಪಾಂಡೆ ಕಾಂಗ್ರೆಸ್ಸಿನದು ಹೀನಾಯ ವಿಜಯವೆಂದೇ ವ್ಯಾಖ್ಯಾನಿಸಲಾಗುತ್ತಿದೆ. ಕಾರವಾರದಲ್ಲಿ ಶಾಸಕ ಸೈಲ್ ಒಂದು ಕ್ಷೇತ್ರ (ಮಲ್ಲಾಪುರ) ತನ್ನ ಆಜನ್ಮ ವೈರಿ ಆನಂದ ಅಸ್ನೋಟಿಕರ್ ಶಿಷ್ಯ ಶಾಂತಾ ಬಾಂದೇಕರ್‌ಗೆ ಬಿಡಬೇಕಾಗಿ ಬಂದಿದೆ. ಅಂಕೋಲಾದಲ್ಲಿ ಪಾಪದ ಪಾಂಡುರಂಗ ಗೌಡನೆಂಬ ಹಾಲಕ್ಕಿ ಒಕ್ಕಲಿಗ ಸಮುದಾಯದ ಮುಗ್ಧನನ್ನು ಸೈಲ್-ದೇಶಪಾಂಡೆ ಬಲಿ ಹಾಕಿರುವುದು ವಿದ್ರೋಹವೇ ಸರಿ!

ಕುಮಟಾದ ಮೂರೂರು ಕ್ಷೇತ್ರದಲ್ಲಿ ಗೆದ್ದಿರುವ ದಳ ಕ್ಯಾಂಡಿಡೇಟ್ ದೇಶಪಾಂಡೆ ಆದ್ಮಿ. ಈ ಗಜಾನನ ಪೈ ನಂಬರ್ ಒನ್ ಕಳಪೆ ಕಂಟ್ರಾಕ್ಟರ್. ಕುಮಟಾದ ಶಾಸಕಿ ಶಾರದಾ ಶೆಟ್ಟಿ ವಿರೋಧಿ ಬಣದವನು. ಹೀಗಾಗಿ ಆಕೆ ಆತನಿಗೆ ಹಬಾ ಎಂದಿದ್ದರು. ದೇಶಪಾಂಡೆ ದಳದಿಂದ ನಿಲ್ಲಿಸಿ ಗೆಲ್ಲಿಸಿದ್ದಾನೆ. ಆದರೆ ಆತನ ಖಾಸಾ ಶಿಷ್ಯ ಹೊನ್ನಪ್ಪ ನಾಯಕ್ ಮಕಾಡೆ ಬಿದ್ದಿದ್ದಾನೆ! ಶಿರಸಿ-ಸಿದ್ದಾಪುರದಲ್ಲಿನ ಒಟ್ಟೂ 8 ಕ್ಷೇತ್ರದಲ್ಲಿ ಬಿಜೆಪಿ ಶಾಸಕ ಕಾಗೇರಿ ಹೆಗಡೆ ಗೆದ್ದಿರುವುದು 5 ಸ್ಥಾನ. ತವರೂರು ಶಿರಸಿಯಲ್ಲೇ ಕಾಂಗ್ರೆಸ್ ಎದುರಾಳಿಗಳಿಗೆ ಮೂರು ಕಡೆ ಮಂಡಿಯೂರಿ ಮಣಿದಿದ್ದಾರೆ. ಸಿದ್ದಾಪುರದಲ್ಲಿ ಪಡೆದಿರುವ ಎರಡು ಸ್ಥಾನ ಕಾಂಗ್ರೆಸ್ ಭಿನ್ನಮತದ ಬೋನಸ್. ಹೀಗಾಗಿ ಕಾಗೇರಿಯೂ ಕ್ಷೇತ್ರದಲ್ಲಿ ಏದುಸಿರು ಬಿಡುತ್ತಿರುವ ಸೂಚನೆ ಪಂಚಾಯ್ತಿ ಫೈಟಿಂಗ್ ಫಲಿತಾಂಶ ಬಿತ್ತರಿಸಿದೆ.

ಹಳಿಯಾಳದಲ್ಲಿ ದೇಶಪಾಂಡೆ ಎಲ್ಲ ನಾಲ್ಕೂ ಕ್ಷೇತ್ರ ಕಬಳಿಸಿದ್ದಾರಾದರೂ ಜೆಡಿಎಸ್ ಸಾಕಷ್ಟು ಬೆವರು ಹರಿಸುವಂತೆ ಮಾಡಿದೆ. ಜೆಡಿಎಸ್ ಪಡೆದಿರುವ ಮತ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದೇಶಪಾಂಡೆಗೆ ದೊಡ್ಡ ಕಂಟಕ ಕಾದಿದೆ ಎಂಬ ಸಂಕೇತ ಕಳಿಸಿದೆ. ಭಟ್ಕಳದಲ್ಲಿ ಶಾಸಕ ಮಂಕಾಳು ವೈದ್ಯ, ಮುಂಡಗೋಡದಲ್ಲಿ ಶಿವರಾಮ ಹೆಬ್ಬಾರ್ ಪೂರ್ತಿ ಮಾನ ಕಳೆದುಕೊಂಡಿಲ್ಲ. ಕುಮಟಾದ 5 ಸ್ಥಾನದಲ್ಲಿ ಕಾಂಗ್ರೆಸ್ ಒಂದೇ ಒಂದು ಪಡೆದಿರುವುದು ಶಾಸಕಿಯ ಪುತ್ರ ರವಿಕುಮಾರ್‌ಗೆ ಕೊಟ್ಟ ಎಚ್ಚರಿಕೆಯಂತಿದೆ.

ಜಿಪಂ-ತಾಪಂ ಚುನಾವಣೆಯಲ್ಲಿ ದೇಶಪಾಂಡೆ ಗೆದ್ದಿದ್ದಾರೆ. ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಅರ್ಹನನ್ನು ಜಿಪಂ ಅಧ್ಯಕ್ಷನಾಗಿಸುವ ಋಣ ಈಗ ಆತನ ಮೇಲಿದೆ. ದೇಶಪಾಂಡೆ ತನ್ನ ಮಾಮೂಲಿ 'ಗುಲಾಮಿ ಸಂಸ್ಕೃತಿ' ಜಿಪಂ-ತಾಪಂ ಅಧ್ಯಕ್ಷರ ಆಯ್ಕೆ ಹೊತ್ತಲ್ಲಿ ಈ ಬಾರಿ ಪ್ರದರ್ಶಿಸಬಾರದೆಂಬ ಜನತೆಯ ಇಚ್ಛೆ ಆತ ಅರ್ಥ ಮಾಡಿಕೊಳ್ಳಬೇಕಿದೆ. ತನ್ನ 'ಹಿರಿತನ'ದ ಗೌರವ ಕಾಯ್ದುಕೊಳ್ಳುವರಾ ದೇಶಪಾಂಡೆ?

ಹಾಗಂತ ಉತ್ತರ ಕನ್ನಡಿಗರು ಮಾತಾಡಿಕೊಳ್ಳುತ್ತಿದ್ದಾರೆ!

■ ನಹುಷ

ಸರ್ವಜ್ಞನ ಈ ವಚನ ಈಗ ಎಲ್ಲರ ಅಗತ್ಯತೆ

ಮಾತಿನಿಂ ನಗೆನುಡಿಯು
ಮಾತಿನಿಂ ಹಗೆ ಗೆಳೆಯು
ಮಾತಿನಿಂ ಸರ್ವಸಂಪದವು
ಲೋಕಕ್ಕೆ ಮಾತೇ ಮಾಣಿಕ್ಯ ಸರ್ವಜ್ಞ



ಮದ್ರಾಸ್ ಐಐಟಿ, ಹೈದರಾಬಾದ್ ವಿವಿ, ಜವಹರ್‌ಲಾಲ್ ನೆಹರೂ ವಿವಿ ಸೇರಿದಂತೆ ದೇಶದಲ್ಲಿ ನಡೆಯುತ್ತಿರುವ ಹಲವಾರು ಅಹಿತಕರ ವಿದ್ಯಮಾನಗಳನ್ನು ಗಮನಿಸುವಾಗ ನಾವೆಲ್ಲರೂ ಶಾಲಾದಿನಗಳಲ್ಲಿ ಕಲಿತ ಸರ್ವಜ್ಞ ಕವಿಯ ಈ ವಚನವನ್ನು ಮತ್ತೆ ನೆನಪಿಸಿಕೊಳ್ಳುವ ಅಗತ್ಯವಿದೆ ಎಂದು ಅನಿಸುತ್ತಿದೆ. ಅಷ್ಟು ಮಾತ್ರವಲ್ಲ ಅದನ್ನು ವಿಶೇಷವಾಗಿ ಈ ಹೊತ್ತಿನ ಕೆಲವೊಂದು ರಾಜಕಾರಣಿಗಳು ಹಾಗೂ ಮಾಧ್ಯಮ ಮಾಲಿಕರ ಗಮನಕ್ಕೂ ತರಬೇಕಾಗಿದೆ. ತಾವೇ ಸರ್ವಜ್ಞರೆಂಬಂತೆ ವರ್ತಿಸುವ; ತಮ್ಮ ಪಕ್ಷಪಾತೀಯ ನಿಲುವುಗಳ ಅಥವಾ ತಮ್ಮ ಪೋಷಕ ರಾಜಕಾರಣಿ/ಉದ್ಯಮಿಗಳ ಧೋರಣೆ, ಸಿದ್ಧಾಂತಗಳ ಪ್ರಚಾರಕರಾಗಿರುವ; ತಾವೇ ಸಮಾಜದ ಪ್ರತಿನಿಧಿಗಳೆಂದು ಬಿಂಬಿಸುತ್ತಿರುವ; ಚರ್ಚಾಗೋಷ್ಠಿಗಳನ್ನು ಅಣಕವಾಗಿಸುತ್ತಿರುವ ನಿರ್ಲಜ್ಜ ಆಂಕರ್‌ಗಳಿಗೂ ತಿಳಿಹೇಳಬೇಕಾಗಿದೆ. ತಿರುಚಲ್ಪಟ್ಟ ಅಥವಾ ತಾವೇ ತಿರುಚಿದ ವಿಡಿಯೊ/ಆಡಿಯೋಗಳನ್ನು ... ನಿರಂತರವಾಗಿ ಪ್ರಸಾರಿಸುವುದು ಪತ್ರಿಕಾವೃತ್ತಿಗೆ ... ದ್ರೋಹವಲ್ಲವೆ ಎಂದು ಕೇಳಬೇಕಾಗಿದೆ. ದೃಢೀಕರಿಸದ ಸುಳ್ಳು ಅಥವಾ ಅರೆಸತ್ಯ ಸುದ್ದಿಗಳನ್ನು ಪ್ರಸಾರ ಮಾಡಿ ತಮ್ಮ ಜಿಹ್ವಾ ಪ್ರಾವೀಣ್ಯದಿಂದ ವೀಕ್ಷಕರ ಭಾವನೆಗಳನ್ನು ಕೆರಳಿಸುವ ಮೂಲಕ ವಾಸ್ತು ಜ್ಯೋತಿಷ್ಯಗಳಂಥ ಅವೈಜ್ಞಾನಿಕ, ಅಸಾಂವಿಧಾನಿಕ ಆಚರಣೆಗಳನ್ನು ಪ್ರೋತ್ಸಾಹಿಸುವ ಮೂಲಕ ತಾವು ಸಮಾಜಕ್ಕೆ ಎಸಗುತ್ತಿರುವ ಗಂಭೀರ ಹಾನಿ ಏನೆಂದು ತಿಳಿಯದೇ ಎಂದು ಪ್ರಶ್ನಿಸಬೇಕಾಗಿದೆ. ನಿಯಂತ್ರಣ ಇಲ್ಲದ, ನೈತಿಕತೆ ಇಲ್ಲದ, ಪೂರ್ವಗ್ರಹಪೀಡಿತ ಮಾಧ್ಯಮ ಪ್ರಜಾತಾಂತ್ರಿಕ ವ್ಯವಸ್ಥೆಗೆ ವಿರುದ್ಧವೂ ಸರ್ವಾಧಿಕಾರಿ ವ್ಯವಸ್ಥೆಯ ಪರವೂ ಆಗಿರುತ್ತದೆ ಎಂಬುದರ ಕನಿಷ್ಠ ಅರಿವಾದರೂ ಇವರಿಗಿದೆಯೇ ಎಂದು ಕೇಳಬೇಕಾಗಿದೆ.

- ಸುರೇಶ್ ಭಟ್ ಬಾಕ್ರಬೈಲ್, ಮಂಗಳೂರು

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427






ಪಿ.ಲಂಕೇಶರ ಕೃತಿಗಳು

ಕತೆ-ಕಾದಂಬರಿ	
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00

ಲಂಕೇಶ್‌ರ ಕವನ ಸಂಗ್ರಹಗಳು	
ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಅಕ್ಷರ ಹೊಸ ಕಾವ್ಯ	250.00
ಪಾಪದ ಹೂಗಳು	60.00

ಲಂಕೇಶ್‌ರ ನಾಟಕಗಳು	
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00

ಲೇಖನಗಳ ಸಂಗ್ರಹಗಳು	
ಟೀಕೆ-ಟಿಪ್ಪಣಿ 1-2-3	200.00
ಮರೆಯುವ ಮುನ್ನ-ಸಂಗ್ರಹ 1,2,3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಸಾಹಿತಿ ಸಾಹಿತ್ಯ ವಿಮರ್ಶೆ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಪಾಂಚಾಲಿ	150.00

ಮಂಡ್ಯ: ಜೆಡಿಎಸ್ ಗೆಲುವಿನಲ್ಲಿ ಅಂಬಿಯ ಪಾತ್ರ!

ಮಂಡ್ಯದಲ್ಲಿ ಜೆಡಿಎಸ್ ಪ್ರಾಬಲ್ಯ ಮುಂದುವರೆದಿದೆ. ಜೆಡಿಎಸ್ ಭದ್ರಕೋಟೆಯನ್ನ ಛಿದ್ರ ಮಾಡ್ತೀವಿ ಅಂದಿದ್ದ ಕಾಂಗ್ರೆಸ್‌ಗೆ ಸಚಿವ ಅಂಬಿಯ ಸೋಮಾರಿತನವೇ ಸೋಲಿನ ಸೋಪಾನವಾಗಿದೆ. ಅಂಬಿಯ ದುರಾಡಳಿತಕ್ಕೆ ಬೇಸತ್ತ ಮಂಡ್ಯ ಮತದಾರ ಈ ಬಾರಿಯೂ ಜೆಡಿಎಸ್‌ಗೆ ಮತ ನೀಡಿ ಕಾಂಗ್ರೆಸ್ಸನ್ನು ಧೂಳೀಪಟ ಮಾಡಿದ್ದಾನೆ. ಮಳವಳ್ಳಿಯಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಶ್ರೀರಂಗಪಟ್ಟಣದಲ್ಲಿ ರವೀಂದ್ರ ಶ್ರೀಕಂಠಯ್ಯನ ಸಾಮರ್ಥ್ಯದಿಂದಾಗಿ ಕಾಂಗ್ರೆಸ್ ಮಾನ ಸ್ವಲ್ಪಮಟ್ಟಿಗೆ ಉಳಿದಿರೋದೆ ಪುಣ್ಯ. ಒಟ್ಟು 41 ಜಿ.ಪಂ. ಸ್ಥಾನಗಳಲ್ಲಿ ಜೆಡಿಎಸ್ 27ರಲ್ಲಿ ಗೆದ್ದು ಭರ್ಜರಿ ಬಹುಮತ ಪಡೆದಿದ್ದರೆ ಕಾಂಗ್ರೆಸ್ 13ಕ್ಕಷ್ಟೇ ಸೀಮಿತಗೊಂಡಿದೆ. ಒಂದು ಕ್ಷೇತ್ರದಲ್ಲಿ ಜೆಡಿಎಸ್ ಬಂಡಾಯ ಅಭ್ಯರ್ಥಿ ಚಂದಗಾಲು ಶಿವಣ್ಣ ಗೆಲುವು ಸಾಧಿಸಿದ್ದಾರೆ.

ಮಂಡ್ಯ ತಾಲೂಕು

ಅಂಬಿ ಪ್ರತಿನಿಧಿಸುವ ಮಂಡ್ಯ ತಾಲೂಕಿನಲ್ಲಿ ಒಟ್ಟು 7 ಜಿ.ಪಂ. ಸ್ಥಾನಗಳಿವೆ. ಅವುಗಳಲ್ಲಿ 6ರಲ್ಲಿ ಜೆಡಿಎಸ್ ಅಭ್ಯರ್ಥಿಗಳೇ ಜಯ ಗಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಗೆದ್ದಿರುವ ಕೊತ್ತತ್ತಿ ಜಿ.ಪಂ. ಕ್ಷೇತ್ರ ಕೂಡಾ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ್ದು, ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ತೂಬಿನಕೆರೆ ರಾಮಲಿಂಗಯ್ಯರನ್ನು ಗೆಲ್ಲಿಸಿಕೊಳ್ಳುವಲ್ಲಿ ಅಂಬಿಯ ವರ್ಚಸ್ಸಿಗಿಂತ ಅಂಬಿಯ ವಿರೋಧಿ ಬಣದ ರವೀಂದ್ರ ಶ್ರೀಕಂಠಯ್ಯನ ವರ್ಚಸ್ಸೇ ಪ್ರಮುಖ ಪಾತ್ರ ವಹಿಸಿರೋದರಲ್ಲಿ ಸಂದೇಹವೇ ಇಲ್ಲ. ಇನ್ನು ಮಂಡ್ಯ ತಾಲ್ಲೂಕು ಪಂಚಾಯತ್‌ನ 25 ಕ್ಷೇತ್ರಗಳ ಪೈಕಿ 16ರಲ್ಲಿ ಜೆಡಿಎಸ್ ಗೆದ್ದು ಅಧಿಕಾರ ಹಿಡಿದಿದ್ದರೆ ಅಂಬಿ ಸಾಮರ್ಥ್ಯಕ್ಕೆ ಕಾಂಗ್ರೆಸ್‌ಗೆ ಸಿಕ್ಕಿರೋದು ಕೇವಲ 9 ಸ್ಥಾನಗಳು ಮಾತ್ರ. ಸ್ವಕ್ಷೇತ್ರದಲ್ಲೇ ಜಿ.ಪಂ. ಮತ್ತು ತಾ.ಪಂ. ಅಧಿಕಾರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಮೂಲಕ ಪಕ್ಷದ ಮಾನವನ್ನು ಅಂಬಿ ಚರಂಡಿಗೆ ಇಳಿಸಿದ್ದಾರೆ.


ಜೆಡಿಎಸ್ ಪ್ರಾಬಲ್ಯ ಮೆರೆಯುವಲ್ಲಿ ಮಾಜಿ ಶಾಸಕ ಎಂ.ಶ್ರೀನಿವಾಸ್ ಪಾತ್ರ ಬಹು ದೊಡ್ಡದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬರೀಶ್ ಎದುರು ಸೋತಿದ್ದ ಶ್ರೀನಿವಾಸ್ ಕ್ಷೇತ್ರವನ್ನು ಮರೆತಿರಲಿಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಸಮರ್ಪಕ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದ ಶ್ರೀನಿವಾಸ್‌ಗೆ ಅಂಬಿಯ ಸೋಮಾರಿತನವೇ ಲಾಭವಾಯ್ತು. ಬೂದನೂರು ಜಿ.ಪಂ. ಕ್ಷೇತ್ರದಲ್ಲಿ ಶ್ರೀನಿವಾಸ್ ಅಳಿಯ ಜೆಡಿಎಸ್‌ನ ಯೋಗೇಶ್ ಎದುರು ಅಂಬಿ ಶಿಷ್ಯ ಕಾಂಗ್ರೆಸ್‌ನ ಶಿವಕುಮಾರ್ ಅಲಿಯಾಸ್ ಉಮ್ಮಡಹಳ್ಳಿ ಶಿವಪ್ಪ ಸೋತಿದ್ದಾರೆ. ಹನಕೆರೆ ಮಹೇಶ್, ಸಾತನೂರು ಸತೀಶ್ ಮೊದಲಾದ ಸ್ಥಳೀಯ ಲೀಡರ್‌ಗಳನ್ನು ಜೊತೆಗಿಟ್ಟುಕೊಳ್ಳದ ಅಂಬಿ ಭಂಟ ಅಮರಾವತಿ ಚಂದ್ರಶೇಖರ್‌ನ ದರ್ಪವೇ ಶಿವಪ್ಪನ ಸೋಲಿಗೆ ಕಾರಣ.


ಬಸರಾಳು ಜಿ.ಪಂ. ಕ್ಷೇತ್ರದಲ್ಲಿ ಬಂಡಾಯ ಜಾ.ದಳ ಅಭ್ಯರ್ಥಿ ಚಂದಗಾಲು ಶಿವಣ್ಣ ಕಾಂಗ್ರೆಸ್‌ನ ಚಿಕ್ಕಬಳ್ಳಿ ಕೃಷ್ಣ ಎದುರು ಗೆಲುವು ಸಾಧಿಸಿದ್ದಾರೆ. ಶಾಸಕ ಚಲುವರಾಯಸ್ವಾಮಿಯ ಆಪ್ತ ಜೆಡಿಎಸ್ ಅಧಿಕೃತ ಅಭ್ಯರ್ಥಿ ಕಂಬದಹಳ್ಳಿ ಪುಟ್ಟಸ್ವಾಮಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಕೆರಗೋಡು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ರಾಣಿ ಸಿದ್ದರಾಜು ಕಾಂಗ್ರೆಸ್‌ನ ಸುಗಂಧ ಗುರುಪ್ರಸಾದ್‌ರನ್ನು 531 ಮತಗಳ ಅಂತರದಿಂದ ಸೋಲಿಸಿದ್ದಾರೆ. ದುದ್ದ ಜಿ.ಪಂ. ಕ್ಷೇತ್ರದಲ್ಲಿ ಜೆಡಿಸ್‌ನಿಂದ ಸುಧಾ ಜಯಶಂಕರ್ ಕಾಂಗ್ರೆಸ್ ಅಭ್ಯರ್ಥಿ ಎಚ್.ಕೆ.ಲಲಿತಮ್ಮರವರನ್ನು 2870 ಮತಗಳ ಅಂತರದಿಂದ ಸೋಲಿಸಿದ್ದಾರೆ. ಹೊಳಲು ಜಿ.ಪಂ. ಕ್ಷೇತ್ರ ಸಾಕಷ್ಟು ಸದ್ದು ಮಾಡಿತ್ತು, ಏಕೆಂದರೆ ಮುಡಾಗೆ 5 ಕೋಟಿ ರೂ. ವಂಚಿಸಿದ ಪ್ರಕರಣದ ಆರೋಪಿ ಅಂಬರೀಶ್ ಬೆಂಬಲಿಗ ಕೆಬ್ಬಳ್ಳಿ ಆನಂದ ತನ್ನ ಪತ್ನಿ ರಾಣಿಗೆ ಟಿಕೆಟ್ ಕೇಳಿದ್ದ. ಆದರೆ ಕಾಂಗ್ರೆಸ್ ಟಿಕೆಟ್ ಎಪಿಎಂಸಿ ಮಾಜಿ ಅಧ್ಯಕ್ಷ ಮಾದೇಗೌಡರ ಪತ್ನಿ ಸಾಕಮ್ಮನವರ ಪಾಲಾಗಿದ್ದರಿಂದ ಕನಲಿಕೆಂಡವಾದ ಕೆಬ್ಬಳ್ಳಿ ಆನಂದ್ ತನ್ನ ಪತ್ನಿ ರಾಣಿಯನ್ನು ಬಂಡಾಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದ. ಆದರೆ ಇವರಿಬ್ಬರ ಜಗಳದ ಲಾಭ ಆದದ್ದು ಜೆಡಿಎಸ್‌ಗೆ. ಈ ಕ್ಷೇತ್ರದಲ್ಲಿ ಒಕ್ಕಲಿಗರ ಸಂಘದ ನಿರ್ದೇಶಕ ಎಚ್.ಎಲ್.ಶಿವಣ್ಣನ ಸೊಸೆ ಜೆಡಿಎಸ್‌ನ ಅನುಪಮ ಕುಮಾರಿ ಗೆದ್ದಿದ್ದಾರೆ.


ಮಂಡ್ಯ ತಾಲ್ಲೂಕಿನಲ್ಲಿದ್ದರೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಕೊತ್ತತ್ತಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಗುತ್ತಿಗೆದಾರ ವೈ.ಕೆ.ಕುಮಾರ್‌ನ ದುಡ್ಡಿನ ಆರ್ಭಟ ನಡೆದಿಲ್ಲ, ಇಲ್ಲಿ ತನ್ನ ಬೆಂಬಲಿಗ ತೂಬಿನಕೆರೆ ರಾಮಲಿಂಗಯ್ಯರನ್ನು ಗೆಲ್ಲಿಸಿಕೊಳ್ಳುವ ಮೂಲಕ ರವೀಂದ್ರ ಶ್ರೀಕಂಠಯ್ಯ ಅಂಬರೀಶ್‌ಗೆ ಮಂಗಳಾರತಿ ಮಾಡಿದ್ದಾರೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ತಗ್ಗಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸಿ.ಎಂ. ಸಿದ್ದರಾಮಯ್ಯ ಕುಲಬಾಂಧವ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಕೆ.ಎಸ್.ನಾಗರಾಜು ಸೋತಿದ್ದಾರೆ. ಶಾಸಕ ರಮೇಶ್‌ಬಾಬು ತಮ್ಮ ವರ್ಚಸ್ಸಿನಿಂದ ಜೆಡಿಎಸ್ ಅಭ್ಯರ್ಥಿ ಡಿ.ಮಂಜುನಾಥ ಗೆದ್ದಿದ್ದಾರೆ.


ಮಳವಳ್ಳಿ ತಾಲೂಕು

ಮಳವಳ್ಳಿ ತಾಲೂಕಿನಲ್ಲಿ 7 ಜಿ.ಪಂ. ಕ್ಷೇತ್ರಗಳಿದ್ದು, ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪ್ರಾಬಲ್ಯಕ್ಕೆ ಬರೋಬ್ಬರಿ 6 ಕ್ಷೇತ್ರಗಳು ಕೈಗೆ ಒಲಿದಿವೆ. ಹಾಗೆಯೇ ತಾಲ್ಲೂಕು ಪಂಚಾಯಿತಿಯ 25 ಕ್ಷೇತ್ರಗಳ ಪೈಕಿ 14 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಟ್ಟು ಕಾಂಗ್ರೆಸ್‌ನ ಮಾನ ಕಾಪಾಡಿದ್ದಾರೆ. ಇಡೀ ಮಂಡ್ಯ ಜೆಡಿಎಸ್ ಹೀನಾಯವಾಗಿ ಸೋತಿದ್ದರೆ ಅದು ಮಳವಳ್ಳಿ ತಾಲ್ಲೂಕಿನಲ್ಲಿ ಮಾತ್ರ. ಮಾಜಿ ಶಾಸಕ ಅನ್ನದಾನಿ ಹಾಗೂ ವಿಧಾನಪರಿಷತ್ ಉಪಸಭಾಪತಿ ಮರಿತಿಬ್ಬೇಗೌಡರ ವರ್ಚಸ್ಸುಗಳು ಜೆಡಿಎಸ್‌ಗೆ ಸ್ವಲ್ಪವೂ ವರ್ಕ್‌ಔಟ್ ಆಗಿಲ್ಲ.























ಚೊಟ್ಟನಹಳ್ಳಿ ಜಿ.ಪಂ. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿ.ಆರ್.ಸುಷ್ಮಾ 1780 ಮತಗಳ ಅಂತರರಿಂದ ಜೆಡಿಎಸ್‌ನ ಭಾಗ್ಯ ಶಂಕರೇಗೌಡರನ್ನು ಮಕಾಡೆ ಮಲಗಿಸಿದ್ದಾರೆ. ಒಕ್ಕಲಿಗರ ಪಾರುಪತ್ಯವಿರುವ ಹಲಗೂರು ಜಿ.ಪಂ. ಕ್ಷೇತ್ರದಲ್ಲೂ ಜೆಡಿಎಸ್ ಆರ್ಭಟವನ್ನು ಬೇಧಿಸಿ ಕಾಂಗ್ರೆಸ್‌ನ ಚಂದ್ರಕುಮಾರ್‌ರನ್ನು ಶಾಸಕ ನರೇಂದ್ರಸ್ವಾಮಿ ಗೆಲ್ಲಿಸಿಕೊಂಡಿದ್ದಾರೆ. ಚಂದ್ರಕುಮಾರ್ 1751 ಮತಗಳ ಅಂತರದಿಂದ ಜೆಡಿಎಸ್‌ನ ಜಯರಾಂ ಎದುರು ಜಯ ಸಾಧಿಸಿದ್ದಾರೆ.

ತಳಗವಾದಿ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್‌ನ ಸೊಸೈಟಿ ಹನುಮಂತರನ್ನು ಕಾಂಗ್ರೆಸ್‌ನ ಶೋರೂಂ ಹನುಮಂತು 2632 ಮತಗಳ ಅಂತರದಿಂದ ಸೋಲಿಸಿದ್ದಾರೆ. ಕಿರುಗಾವಲು ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಿರುಗಾವಲು ಮಾಜಿ ಶಾಸಕ ದಿವಂಗತ ಕೆ.ಎಂ.ಪುಟ್ಟು ಮಗಳು ಪಿ.ಸುಜಾತ ಜೆಡಿಎಸ್‌ನ ಅನಿತಾರನ್ನು 3199 ಮತಗಳ ಅಂತರದಿಂದ ಸೋಲಿಸಿ ಗೆಲುವಿನ ನಗೆ ಬೀರಿದ್ದಾರೆ.

ಬೆಳಕವಾಡಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಉಮಾ ಶ್ರೀನಿವಾಸ್ ಅವರನ್ನು ಕಾಂಗ್ರೆಸ್‌ನ ಹಾಲಿ ಜಿ.ಪಂ. ಸದಸ್ಯೆ ಜಯಕಾಂತ 2595 ಮತಗಳ ಅಂತರದಿಂದ ಸೋಲಿಸಿದ್ದಾರೆ.

ದೊಡ್ಡಭೂವಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸುಜಾತಾ ಜೆಡಿಎಸ್‌ನ ಜಿ.ಪಂ. ಮಾಜಿ ಅಧ್ಯಕ್ಷೆ ಸುಧಾ ಚಂದ್ರಶೇಖರ್‌ರನ್ನು 4279 ಮತಗಳ ಭಾರೀ ಅಂತರದಿಂದ ಮಕಾಡೆ ಮಲಗಿಸಿದ್ದಾರೆ. ಸುಧಾ ಚಂದ್ರಶೇಖರ್ ಈ ಹಿಂದೆ ಗೆದ್ದು ಜಿ.ಪಂ. ಅಧ್ಯಕ್ಷರಾಗಿದ್ದರೂ ಜನರೊಂದಿಗೆ ಬೆರೆತವರಲ್ಲ, ಬಿ.ಜಿ.ಪುರ ಹೋಬಳಿಗೆ 583 ಕೋಟಿ ರೂ. ವೆಚ್ಚದಲ್ಲಿ ಹನಿ ನೀರಾವರಿ ಯೋಜನೆ ಮಂಜೂರಾಗಿರುವುದು, ಸುಜಾತ ಹಾಗೂ ಆಕೆಯ ಪತಿ ಚಂದ್ರಪ್ಪ ಇಬ್ಬರೂ ಈ ಹಿಂದಿನ ಚುನಾವಣೆಯಲ್ಲಿ ಸೋತಿರುವ ಅನುಕಂಪ ಕೈ ಹಿಡಿದಿದೆ.

ಶ್ರೀರಂಗಪಟ್ಟಣ ತಾಲೂಕು

ಶ್ರೀರಂಗಪಟ್ಟಣ ತಾಲೂಕಿನಲ್ಲಿ 4 ಜಿ.ಪಂ. ಕ್ಷೇತ್ರಗಳಿದ್ದು ಜೆಡಿಎಸ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಹಾಗೂ ಕಾಂಗ್ರೆಸ್ ನಾಯಕ ರವೀಂದ್ರ ಶ್ರೀಕಂಠಯ್ಯ ನಡುವೆ ಸಮಬಲದ ಹೋರಾಟ ನಡೆದಿದ್ದು ತಲಾ ಎರಡು ಕ್ಷೇತ್ರಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡಿದ್ದಾರೆ. ಹಾಗೆಯೇ ತಾಲ್ಲೂಕು ಪಂಚಾಯಿತಿಯಲ್ಲಿ ಕಾಂಗ್ರೆಸ್ 7, ಜೆಡಿಎಸ್ 6, ಪಕ್ಷೇತರ 2 ಹಾಗೂ ಬಿಜೆಪಿ 1 ಕ್ಷೇತ್ರದಲ್ಲಿ ಗೆಲುವು ಸಾಧಿಸಿವೆ. ಅಂಬಿ ಬೆಂಬಲಿಗರಾದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜು ಹಾಗೂ ಸಚ್ಚಿದಾನಂದ ಪ್ರಭಾವ ಕಳೆದುಕೊಂಡಿರೋದು ಈ ಫಲಿತಾಂಶದಿಂದ ಸಾಬೀತಾಗಿದೆ.

ಕೆ.ಶೆಟ್ಟಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಗುತ್ತಿಗೆದಾರ ಎಂ.ಸಿ. ಮರಿಯಪ್ಪ ಹಾಗೂ ಕಾಂಗ್ರೆಸ್‌ನ ಕೆ.ಸಿ.ಸೋಮಶೇಖರ್ ನಡುವೆ ನಡೆದ ನೇರ ಹಣಾಹಣಿಯಲ್ಲಿ ಕೇವಲ 125 ಮತಗಳ ಅಂತರದಲ್ಲಿ ಜೆಡಿಎಸ್ ಮರಿಯಪ್ಪ ಗೆಲುವಿನ ನಗೆ ಬೀರಿದ್ದಾರೆ. ಇದೇ ಕ್ಷೇತ್ರದಿಂದ ಅಂಬಿ ಬೆಂಬಲಿಗ ಲಿಂಗರಾಜು ತನ್ನ ಮಗ ದರ್ಶನ್‌ಗೆ ಹಾಗೂ ಸಿಎಂ ಸಿದ್ದರಾಮಯ್ಯನ ಶಿಷ್ಯ ಭಾಸ್ಕರ್‌ಗೌಡ ತನಗೇ ಟಿಕೆಟ್ ಬೇಕೆಂದು ಕೇಳಿದ್ದರು. ಆದರೆ ರವೀಂದ್ರ ಶ್ರೀಕಂಠಯ್ಯ ತನ್ನ ಬೆಂಬಲಿಗ ಕೆ.ಸಿ. ಸೋಮಶೇಖರ್‌ನನ್ನು ಅಭ್ಯರ್ಥಿಯಾಗಿಸುವಲ್ಲಿ ಯಶಸ್ವಿಯಾಗಿದ್ದರು. ಕಾಂಗ್ರೆಸ್ ಟಿಕೆಟ್ ಕೇಳಿದ್ದ ದರ್ಶನ್ ಹಾಗೂ ಭಾಸ್ಕರ್ ಕಾಂಗ್ರೆಸ್‌ಗೆ ಉಲ್ಟಾ ಹೊಡೆದಿದ್ದು ಸೋಮಶೇಖರ್ ಸೋಲಿಗೆ ಕಾರಣ.

ಶ್ರೀರಂಗಪಟ್ಟಣ ಕಸಬಾ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ರಜನಿ ಸುರೇಶ್ ಎದುರು ರವೀಂದ್ರ ಶ್ರೀಕಂಠಯ್ಯ ತನ್ನ ಪಕ್ಷದ ಕಾವ್ಯರನ್ನು 158 ಮತಗಳ ಅಂತರದಿಂದ ಗೆಲ್ಲಿಸಿಕೊಂಡಿದ್ದಾರೆ. ಬೆಳಗೊಳ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಪದ್ಮಾನಾರಾಯಣ್ ಎದುರು ಕಾಂಗ್ರೆಸ್ ಅಭ್ಯರ್ಥಿ ಸವಿತಾರನ್ನು 3030 ಮತಗಳ ಅಂತರಿಂದ ಗೆಲ್ಲಿಸಿಕೊಳ್ಳುವಲ್ಲಿ ರವೀಂದ್ರ ಶ್ರೀಕಂಠಯ್ಯ ಯಶಸ್ವಿಯಾಗಿದ್ದಾರೆ. ಅರಕೆರೆ ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ಹೆಚ್ಚು, ಜೆಡಿಎಸ್ ಅಭ್ಯರ್ಥಿ ಪ್ರಭಾವತಿ ಪ್ರಕಾಶ ಹಾಗೂ ಕಾಂಗ್ರೆಸ್‌ನ ಸವಿತಾ ಇಬ್ಬರು ಈ ಕ್ಷೇತ್ರದ ಗಾಮನಹಳ್ಳಿ ಗ್ರಾಮದವರು. ಈ ಕ್ಷೇತ್ರದಲ್ಲಿ ರವೀಂದ್ರ ಶ್ರೀಕಂಠಯ್ಯನವರ ಕುಟುಂಬದ ಹಿಡಿತ ಜೋರಾಗಿದ್ದರೂ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಜೆಡಿಎಸ್‌ನ ಪ್ರಭಾವತಿಯವರನ್ನು 1004 ಮತಗಳ ಅಂತರದಿಂದ ಗೆಲ್ಲಿಸಿ ಸಮಬಲ ಸಾಧಿಸಿದ್ದಾರೆ.

ಪಾಂಡವಪುರ ತಾಲೂಕು

ಪಾಂಡವಪುರ ತಾಲೂಕಿನ 5 ಜಿ.ಪಂ. ಕ್ಷೇತ್ರಗಳಲ್ಲಿ ನಾಲ್ಕರಲ್ಲಿ ಜೆಡಿಎಸ್ ಹುರಿಯಾಳುಗಳನ್ನು ಗೆಲ್ಲಿಸಿಕೊಳ್ಳುವ ಮೂಲಕ ಸಂಸದ ಸಿ.ಎಸ್.ಪುಟ್ಟರಾಜು ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ್ದಾರೆ. ತಾಲ್ಲೂಕು ಪಂಚಾಯಿತಿಯಲ್ಲೂ ಜೆಡಿಎಸ್ ಸ್ಪಷ್ಟ ಬಹುಮತ ಪಡೆದಿದೆ. 17 ಕ್ಷೇತ್ರಗಳಲ್ಲಿ ಜೆಡಿಎಸ್ 10, ಕಾಂಗ್ರೆಸ್ 2, ಎಸ್‌ಕೆಪಿ 3, ಪಕ್ಷೇತರರು 2 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಕಾಂಗ್ರೆಸ್ ಪಕ್ಷದ ಜೊತೆ ಮೈತ್ರಿಮಾಡಿಕೊಂಡು ಮೂರು ಜಿ.ಪಂ.ಕ್ಷೇತ್ರಗಳಲ್ಲಿ ಸರ್ವೋದಯ ಕರ್ನಾಟಕ ಪಕ್ಷದಿಂದ ಅಭ್ಯರ್ಥಿಗಳನ್ನು ನಿಲ್ಲಿಸಿದ್ದರು. ಸಂಸದ ಸಿ.ಎಸ್.ಪುಟ್ಟರಾಜು ಕೊಟ್ಟ ಹೊಡೆತಕ್ಕೆ ಅವರ ಪಕ್ಷದ ಎಲ್ಲಾ ಅಭ್ಯರ್ಥಿಗಳು ಮಕಾಡೆ ಮಲಗಿದ್ದಾರೆ. ಮಾಜಿ ಸಂಸದೆ, ಚಿತ್ರನಟಿ ರಮ್ಯಾ ಬಂದು ಪ್ರಚಾರ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಸಿ.ಎಸ್.ಪುಟ್ಟರಾಜು ವಿರುದ್ಧ ಆರೋಪಗಳ ಸುರಿಮಳೆಯನ್ನೇ ಸುರಿಸಿದ ರಮ್ಯಾ ಮ್ಯಾಜಿಕ್ ಕ್ಷೇತ್ರದಲ್ಲಿ ಫಲ ನೀಡಿಲ್ಲ.

ಚಿನಕುರುಳಿ ಜಿ.ಪಂ.ಕ್ಷೇತ್ರದಿಂದ ಕಣಕ್ಕಿಳಿದಿದ್ದ ಸಂಸದ ಸಿ.ಎಸ್.ಪುಟ್ಟರಾಜು ಅಣ್ಣನ ಮಗ ಜೆಡಿಎಸ್ ಅಭ್ಯರ್ಥಿ ಅಶೋಕ್ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣೇಗೌಡರನ್ನು 2937 ಮತಗಳ ಅಂತರದಿಂದ ಸೋಲಿಸಿದ್ದಾರೆ. ಚಿಕ್ಕಾಡೆ ಜಿ.ಪಂ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ತಿಮ್ಮೇಗೌಡರನ್ನು ಸಂಸದ ಪುಟ್ಟರಾಜು ಬಿಜೆಪಿ ಅಭ್ಯರ್ಥಿ ಎಚ್.ಎನ್.ಮಂಜುನಾಥ್ ಎದುರು 3583 ಮತಗಳ ಅಂತರದಿಂದ ಗೆಲ್ಲಿಸಿಕೊಂಡಿ ದ್ದಾರೆ. ಲಕ್ಷ್ಮೀಸಾಗರ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್ ಪಕ್ಷದ ಅಭ್ಯರ್ಥಿ ಶಾಂತಲಾ ಕೃಷ್ಣೇಗೌಡ ತಮ್ಮ ಪ್ರತಿಸ್ಪರ್ಧಿ ಸರ್ವೋದಯ ಕರ್ನಾಟಕ ಪಕ್ಷದ ಮಹದೇವಮ್ಮರನ್ನು 4891 ಭಾರೀ ಅಂತರದಿಂದ ಸೋಲಿಸಿ ಗೆಲುವಿನ ನಗೆ ಬೀರಿದ್ದಾರೆ.

ಶಾಸಕ ಕೆ.ಎಸ್.ಪುಟ್ಟಣ್ಣಯ್ಯನವರ ಸ್ವಗ್ರಾಮ ಕ್ಯಾತನಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಕಳೆದ ಬಾರಿ ಸರ್ವೋದಯ ಕರ್ನಾಟಕ ಪಕ್ಷ ಗೆದ್ದಿತ್ತು, ಈ ಬಾರಿ ಅಲ್ಲಿನ ಮತದಾರರು ಬದಲಾವಣೆ ಬಯಸಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ಪ್ರಗತಿ ಎದುರು ಜೆಡಿಎಸ್‌ನ ಅನುಸೂಯರನ್ನು 1810 ಮತಗಳ ಅಂತರದಿಂದ ಗೆಲ್ಲಿಸಿಕೊಂಡಿದ್ದಾರೆ. ಶಾಸಕ ಪುಟ್ಟಣ್ಣಯ್ಯನವರ ಮ್ಯಾಜಿಕ್ ಈ ಬಾರಿ ನಡೆದಿಲ್ಲ.

ಜಕ್ಕನಹಳ್ಳಿ ಜಿ.ಪಂ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕಾಡೇನಹಳ್ಳಿ ರಾಮಚಂದ್ರು ಎದುರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಶಾಸಕ ಹಲಗೇಗೌಡರ ಪುತ್ರ ಹೆಚ್.ತ್ಯಾಗರಾಜು 1920 ಮತಗಳ ಅಂತರದಲ್ಲಿ ಜಯಭೇರಿ ಬಾರಿಸಿದ್ದಾರೆ. ಕಾಡೇನಹಳ್ಳಿ ರಾಮಚಂದ್ರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದು, ಆತನಿಗೆ ಸಂಸದ ಸಿ.ಎಸ್.ಪುಟ್ಟರಾಜು ಟಿಕೆಟ್ ಕೊಡಿಸಿದ್ದು ಜೆಡಿಎಸ್ ಕಾರ್ಯಕರ್ತರ ಹಾಗೂ ಮುಖಂಡರ ಅಸಮಾಧಾನಕ್ಕೆ ಕಾರಣವಾಗಿ ಆತನ ಸೋಲಿನೊಂದಿಗೆ ಸಮಾಪ್ತಿಯಾಗಿದೆ.

ಕೆ.ಆರ್.ಪೇಟೆ ತಾಲೂಕು

ಕೆ.ಆರ್.ಪೇಟೆ ತಾಲೂಕಿನಲ್ಲಿ 6 ಜಿ.ಪಂ. ಕ್ಷೇತ್ರಗಳ ಪೈಕಿ 5ರಲ್ಲಿ ಜೆಡಿಎಸ್ ಗೆಲುವು ಸಾಧಿಸಿದ್ದು, ಕೇವಲ ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಯಗಳಿಸಿದ್ದಾರೆ. ತಾ.ಪಂ.ಕ್ಷೇತ್ರದಲ್ಲಿ 15 ಸ್ಥಾನಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು

⏭07

ಕೊಡಗು: ಕಾಂಗ್ರೆಸ್ ಪಕ್ಷಕ್ಕೆ ಶಸ್ತ್ರ ಚಿಕಿತ್ಸೆ ಅಗತ್ಯ

ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಯನ್ನು ಮತ್ತೆ ತನ್ನ ವಶಕ್ಕೆ ಪಡೆದುಕೊಂಡು ಪ್ರಾಬಲ್ಯವನ್ನು ಮೆರೆದಿದೆ. ಕೊಡಗು ಜಿಲ್ಲೆಯ ಬಹುತೇಕ ಎಲ್ಲಾ ಅಧಿಕಾರ ಸ್ಥಾನಗಳು ಬಿಜೆಪಿಯ ಕೈಯಲ್ಲಿಯೇ ಇದ್ದು, ಈಗ ಮೂರು ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಬಿಜೆಪಿ ಗೆದ್ದುಕೊಂಡಿದೆ.

ಕಳೆದ ಬಾರಿ ಜಿಲ್ಲಾ ಪಂಚಾಯಿತಿಯಲ್ಲಿ ಬಿಜೆಪಿಗೆ 21 ಸ್ಥಾನಗಳು ಹಾಗೂ ಕಾಂಗ್ರೆಸಿಗೆ 6 ಸ್ಥಾನಗಳು ಇದ್ದವು. ಈ ಬಾರಿ ಬಿಜೆಪಿಗೆ 18 ಸ್ಥಾನಗಳು ಲಭಿಸಿದ್ದರೆ, ಕಾಂಗ್ರೆಸಿಗೆ 10 ಸ್ಥಾನಗಳು ಹಾಗೂ ಜೆಡಿಎಸ್‌ಗೆ 1 ಸ್ಥಾನ ಲಭಿಸಿದೆ. ಜಿಲ್ಲಾ ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್‌ರವರು ನಮಗೆ ಹೆಚ್ಚಿನ ಸ್ಥಾನ ಲಭಿಸಿದ್ದೇ ತಮ್ಮ ಪುಣ್ಯದ ಫಲ ಎನ್ನುವಂತೆ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಮತ್ತಷ್ಟು ಸ್ಥಾನಗಳನ್ನು ಗೆಲ್ಲುವ ಅವಕಾಶ ಇತ್ತು. ಆದರೆ ತನ್ನ ಸ್ವಯಂಕೃತ ಅಪರಾಧದಿಂದಾಗಿ ಸಾಕಷ್ಟು ಸ್ಥಾನಗಳನ್ನು ಕಳೆದುಕೊಂಡಿತು.

ಈ ಚುನಾವಣೆಯಲ್ಲಿ ಗಮನಿಸಬೇಕಾದಂತಹ ಹಲವಾರು ಅಂಶಗಳು ಇವೆ. ಕೊಡಗಿನಲ್ಲಿ ಕಾಂಗ್ರೆಸಿನ ಹೆಚ್ಚಿನ ಅಧಿಕಾರಿಯುತ ಸ್ಥಾನಗಳು ಇರುವುದು ಮಡಿಕೇರಿ ತಾಲೂಕಿನಲ್ಲಿ. ಅದರಲ್ಲಿಯೂ ವಿಶೇಷವಾಗಿ ನಾಪೋಕ್ಲು ಗ್ರಾಮದಲ್ಲಿ. ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಹಿಂದಿನ ಬಾಗಿಲಿನಲ್ಲಿ ಕುಳಿತು ನಿಯಂತ್ರಿಸುತ್ತಾ ಕಾಂಗ್ರೆಸನ್ನು ಜಿಲ್ಲೆಯಲ್ಲಿ ಇಂತಹ ದುಃಸ್ಥಿತಿಗೆ ತಂದ ಖ್ಯಾತಿಯ ಬಿ.ಟಿ. ಪ್ರದೀಪ್ ಅವರಿಗೆ ಸಲ್ಲುತ್ತದೆ. ಇವರ ಹುಟ್ಟೂರು ನಾಪೋಕ್ಲು. ಅಲ್ಲದೆ ಇಲ್ಲಿಯೇ ವಕ್ಫ್ ಮಂಡಳಿಯ ಅಧ್ಯಕ್ಷರು, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು, ಅರೆಭಾಷೆ ಅಕಾಡೆಮಿಯ ಅಧ್ಯಕ್ಷರು ಎಲ್ಲರೂ ಇದ್ದಾರೆ. ನಾಪೋಕ್ಲು ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಅತ್ಯಂತ ಪ್ರಭಾವಿಯಾಗಿದ್ದವರು ಹಂಸ ಎಂಬವವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಅವರಿಗೆ ಟಿಕೆಟು ಸಿಗದಿದ್ದ ಕಾರಣ ಅವರು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಅವರು ದ್ವಿತೀಯ ಸ್ಥಾನಕ್ಕೆ ಬಂದಿದ್ದರೆ, ಕಾಂಗ್ರೆಸ್ ತೃತೀಯ ಸ್ಥಾನಕ್ಕೆ ಬಂತು. ಹಂಸ ಅವರಿಗೆ ಅವಕಾಶ ನೀಡಿದ್ದರೆ ಖಂಡಿತವಾಗಿಯೂ ಅಲ್ಲಿ ಕಾಂಗ್ರೆಸ್ ಗೆಲ್ಲುತ್ತಿತ್ತು. ಆದರೆ ಅವರು ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ಕಾರ್ಯಕ್ರಮದ ಪರವಾಗಿದ್ದರು ಮತ್ತು ಕಾರ್ಯಕ್ರಮದ ನಂತರ ನಡೆದಂತಹ ಘಟನೆಯನ್ನು ವಿರೋಧಿಸಲು ಎ.ಕೆ. ಸುಬ್ಬಯ್ಯನವರ ನೇತೃತ್ವದಲ್ಲಿ ರಚಿಸಲ್ಪಟ್ಟ ಸಮಾನ ಮನಸ್ಕರ ಜಾತ್ಯತೀತ ಒಕ್ಕೂಟದೊಂದಿಗೆ ಗುರುತಿಸಿಕೊಂಡಿದ್ದರು ಎನ್ನುವ ಕಾರಣಕ್ಕಾಗಿ ಅವರಿಗೆ ಅವಕಾಶ ನೀಡಲಿಲ್ಲ. ಇದು ಕಾಂಗ್ರೆಸಿಗೆ ಬಿ.ಟಿ. ಪ್ರದೀಪ್‌ರವರ ಕೊಡುಗೆ. ಹೀಗೆ ಮಡಿಕೇರಿ ತಾಲೂಕಿನ 7 ಸ್ಥಾನಗಳು ಬಿಜೆಪಿಯ ಪಾಲಾದವು. ಇಲ್ಲಿ ಶಾಸಕ ಕೆ.ಜಿ. ಬೋಪಯ್ಯನವರ ಪ್ರಾಬಲ್ಯ ಕಂಡು ಬಂತು. ಹೀಗೆ ಕಾಂಗ್ರೆಸ್ ಅನೇಕ ತಪ್ಪುಗಳನ್ನು ಮಾಡಿ ಮಡಿಕೇರಿಯನ್ನು ಬಿಜೆಪಿಯ ವಶಕ್ಕೆ ಒಪ್ಪಿಸಿತು.

ಅದೇ ರೀತಿಯಲ್ಲಿ ವಿರಾಜಪೇಟೆ ತಾಲೂಕಿನ ಅಮ್ಮತ್ತಿ


ಕೆ.ಪಿ ಚಂದ್ರಕಲಾ


ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಪ್ರದೀಪ್ ತನ್ನ ಸಂಬಂಧಿಯೊಬ್ಬರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಅತ್ಯಂತ ನಿಕೃಷ್ಟ ಮತಗಳನ್ನು ಅವರು ಗಳಿಸಿದರು. ವಿರಾಜಪೇಟೆ ತಾಲೂಕಿನ 11 ಸ್ಥಾನಗಳ ಪೈಕಿ 6 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಇದರಲ್ಲಿ ಹಲವು ಸ್ಥಾನಗಳು ಅವರ ವೈಯಕ್ತಿಕ ಪ್ರಭಾವದಿಂದ ಗೆದ್ದಂತಹ ಸ್ಥಾನಗಳು. ಶ್ರೀಮಂಗಲ ಕ್ಷೇತ್ರದಲ್ಲಿ ಶಿವು ಮಾದಪ್ಪ ಹಾಗೂ ಪೊನ್ನಂಪೇಟೆ ಕ್ಷೇತ್ರದಲ್ಲಿ ಶ್ರೀಜಾ ಶಾಜಿ ಗೆದ್ದಿರುವುದು ತಮ್ಮ ವೈಯಕ್ತಿಕ ಪ್ರಭಾವದಿಂದ. ಅದೇ ರೀತಿಯಲ್ಲಿ ತಿತಿಮತಿ ಗಿರಿಜನ ಮೀಸಲು ಕ್ಷೇತ್ರ ಹಾಗೂ ಚೆನ್ನಯ್ಯನಕೋಟೆ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದಲೂ ಕಾಂಗ್ರೆಸ್ ಗೆದ್ದಿದ್ದು, ಪಕ್ಷದ ಜೊತೆಯಲ್ಲಿ ಕೆಲವು ಪ್ರಮುಖರ ಪ್ರಭಾವ ಅವರ ಗೆಲುವಿಗೆ ಕಾರಣವಾಗಿತ್ತು. ಬಾಳೆಲೆ ಕ್ಷೇತ್ರದಲ್ಲಿ ನಿಕಟ ಪೂರ್ವ ಸದಸ್ಯ ಪ್ರಥ್ಯು ಆಯ್ಕೆಯಾಗಿದ್ದು ಕೂಡ, ಪಕ್ಷದ ವರ್ಚಸಿನ ಜೊತೆಯಲ್ಲಿ ವೈಯಕ್ತಿಕ ಪ್ರಭಾವ ಕಾರಣ.

ಅತ್ಯಂತ ಹೆಚ್ಚು ಕುತೂಹಲಕಾರಿಯಾಗಿದ್ದಂತಹ ಕ್ಷೇತ್ರ ವಿರಾಜಪೇಟೆ ತಾಲೂಕಿನ ಸಿದ್ಧಾಪುರ ಕ್ಷೇತ್ರ. ಇಲ್ಲಿ ಸರಿತಾ ಪೂಣಚ್ಚ ಎಂಬ ಮಹಿಳೆ ನಿಕಟಪೂರ್ವ ಸದಸ್ಯೆಯಾಗಿದ್ದರೂ, ಆಕೆಗೆ ಅವಕಾಶ ನೀಡಲು ಕಾಂಗ್ರೆಸ್ ಪಕ್ಷ ಬಹಳ ವಿಳಂಬ ಮಾಡಿತು. ಜಿಲ್ಲಾ ಕಾಂಗ್ರೆಸ್ ಸಮಿತಿ ಆಕೆಗೆ ಸಂಪೂರ್ಣವಾಗಿ ವಿರೋಧವನ್ನು ಮಾಡಿತ್ತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ ಪ್ರದೀಪ್ ಮತ್ತು ಸರಿತಾ ಪೂಣಚ್ಚರವರ ನಡುವೆ ಇದ್ದಂತಹ ವೈಮನಸ್ಸು ಇದಕ್ಕೆ ಕಾರಣವಾಗಿತ್ತು. ಸರಿತಾ ಪೂಣಚ್ಚ ಕೊಡಗು ಜಿಲ್ಲಾ ಪಂಚಾಯಿತಿಯಲ್ಲಿ ಆಡಳಿತಾರೂಢ ಬಿಜೆಪಿಗೆ ಸಿಂಹ ಸ್ವಪ್ನವಾಗಿದ್ದಂತಹ ಮಹಿಳೆ. ಯಾವುದೇ ಒತ್ತಡಕ್ಕೂ ಮಣಿಯದೆ, ಬಿಜೆಪಿಯನ್ನು ಸಮರ್ಥವಾಗಿ ಎದುರಿಸುತ್ತಿದ್ದ ಮಹಿಳೆ. ಸಾಕಷ್ಟು ಭ್ರಷ್ಟಾಚಾರವನ್ನು ಬಯಲಿಗೆಳೆದದ್ದೇ ಅಲ್ಲದೆ, ಕೆ.ಜಿ. ಬೋಪಯ್ಯನವರು ಸ್ಪೀಕರ್ ಆಗಿದ್ದ ವೇಳೆಯಲ್ಲಿಯೇ ಅವರ ವಿರುದ್ಧವೂ ಸಮರ ಸಾರಿದ್ದ ಮಹಿಳೆ. ಮುಂದೆ ವಿರಾಜಪೇಟೆ ಕ್ಷೇತ್ರದಲ್ಲಿ ಶಾಸಕ ಸ್ಥಾನಕ್ಕೆ ತನಗೆ ಸರಿತಾ ಕಂಟಕವಾಗಬಹುದು ಎಂಬ ಭಾವನೆಯಿಂದ ಆಕೆ ಸ್ಪರ್ಧಿಸದಂತೆ ಸಾಕಷ್ಟು ಪ್ರಯತ್ನವನ್ನು ಪ್ರದೀಪ್ ಮಾಡಿದ್ದರು. ನಂತರವೂ ಮಾಜಿ ಸಂಸದ ವಿಶ್ವನಾಥ್ ಆಕೆಯ ಬೆಂಬಲಕ್ಕೆ ನಿಂತ ಕಾರಣ, ಕ್ಷೇತ್ರ ಬದಲಾವಣೆಗೆ ಒತ್ತಡ ತಂದಿದ್ದರು. ಆಕೆ ಟಿಪ್ಪು ಗಲಭೆಯನ್ನು ವಿರೋಧಿಸಿ, ಸಮಾನ ಮನಸ್ಕರ ಜಾತ್ಯತೀತ ಒಕ್ಕೂಟ ಜೊತೆಯಲ್ಲಿ ಗುರುತಿಸಿಕೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿಯಾಗಿದ್ದೇ ಆಕೆಗೆ ಇದ್ದಂತಹ ದೋಷ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಬಹಿರಂಗವಾಗಿ ಸಭೆಗಳಲ್ಲಿ ಹೇಳಿತ್ತು.

ಆಕೆಗೆ ಅವಕಾಶ ನೀಡಲೇಬೇಕು ಎಂಬ ಒತ್ತಡ ಎಲ್ಲಾ ವಲಯದಿಂದ ಬಂದ ನಂತರ, ಗತ್ಯಂತರವಿಲ್ಲದೆ ಅವಕಾಶವನ್ನು ನೀಡಲಾಗಿತ್ತು. ಇದರ ಜೊತೆಯಲ್ಲಿ ಅವರ ಸೋಲಿಗೆ ಬೇಕಾದಂತಹ ಎಲ್ಲಾ ಕಾರ್ಯಕ್ರಮಗಳನ್ನು ಕಾಂಗ್ರೆಸಿನ ಪ್ರಮುಖರು ಹಮ್ಮಿಕೊಂಡಿದ್ದರು. ಅಲ್ಲಿಯ ಬ್ಲಾಕ್ ಅಧ್ಯಕ್ಷ ಉಸ್ಮಾನ್ ಹಾಜಿ, ಮಾಜಿ ಸದಸ್ಯ ಎಂ.ಎಸ್. ವೆಂಕಟೇಶ್ ಮುಂತಾದವರು ಬಹಿರಂಗವಾಗಿ ಆಕೆಯ ವಿರುದ್ಧ ಪ್ರಚಾರ ಮಾಡಿದ್ದರು. ಆಕೆಯ ವಿರುದ್ಧ ಕಾಂಗ್ರೆಸಿನ ಹಣದ ಹೊಳೆ ಹರಿದಿತ್ತು. ಯಾವ ರೀತಿಯಲ್ಲಿ ಅಪಪ್ರಚಾರ ಮಾಡಬಹುದೋ, ಅಷ್ಟೆಲ್ಲಾ ಅಪಪ್ರಚಾರವನ್ನು ಮಾಡಲಾಗಿತ್ತು.

ಪ್ರತಿಸ್ಪರ್ಧಿಯಾಗಿದ್ದ ಬಿಜೆಪಿಯ ಪ್ರಬಲ ಅಭ್ಯರ್ಥಿ ಕಾಂತಿ ಸತೀಶ್‌ರವರು ಈ ಹೋರಾಟವು ಟಿಪ್ಪು ಮತ್ತು ಕಾವೇರಿ ಮಾತೆಯ ನಡುವಿನ ಹೋರಾಟ ಎಂದು ಪ್ರಚಾರ ಮಾಡಿದ್ದೇ ಅಲ್ಲದೆ, ಸರಿತಾರವರನ್ನು ಆಯ್ಕೆ ಮಾಡಿದರೆ, ಮುಂದೆ ಟಿಪ್ಪು ಜನ್ಮ ದಿನಾಚರಣೆ ಮತ್ತಷ್ಟು ಗಟ್ಟಿಯಾಗಿ ನಡೆಯಲಿದೆ ಎಂದು ವಾಟ್ಸಪ್‌ಗಳಲ್ಲಿ ಸಂದೇಶಗಳನ್ನು ರವಾನೆ ಮಾಡಿದ್ದರು. ಎಸ್.ಡಿ.ಪಿ.ಐ. ಸ್ವಯಂ ಪ್ರೇರಿತವಾಗಿ ಬೆಂಬಲವನ್ನು ನೀಡಿದರೆ ಅಂತಹ ಬೆಂಬಲ ತಮಗೆ ಬೇಕಾಗಿಲ್ಲ ಎಂದು ಬ್ಲಾಕ್ ಸಮಿತಿ ಹೇಳಿಕೆಯನ್ನು ನೀಡುವ ಮೂಲಕ ಗೊಂದಲವನ್ನು ಸೃಷ್ಟಿಸಿತ್ತು. ಇಷ್ಟೆಲ್ಲಾ ಆದ ನಂತರವೂ ಸರಿತಾ ಪೂಣಚ್ಚ ಅಲ್ಲಿ ವಿಜಯಿಯಾದರು. ಇದನ್ನು ಕಾವೇರಿ ಮಾತೆಯ ಸೋಲು ಎಂದು ಬಿಜೆಪಿಯ ಕಾಂತಿ ಸತೀಶ್ ಚುನಾವಣೆಯ ನಂತರ ವಿಶ್ಲೇಷಿಸಿದ್ದಾರೆ.

ಸೋಮವಾರಪೇಟೆ ತಾಲೂಕಿನಲ್ಲಿ 4 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಅತ್ಯಂತ ಗಮನಾರ್ಹವಾದ ವಿಚಾರವೆಂದರೆ ಮಾದಾಪುರ ಕ್ಷೇತ್ರದಲ್ಲಿ ಕುಮುದ ಧರ್ಮಪ್ಪ ಆಯ್ಕೆಯಾಗಿದ್ದಾರೆ. ಮಾದಾಪುರವು ಶಾಸಕ ಅಪ್ಪಚ್ಚು ರಂಜನ್‌ರವರ ನಿವಾಸವಿರುವ ಪ್ರದೇಶ. ಜೊತೆಯಲ್ಲಿ ಮಾಜಿ


ಸರಿತಾ ಪೂಣಚ್ಚ

ಅಧ್ಯಕ್ಷ ಬಿ.ಡಿ. ಮಂಜುನಾಥ್‌ರವರ ಕ್ಷೇತ್ರವೂ ಹೌದು. ಇದರ ಜೊತೆಯಲ್ಲಿ ಟಿಪ್ಪು ಗಲಭೆಯ ವೇಳೆಯಲ್ಲಿ ಸತ್ತಂತಹ ಸಂಘ ಪರಿವಾರದ ಕುಟ್ಟಪ್ಪರವರ ಕ್ಷೇತ್ರವೂ ಹೌದು. ಹಾಗಾಗಿ ಯಾವುದೇ ಕಾರಣಕ್ಕೂ ಇಲ್ಲಿ ಕಾಂಗ್ರೆಸ್ ಗೆಲ್ಲುವುದಿಲ್ಲ ಎಂದು ಬಿಜೆಪಿ ಹೇಳಿಕೊಂಡಿತ್ತು. ತಮ್ಮ ಜೊತೆಯಲ್ಲಿ ಟಿಪ್ಪು ವಿರೋಧ ಹಾಗೂ ಕುಟ್ಟಪ್ಪ ಇರುವುದರಿಂದ ತಾವು ಗೆದ್ದೇ ಗೆಲ್ಲುತ್ತೇವೆ ಎಂದು ಹೇಳಿಕೊಂಡಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಮಾತ್ರವಲ್ಲ ಇದರ ಜೊತೆಯಲ್ಲಿ ಇರುವಂತಹ ಸುಂಟಿಕೊಪ್ಪ ಕ್ಷೇತ್ರದಿಂದ ಕಾಂಗ್ರೆಸಿನ ಕೆ.ಪಿ. ಚಂದ್ರಕಲಾ ಹಾಗೂ ಗುಡ್ಡೆಹೊಸೂರು ಕ್ಷೇತ್ರದಿಂದ ಪಿ.ಎಂ. ಲತೀಫ್‌ರವರು ಆಯ್ಕೆಯಾಗಿದ್ದು, ಬಿಜೆಪಿ ಚಲಾಯಿಸಿದ್ದ ಟಿಪ್ಪು ವಿರೋಧದ ದಾಳ ಇಲ್ಲಿ ಕೆಲಸ ಮಾಡಲಿಲ್ಲ.

ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜನ್ಮ ದಿನಾಚರಣೆಯನ್ನು ವಿರೋಧಿಸಿದ್ದು ಬಿಜೆಪಿಗಿಂತ ಹೆಚ್ಚು ಕಾಂಗ್ರೆಸ್ ಸಮಿತಿಯೇ ಆಗಿತ್ತು. ಟಿಪ್ಪು ಜನ್ಮ ದಿನಾಚರಣೆಯಿಂದಾಗಿ ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚುತ್ತದೆ ಎಂದು ಕಾಂಗ್ರೆಸಿಗರು ವಿಶ್ಲೇಷಿಸುತ್ತಿದ್ದರು. ಅಧ್ಯಕ್ಷರಾಗಿದ್ದ ಪ್ರದೀಪ್ ಇದಕ್ಕೆಲ್ಲಾ ಕಾರಣರಾಗಿದ್ದರು. ಆದರೆ ಅವರ ಲೆಕ್ಕಾಚಾರಗಳೆಲ್ಲವೂ ಬುಡಮೇಲು ಆಯಿತು. ಟಿಪ್ಪು ಜನ್ಮ ದಿನಾಚರಣೆಯ ನಂತರವೂ ಕಾಂಗ್ರೆಸ್ ಪಕ್ಷ 6ರಿಂದ 10 ಸ್ಥಾನಕ್ಕೆ ಏರಿತು. ಮಾತ್ರವಲ್ಲ ಬಿಜೆಪಿ 21ರಿಂದ 18ಕ್ಕೆ ಇಳಿಯಿತು. ಈ ವಾಸ್ತವಾಂಶವನ್ನು ಕಾಂಗ್ರೆಸ್ ನಾಯಕರು ಅರಿತುಕೊಳ್ಳುತ್ತಾರೋ ಇಲ್ಲವೋ ತಿಳಿಯದು. ಕಾಂಗ್ರೆಸ್ ಪಕ್ಷಕ್ಕೆ ಕೊಡಗಿನ ಮಟ್ಟಿಗೆ ಶಸ್ತ್ರ ಚಿಕಿತ್ಸೆ ಅಗತ್ಯ.

■ ಬಿ.ಎನ್.ಮನುಶೆಣೈ

---

06 ⏮

ಗೆದ್ದು ಅಧಿಕಾರ ಹಿಡಿದಿದ್ದಾರೆ. 8 ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ 1 ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶಾಸಕ ಕೆ.ಸಿ.ನಾರಾಯಣಗೌಡರ ವರ್ಚಸ್ಸಿಗಿಂತ ಜೆಡಿಎಸ್ ವರಿಷ್ಠ ದೇವೇಗೌಡ ಹಾಗೂ ಕುಮಾರಸ್ವಾಮಿ ಕುಟುಂಬದ ಹಿಡಿತ ಈ ಕ್ಷೇತ್ರದಲ್ಲಿದ್ದು, ಜೆಡಿಎಸ್ ಅಭ್ಯರ್ಥಿಗಳ ಜಯದಿಂದ ಸಾಬೀತಾಗಿದೆ. ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಹಾಗೂ ಮಾಜಿ ಸ್ಪೀಕರ್ ಕೃಷ್ಣರವರ ಆಟ ನಡೆಯಲು ದೊಡ್ಡಗೌಡರು ಅವಕಾಶ ನೀಡಿಲ್ಲ.

ಅಕ್ಕಿ ಹೆಬ್ಬಾಳು ಜಿ.ಪಂ. ಕ್ಷೇತ್ರದಿಂದ ಜೆಡಿಎಸ್‌ನ ಬಿ.ಎಲ್.ದೇವರಾಜು ಕಾಂಗ್ರೆಸ್‌ನ ರಾಮೇಗೌಡರನ್ನು 1872 ಮತಗಳ ಅಂತರದಿಂದ ಸೋಲಿಸಿದ್ದಾರೆ. ಹಿರೀಕಳಲೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ರಾಮದಾಸ್ 2935 ಮತಗಳ ಅಂತರದಿಂದ ಕಾಂಗ್ರೆಸ್‌ನ ಸಣ್ಣಯ್ಯರನ್ನು ಸೋಲಿಸಿದ್ದಾರೆ. 10 ವರ್ಷದ ಹಿಂದಿನಿಂದಲೂ ಜೆಡಿಎಸ್ ಟಿಕೆಟ್ ವಂಚಿತನಾಗಿದ್ದ ರಾಮದಾಸ್ ಪರ ಕ್ಷೇತ್ರದಲ್ಲಿ ಇದ್ದ ಅನುಕಂಪ ಅವರ ಕೈ ಹಿಡಿದಿದೆ.

ಬೂಕನಕೆರೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಪಿ.ಕೆ. ಗಾಯಿತ್ರಿ 123 ಮತಗಳ ಅಂತರದಿಂದ ಕಾಂಗ್ರೆಸ್‌ನ ರತ್ನಮ್ಮರವರನ್ನು ಸೋಲಿಸಿದ್ದಾರೆ. ಈ ಕ್ಷೇತ್ರದಲ್ಲಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸಹೋದರ ಕೆ.ಬಿ.ಮಹೇಶ್ ಹಾಗೂ ಜಿ.ಪಂ. ಸದಸ್ಯೆ ಸರ್ವಮಂಗಳ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಸಾಕಷ್ಟು ಹಿಣುಕಾಡಿದ್ದರೂ ಜೆಡಿಎಸ್‌ನ ಸಾವಿತ್ರಿಗೆ ಗೆಲುವಿನ ಮಾಲೆ ಬಿದ್ದಿದೆ.

ಸಂತೇಬಾಚಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಮಾಜಿ ಜಿ.ಪಂ. ಅಧ್ಯಕ್ಷೆ ಪ್ರೇಮಾಕುಮಾರಿ ಕಾಂಗ್ರೆಸ್‌ನ ಕುಸುಮಾರನ್ನು 670 ಮತಗಳ ಅಂತರದಿಂದ ಸೋಲಿಸಿ ವಿಜಯ ಸಾಧಿಸಿದ್ದಾರೆ. ಶೀಳನೆರೆ ಜಿ.ಪಂ.ಕ್ಷೇತ್ರದಲ್ಲಿ ಜೆಡಿಎಸ್‌ನ ಮಂಜುನಾಥ್ ಕಾಂಗ್ರೆಸ್‌ನ ಅಭ್ಯರ್ಥಿ ಹಾಲಿ ಮನ್‌ಮುಲ್ ನಿರ್ದೇಶಕ ಶೀಳನೆರೆ ಎಸ್.ಅಂಬರೀಶ್‌ರನ್ನು 2254 ಮತಗಳ ಅಂತರದಿಂದ ಸೋಲಿಸಿ ಜೆಡಿಎಸ್ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಜೆಡಿಎಸ್ ಪ್ರಾಬಲ್ಯವಿರುವ ಈ ಕ್ಷೇತ್ರದಿಂದ ಈ ಹಿಂದೆ ಜೆಡಿಎಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿ ಜಿ.ಪಂ. ಉಪಾಧ್ಯಕ್ಷರಾಗಿದ್ದ ಶೀಳನೆರೆ ಅಂಬರೀಶ್ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲಿನ ರುಚಿ ಕಂಡಿದ್ದಾರೆ.

ಮದ್ದೂರು ತಾಲೂಕು

ಮದ್ದೂರು ತಾಲೂಕಿನಲ್ಲಿ 7 ಜಿ.ಪಂ. ಕ್ಷೇತ್ರಗಳ ಪೈಕಿ 5 ಕ್ಷೇತ್ರಗಳಲ್ಲಿ ಜಾ.ದಳ ವಿಜಯಪತಾಕೆಯನ್ನು ಹಾರಿಸಿದ್ದು ಕೇವಲ ಎರಡು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಗೆಲುವು ಸಾಧಿಸಿದೆ. ತಾ.ಪಂ.ಯಲ್ಲಿ 27 ಕ್ಷೇತ್ರಗಳ ಪೈಕಿ ಜೆಡಿಎಸ್ 18 ಸ್ಥಾನಗಳಲ್ಲಿ ಜಯಭೇರಿ ಬಾರಿಸಿದ್ದು 9 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿದೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಗುರುಚರಣ್, ಮಧು ಮಾದೇಗೌಡ ಸೇರಿದಂತೆ ಕಾಂಗ್ರೆಸ್ ನಾಯಕರ ಬಣ್ಣ ಬಯಲಾಗಿದೆ. ಜಿ.ಪಂ. ಮತ್ತು ತಾ.ಪಂ.ನಲ್ಲಿ ಜೆಡಿಎಸ್ ಗೆಲುವಿನ ಅಲೆಯಲ್ಲಿಯೂ ಶಾಸಕ ಡಿ.ಸಿ.ತಮ್ಮಣ್ಣನವರ ಮಗ ಸಂತೋಷ್ ಭಾರತೀನಗರ ಕ್ಷೇತ್ರದಲ್ಲಿ ಸೋತಿರುವುದು ಆಘಾತ ಉಂಟುಮಾಡಿದೆ.

ಸ್ಥಳೀಯ ಶಾಸಕರ ಪುತ್ರ ಡಿ.ಟಿ.ಸಂತೋಷ್ ಸ್ಪರ್ಧೆಯಿಂದ ಭಾರತೀನಗರ ಜಿ.ಪಂ. ಅತ್ಯಂತ ಪ್ರತಿಷ್ಠೆಯ ಕ್ಷೇತ್ರವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಅಣ್ಣೂರು ರಾಜೀವ್‌ನ ಸೋಲಿಸಿ ಮಾಜಿ ಸಂಸದ ಜಿ.ಮಾದೇಗೌಡರ ಪಾರುಪತ್ಯಕ್ಕೆ ತಡೆಹಾಕಬೇಕೆಂದು ನಿರ್ಧರಿಸಿದ ತಮ್ಮಣ್ಣ ಅದಕ್ಕಾಗಿ ತಮ್ಮ ಪುತ್ರನನ್ನೇ ಕಣಕ್ಕಿಳಿಸಿದ್ದರು. ಆದರೆ ಕ್ಷೇತ್ರದ ಮತದಾರ ಅಣ್ಣೂರು ರಾಜೀವ್‌ನ ಗೆಲ್ಲಿಸಿ ಸಂತೋಷ್‌ಗೆ ಸೋಲುಣಿಸಿದ್ದಾರೆ. ಸಂತೋಷ್ ಗೆಲ್ಲಬೇಕೆಂದು ತೆರೆಮರೆಯಲ್ಲಿ ವಸತಿ ಸಚಿವ ಅಂಬರೀಶ್ ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಮಧು ಜಿ.ಮಾದೇಗೌಡ ಹಾಗೂ ರಾಜೀವ್‌ರವರ ಜನಬಲದ ಎದುರು ಹಣಬಲದ ಸಂತೋಷ್ 972 ಮತಗಳ ಅಂತರದಿಂದ ಸೋಲಿನ ರುಚಿ ಕಂಡಿದ್ದಾರೆ. ಚಿಕ್ಕಅರಸಿನಕೆರೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಸುಕನ್ಯಾ ಕಾಂಗ್ರೆಸ್‌ನ ಗೌರಮ್ಮರನ್ನು 5253 ಮತಗಳ ಭಾರೀ ಅಂತರದಿಂದ ಸೋಲಿಸಿದ್ದಾರೆ. ಈ ಹಿಂದೆ ಇದೇ ಕ್ಷೇತ್ರದಲ್ಲಿ ಈಕೆಯ ಪತಿ ಹನುಮಂತು ಸೋಲು ಕಂಡಿದ್ದರು. ಪತಿಯ ಸೋಲಿನ ಅನುಕಂಪ ಸುಕನ್ಯಾ ಕೈಹಿಡಿದಿದೆ. ಬೆಸಗರಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಮರಿಹೆಗ್ಗಡೆ ಕಾಂಗ್ರೆಸ್‌ನ ತಾ.ಪಂ. ಹಾಲಿ ಸದಸ್ಯೆ ಲಕ್ಷ್ಮಿ ಚೆನ್ನರಾಜುರವರನ್ನು 1796 ಮತಗಳ ಅಂತರದಿಂದ ಸೋಲಿಸಿದ್ದಾರೆ. ಕೆಸ್ತೂರು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಸುಚಿತ್ರಾ ಮಹೇಂದ್ರಕುಮಾರ್ 1690 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಫುಲ್ಲಾ ಮಹೇಶ್‌ರನ್ನು ಸೋಲಿಸಿ ಮಕಾಡೆ ಮಲಗಿಸಿದ್ದಾರೆ. ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ ಹಣ ಚೆಲ್ಲಿದರೂ ಸೊಸೆ ಪ್ರಫುಲ್ಲರನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗಿಲ್ಲ.

ಚಾಮನಹಳ್ಳಿ ಜಿ.ಪಂ. ಕ್ಷೇತ್ರದಿಂದ ಕೋಟ್ಯಾಧಿಪತಿ ಉದ್ಯಮಿ ಸ್ವಾಮಿ ತನ್ನ ಪತ್ನಿ ನಾಗರತ್ನರನ್ನು ಜೆಡಿಎಸ್‌ನಿಂದ ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆಕೆ ಕಾಂಗ್ರೆಸ್‌ನ ಮಮತಾರನ್ನು 2402 ಮತಗಳ ಅಂತರದಿಂದ ಸೋಲಿಸಿದ್ದಾರೆ. ಸೋಮಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಬೋರಯ್ಯ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ದೊರೆಸ್ವಾಮಿಯವರನ್ನು 450 ಮತಗಳ ಅಂತರದಿಂದ ಸೋಲಿಸಿದ್ದಾರೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಕುಟುಂಬದ ಹಿಡಿತವಿರುವ ಸೋಮನಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತಿರುವುದು ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ಉಂಟುಮಾಡಿದೆ. ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ತಮ್ಮ ಬೆಂಬಲಿಗ ದೊರೆಸ್ವಾಮಿಯನ್ನು ಗೆಲ್ಲಿಸಿಕೊಂಡಿದ್ದಾರೆ. ಕೊಪ್ಪ ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಾನಕಮ್ಮ ಜೆಡಿಎಸ್‌ನ ಶ್ರೀಮತಿ ನಾಗರಾಜ್‌ರನ್ನು 1651 ಮತಗಳ ಅಂತರದಲ್ಲಿ ಸೋಲಿಸಿ ಕಾಂಗ್ರೆಸ್ ಮಾನ ಕಾಪಾಡಿದ್ದಾರೆ. ಈ ಕ್ಷೇತ್ರ ನಾಗಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿದ್ದು ಶಾಸಕ ಚಲುವರಾಯಸ್ವಾಮಿ ಪ್ರಭಾವ ಪರಿಣಾಮ ಬೀರಿಲ್ಲ.

ನಾಗಮಂಗಲ ತಾಲೂಕು

ನಾಗಮಂಗಲ ತಾಲೂಕಿನಲ್ಲಿ 5 ಜಿ.ಪಂ. ಕ್ಷೇತ್ರಗಳ ಪೈಕಿ ಎಲ್ಲಾ 5 ಕ್ಷೇತ್ರಗಳಲ್ಲೂ ಶಾಸಕ ಎನ್.ಚಲುವರಾಯಸ್ವಾಮಿ ಸಾರಥ್ಯದ ಜೆಡಿಎಸ್ ವಶಪಡಿಸಿಕೊಂಡಿದೆ. ಒಂದು ಕ್ಷೇತ್ರದಲ್ಲೂ ಖಾತೆ ತೆರೆಯದ ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋತು ಮಕಾಡೆ ಮಲಗಿದೆ. ತಾ.ಪಂ.ನಲ್ಲಿಯೂ ಶಾಸಕ ಚಲುವರಾಯಸ್ವಾಮಿ ತಮ್ಮ ಪಕ್ಷದ 16 ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಮೂಲಕ ಪ್ರಾಬಲ್ಯ ಮೆರೆದಿದ್ದಾರೆ. ಕಾಂಗ್ರೆಸ್ ಕೇವಲ 2 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಮಾಜಿ ಶಾಸಕ ಸುರೇಶ್‌ಗೌಡರಿಗೆ ತೀವ್ರ ಮುಖಭಂಗವಾಗಿದೆ.

ಬೆಳ್ಳೂರು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಮುತ್ತಣ್ಣ ಕಾಂಗ್ರೆಸ್‌ನ ಮಹೇಶ್‌ರವರನ್ನು 949 ಮತಗಳ ಅಂತರದಿಂದ ಸೋಲಿಸಿದ್ದಾರೆ. ದೇವಲಾಪುರ ಜಿ.ಪಂ. ಕ್ಷೇತ್ರದಲ್ಲಿ ಕೋಟಿ ಕುಳಗಳ ಕಾಳಗದಲ್ಲಿ ಜೆಡಿಎಸ್ ಅಭ್ಯರ್ಥಿ ರುಕ್ಮಿಣಿ ಕಾಂಗ್ರೆಸ್ ಅಭ್ಯರ್ಥಿ ಸಾವಿತ್ರಮ್ಮನವರನ್ನು 1004 ಮತಗಳ ಅಂತರದಿಂದ ಸೋಲಿಸಿದ್ದಾರೆ. ಚೀಣ್ಯ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಸುಶೀಲಮ್ಮನವರು ಕಾಂಗ್ರೆಸ್‌ನ ತೇಜಸ್ವಿನಿಯವರನ್ನು 8954 ಮತಗಳ ಭಾರೀ ಅಂತರದಿಂದ ಸೋಲಿಸಿದ್ದಾರೆ. ಮಾಯಿಗೋನಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಸುನಂದಮ್ಮ ಕಾಂಗ್ರೆಸ್‌ನ ಪಾರ್ವತಿಯವರನ್ನು 2037 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಬಿಂಡಿಗನವಿಲೆ ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಲಿ ಒಕ್ಕಲಿಗ ಸಂಘದ ನಿರ್ದೇಶಕ ಹೆಚ್.ಎಂ.ನಾರಾಯಣ ಮೂರ್ತಿ 1709 ಮತಗಳ ಅಂತರದಿಂದ ಸೋಲು ಕಂಡಿದ್ದಾನೆ. ಜೆಡಿಎಸ್‌ನ ಡಿ.ಕೆ.ಶಿವಪ್ರಕಾಶ್ ಜಯಭೇರಿ ಬಾರಿಸಿದ್ದಾರೆ. ಮಾಜಿ ಶಾಸಕ ಸುರೇಶ್‌ಗೌಡರಿಗೆ ನಾರಾಯಣಮೂರ್ತಿಗೆ ಟಿಕೆಟ್ ಕೊಡಿಸುವುದು ಇಷ್ಟವಿರಲಿಲ್ಲ. ಆದರೂ ಸಿಎಂ ಸಿದ್ದರಾಮಯ್ಯನವರ ಪ್ರಭಾವದಿಂದ ಟಿಕೆಟ್ ಪಡೆದ ನಾರಾಯಣಮೂರ್ತಿ ಹೀನಾಯವಾಗಿ ಸೋತಿದ್ದಾನೆ.


ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಹೀನಾಯ ಸೋಲಿಗೆ ಜಿಲ್ಲಾ ಉಸ್ತುವಾರಿ ಮತ್ತು ವಸತಿ ಸಚಿವ ಅಂಬರೀಶ್ ನೇರ ಕಾರಣವಾಗಿದ್ದಾರೆ. ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದ್ದರೂ ಜಿಲ್ಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಜಿಲ್ಲೆಯಲ್ಲಿ ಅಂಬರೀಶ್ ಕಾರ್ಯಕರ್ತರನ್ನು ಹಾಗೂ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಕಟ್ಟುವ ಕೆಲಸವನ್ನು ಇದುವರೆಗೂ ಮಾಡಿಲ್ಲ. ರಾಷ್ಟ್ರೀಯ ಹಬ್ಬ ಸೇರಿದಂತೆ ಮೂರು ತಿಂಗಳಿಗೊಮ್ಮೆ ಬಂದು ಹೋಗುವ ಅಂಬರೀಶ್‌ರ ಕಾರ್ಯವೈಖರಿಯಿಂದ ಜಿಲ್ಲೆಯ ಜನತೆ ಬೇಸತ್ತಿದ್ದು ಕಾಂಗ್ರೆಸ್ ಪಕ್ಷವನ್ನು ಜಿ.ಪಂ. ಹಾಗೂ ತಾ.ಪಂ. ಚುನಾವಣೆಯಲ್ಲಿ ಹೀನಾಯವಾಗಿ ಸೋಲಿಸಿ ಆಡಳಿತ ಪಕ್ಷದ ಮೇಲೆ ಹಾಗೂ ಸೋಮಾರಿ ಸಚಿವ ಅಂಬರೀಶ್ ಮೇಲೆ ತಮ್ಮ ಸಿಟ್ಟನ್ನು ತೋರಿಸಿಕೊಂಡಿದ್ದಾರೆ. ಒಟ್ಟಾರೆ ಈ ಫಲಿತಾಂಶ ಅಂಬಿಯ ಸಚಿವ ಸ್ಥಾನದ ಮೇಲೆ ತೂಗುಗತ್ತಿಯನ್ನು ತೂಗಾಡಿಸುತ್ತಿದೆ.

■ ವರದಿಗಾರ

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷಗಾದಿ ಚುನಾವಣೆಗೆ ಇನ್ನೇನು ಕ್ಷಣಗಣನೆ ಶುರುವಾಗಿದೆ. ಫೆಬ್ರವರಿ 28ಕ್ಕೆ ಸರಿಸುಮಾರು ಒಂದು ಲಕ್ಷದ ಎಂಬತ್ತು ಸಾವಿರ ಕಸಾಪ ಸದಸ್ಯರು ಹೊಸ ಸಾರಥಿಗಳ ಆಯ್ಕೆಗೆ ಮತ ಚಲಾಯಿಸಲು ದಿನಾಂಕವೂ ನಿಕ್ಕಿಯಾಗಿದೆ. ಕಸಾಪ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ದಲಿತ ಸಾಹಿತಿಯೊಬ್ಬರನ್ನು ಕನ್ನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸುವ ಮೂಲಕ ನಿಕಟಪೂರ್ವ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರು ಹೊಸದೊಂದು ಕ್ರಾಂತಿಕಾರಿ ದಿಕ್ಕನ್ನು ತೋರಿಸಿಕೊಟ್ಟಿದ್ದರು. ಕಸಾಪದ ಮುಂದಿನ ಅಧ್ಯಕ್ಷರಾಗಿ ಆಯ್ಕೆಗೊಳ್ಳುವವರೂ ಸಹ ಇಂತದ್ದೇ ದಿಟ್ಟ ಹೆಜ್ಜೆಗಳಿಗೆ ಸಾಕ್ಷಿಯಾಗಬಲ್ಲರೇ? ಮುಸುಕಿರುವ ಅಪವಾದಗಳಿಂ ಹೊರಗೆಳೆದು ಕಸಾಪದ ಜಡತ್ವವನ್ನು ಕಿತ್ತೆಸೆಯಬಲ್ಲರೆ? ಕನ್ನಡಿಗರ ಈ ಸ್ವಾಭಿಮಾನಿ ಪ್ರಜ್ಞೆಯನ್ನು ಹೋರಾಟಗಳಲ್ಲಿ ಸಕ್ರಿಯವಾಗಿಸಬಲ್ಲರೇ? ಎಂಬ ಕುತೂಹಲ ಎಲ್ಲರಲ್ಲೂ ಇದೆ. ಇಂತಹ ಗಂಭೀರ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನೋಡಿದಾಗ ಸ್ಪರ್ಧೆಯಲ್ಲಿ ಗಮನ ಸೆಳೆಯೋದು ಮನು ಬಳಿಗಾರ್. ರಾಜ್ಯ ಸರ್ಕಾರದ ಕೆಎ ಶ್ರೇಣಿಯ ಅಧಿಕಾರಿಯಾಗಿ ವಿವಿಧ ಇಲಾಖೆಗಳಲ್ಲಿ, ಪ್ರಧಾನವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕೆಲಸ ಮಾಡಿದ ಅನುಭವ ಇರುವ ಬಳಿಗಾರ್ ಸ್ವತಃ ಒಬ್ಬ ಸಾಹಿತಿ ಮತ್ತು ಸಾಹಿತ್ಯಾಭಿಮಾನಿ. ಕಸಾಪದ ಆಡಳಿತಾಧಿಕಾರಿಯಾಗಿಯೂ ಕೆಲಸ ಮಾಡಿದ್ದಂತವರು. ಒಂದುಕಡೆ ಅಕ್ಷರಕೃಷಿಯ ಮೂಲಕ ಸೃಜನಶೀಲತೆಯನ್ನೂ, ಮತ್ತೊಂದೆಡೆ ಆಡಳಿತಾನುಭವದ ಮೂಲಕ ದಕ್ಷತೆಯನ್ನೂ ಹೊಂದಿರುವ ಮನು ಬಳಿಗಾರ್‌ರ ಸ್ಪರ್ಧೆ ಕುತೂಹಲ ಹುಟ್ಟಿಸಿರೋದೆ ಈ ಕಾರಣಕ್ಕೆ. ಅಂತಹ ಕುತೂಹ ತಣಿಸಿಕೊಳ್ಳಲೆಂದೇ ಮನು ಬಳಿಗಾರ್‌ರನ್ನು 'ಪತ್ರಿಕೆ' ಮಾತಿಗೆಳೆದಾಗ ಹೊರಬಂದ ಅವರ ಕನಸು, ಯೋಜನೆಗಳ ಅಕ್ಷರರೂಪ ಇಲ್ಲಿದೆ...

"ಸಮಾನತೆಯನ್ನು ಕನಸುವುದೇ ಮಾನವತೆಯ ಮೂಲಧರ್ಮ"

ಮನು ಬಳಿಗಾರ್ ಸಂದರ್ಶನ



ಪತ್ರಿಕೆ: ಇಷ್ಟುದಿನ ತಾವು ಸರ್ಕಾರಿಯಂತ್ರದ ಅಧಿಕಾರಿಯಾಗಿ ಕೆಲಸ ಮಾಡಿದ್ದಂತವರು. ಮನಸ್ಸು ಮಾಡಿದ್ದರೆ ಸಕ್ರಿಯ ರಾಜಕಾರಣಕ್ಕೇ ಇಳಿಯಬಹುದಿತ್ತು, ಆದರೆ, ಸಾಹಿತ್ಯಕೃಷಿ ಹಿನ್ನೆಲೆಯ ಕಸಾಪದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸಬೇಕೆಂದು ಏಕೆನ್ನಿಸಿತು?

ಬಳಿಗಾರ್: ಬಾಲ್ಯದಿಂದಲೂ ನನ್ನನ್ನು ಸಾಹಿತ್ಯ ಸೆಳೆಯುತ್ತಲೇ ಇತ್ತು, ಸಣ್ಣಪುಟ್ಟ ಕತೆಗಳಿಂದ ಹಿಡಿದು ಮೇರು ಸಾಹಿತಿಗಳ ಕೃತಿಗಳನ್ನು ಓದುವುದೇ ನನ್ನ ಗೀಳಾಗಿತ್ತು, ಕನ್ನಡ ಭಾಷಾಭಿಮಾನ ನನ್ನೊಳಗೆ ಗಟ್ಟಿಗೊಳ್ಳಲು ಆ ಓದು ಸಹ ಒಂದು ನೆಪವಾಯ್ತು, ಹೀಗೆ ಸಾಗಿದ ನಾನು ಮುಂದೆ ಎಂ.ಎ ಮಾಡಿ, ಕೆಎಎಸ್ ಪೂರೈಸಿ ಸರ್ಕಾರಿ ಹುದ್ದೆಗೇರಿದರೂ ಸಾಹಿತ್ಯದ ಗೀಳು, ಭಾಷಾಭಿಮಾನದ ತುಡಿತ ನನ್ನಿಂದ ದೂರಾಗಲಿಲ್ಲ, ನಿಧಾನಕ್ಕೆ ನನ್ನನ್ನು ಅಕ್ಷರಕೃಷಿಯಲ್ಲಿ ತೊಡಗಿಸಿಕೊಂಡೆ. ಐದು ಕಥಾಸಂಕಲನ, ಆರು ಕವನಸಂಕಲನ, ನಾಲ್ಕು ಲಲಿತ ಪ್ರಬಂಧ ಸಂಕಲನ, ನಾಲ್ಕು ಜೀವನ ಚರಿತ್ರೆ, ಅಂಕಣಗಳ ಬರಹಗುಚ್ಛ, ಏಳು ಸಂಪಾದಿತ ಕೃತಿಗಳೂ ಸೇರಿದಂತೆ ಒಟ್ಟು ಇಪ್ಪತ್ತೆಂಟಕ್ಕೂ ಹೆಚ್ಚು ಕೃತಿಗಳನ್ನು ರಚಿಸುವಷ್ಟರಮಟ್ಟಿಗೆ ನನ್ನ ಸಾಹಿತ್ಯದ ಹಾದಿ ಸಾಗಿಬಂದಿದೆ. ಸಾಹಿತ್ಯ ಮನುಷ್ಯನೊಳಗೆ ಹುಮ್ಮಸ್ಸನ್ನು ತುಂಬುತ್ತೆ ಅನ್ನೋದು ನನ್ನ ವಿಚಾರದಲ್ಲೂ ನಿಜವಾಯ್ತು, ನಿವೃತ್ತಿಯಾಗುವ ವೇಳೆಗಾಗಲೇ ವೃತ್ತಿಯ ಜಂಜಡದಿಂದ ಬಸವಳಿಯುವ ಬದಲು ನಾನು ಮತ್ತಷ್ಟು ಚೈತನ್ಯಶೀಲನಾಗಿದ್ದೆ, ಅದನ್ನು ಕಂಡೇ ರಾಜ್ಯ ಸರ್ಕಾರ ನಿವೃತ್ತಿಯ ನಂತರವೂ ನನ್ನ ಸೇವೆಯನ್ನು ಪಡೆಯಬಯಸಿ ನಿಯುಕ್ತಗೊಳಿಸಿತ್ತು, ಆದರೆ ಸರ್ಕಾರಿ ಸೇವೆ ಮಾಡಿದ್ದು ಸಾಕು ಅಂತ ಮನಸ್ಸು ಹೇಳ್ತಿತ್ತು, ಹಾಗಂತ ವಿಶ್ರಾಂತಿಯ ಹೆಸರಲ್ಲಿ ಜಡವಾಗಿ ಕೂರುವುದೂ ನನಗೆ ಸುತಾರಾಂ ಇಷ್ಟವಿರಲಿಲ್ಲ. ಸಾಹಿತ್ಯದಲ್ಲಿ ಆಳವಾಗಿ ತೊಡಗಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೆ ಅದೇವೇಳೆಗೆ ಕಸಾಪ ಚುನಾವಣೆಯೂ ಎದುರು ಬಂತು. ಹಲವು ಹಿತೈಷಿಗಳು ಸ್ಪರ್ಧಿಸುವಂತೆ ಸಲಹೆ ನೀಡಿದರು. ಮೊದಲಿಂದಲೂ ಕನ್ನಡಾಭಿಮಾನದಲ್ಲೇ ಬೆಳೆದ ನಾನು ನಾಡು, ನುಡಿಯ ಸೇವೆ ಮಾಡಲು ಇದೇ ಒಳ್ಳೆಯ ಅವಕಾಶವೆಂಬ ತೀರ್ಮಾನಕ್ಕೆ ಬಂದೆ. ಕೂಡಲೇ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಸಾಪ ಚುನಾವಣೆಗೆ ಸ್ಪರ್ಧಿಸಿದೆ.

ಇನ್ನು ರಾಜಕಾರಣದ ಬಗ್ಗೆ ಹೇಳಬೇಕಂದ್ರೆ, ನನಗೇನೂ ಪೊಲಿಟಿಕ್ಸ್ ಮೈಲಿಗೆಯ ಸಂಗತಿಯಲ್ಲ, ಆದರೆ ಎಲ್ಲಾ ಪಕ್ಷಗಳಲ್ಲೂ ನನ್ನ ಸ್ನೇಹಿತರಿದ್ದಾರೆ, ಹಿತೈಷಿಗಳಿದ್ದಾರೆ. ನಾನು ಗುಣಗ್ರಾಹಿ ಮನುಷ್ಯ, ಆದೇ ಕಾರಣಕ್ಕೆ ನನ್ನ ಆತ್ಮೀಯರು ನನ್ನನ್ನು ಅಜಾತಶತ್ರು ಅಂತ ಗುರುತಿಸುತ್ತಾರೆ. ಯಾವುದೋ ಒಂದು ಪಕ್ಷದಲ್ಲಿ ಗುರುತಿಸಿಕೊಳ್ಳುವುದು ನನಗೆ ಇಷ್ಟವಾಗಲಿಲ್ಲ, ಹಾಗಾಗಿ ಅದನ್ನೊಂದು ಆಯ್ಕೆಯಾಗಿ ನನ್ನ ಮುಂದೆ ಇರಿಸಿಕೊಳ್ಳಲೇ ಇಲ್ಲ.

ಪತ್ರಿಕೆ: ಕಸಾಪ ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆದರಲ್ಲಿ ಎರಡು ಮಾತಿಲ್ಲ. ಇದೇವೇಳೆ, ಆದರ ಮೇಲಿರುವ ಕೆಲವು ಅಪವಾದಗಳನ್ನೂ ನಾವು ಮರೆಯಲಿಕ್ಕಾಗುವುದಿಲ್ಲ. ಉದಾಹರಣೆಗೆ, ಕನ್ನಡ ಸಾಹಿತ್ಯ ಸಮ್ಮೇಳನ ಒಬ್ಬ ಮಹಿಳಾ ಅಧ್ಯಕ್ಷೆಯನ್ನು ಕಾಣಲು 60 ವರ್ಷಗಳ ಕಾಲ ಕಾಯಬೇಕಾಯ್ತು; ಒಬ್ಬ ದಲಿತ ಸಾಹಿತಿ ಅಧ್ಯಕ್ಷನಾಗಲು 80 ಸಮ್ಮೇಳನಗಳು ಸರಿಯಬೇಕಾಯ್ತು. ಆದಾದ ಮೇಲಾದರು ಇಲ್ಲೀವರೆಗೆ ನಡೆದಿರುವ 81 ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಅಧ್ಯಕ್ಷ ಸ್ಥಾನ ದಕ್ಕಿರೋದು ನಾಲ್ಕು ಜನರಿಗೆ ಮಾತ್ರ. ಇಂತಹ ಅಪವಾದಗಳನ್ನು ನೀವು ಹೇಗೆ ನಿಭಾಯಿಸುತ್ತೀರಿ?

ಬಳಿಗಾರ್: ಮೂಲಭೂತವಾಗಿ ನಾನು ಸಮಾನತಾವಾದಿ, ಜಾತ್ಯತೀತ ಮನಸ್ಸಿನವ. ಇವು ನನ್ನ ರಕ್ತದಲ್ಲೇ ಬೆರೆತಿವೆ; ನನ್ನ ಬರಹಗಳಲ್ಲೂ ಅವು ಪ್ರತಿಫಲಿಸಿವೆ. ಕೇವಲ ಸಾಹಿತ್ಯಶೀಲ ವಿಭಾಗದಲ್ಲಿ ಮಾತ್ರವಲ್ಲ ಆಡಳಿತವನ್ನೂ ಒಳಗೊಂಡಂತೆ ಕಸಾಪದ ಎಲ್ಲಾ ಅಂಗಗಳಲ್ಲೂ ಸಮಾನತೆಯನ್ನು ಸ್ಥಾಪಿಸುವ ಕನಸು ಕಂಡಂತವನು ನಾನು. ಸುಮಾರು ನಾಲ್ಕೂವರೆ ವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕನಾಗಿದ್ದಾಗ ನಾನು ಇದನ್ನೇ ಸಾಕಾರಗೊಳಿಸಿದ್ದೇನೆ. ನನಗಿಂತ ಮೊದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾಹಿತ್ಯ ವಿಭಾಗಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನವೇ ಬರುತ್ತಿರಲಿಲ್ಲ, ಬಂದರೂ ಅದು ಯಾತಕ್ಕೂ ಸಾಕಾಗುತ್ತಿರಲಿಲ್ಲ, ಆದರೆ ನಾನು ಹೆಚ್ಚು ಅನುದಾನವನ್ನು ತಂದು ಹೆಚ್ಚು ದಲಿತ ಮತ್ತು ಬಂಡಾಯ ಸಾಹಿತ್ಯ ಹೊರಬರುವಂತೆ ಮಾಡಿದೆ. ಇದು ನನ್ನ ಸಾಧನೆ ಅಂತ ನಾನು ಹೇಳಿಕೊಳ್ಳುತ್ತಿಲ್ಲ, ಜವಾಬ್ದಾರಿಯುತ, ಪ್ರಜ್ಞಾವಂತ ನಾಗರಿಕನಾಗಿ ಸಾಮಾಜಿಕ ನ್ಯಾಯದ ಬಗೆಗಿರುವ ನನ್ನ ಬದ್ಧತೆಯನ್ನು ಖಾತ್ರಿಪಡಿಸುವುದಕ್ಕೋಸ್ಕರ ಪ್ರಸ್ತಾಪಿಸುತ್ತಿದ್ದೇನೆ.

'ನಾನು ಕಸಾಪದ ಅಧ್ಯಕ್ಷನಾಗಿ ಆಯ್ಕೆಯಾದದ್ದೇ ಆದಲ್ಲಿ ಸಾಧನೆ, ಯೋಗ್ಯತೆ, ಅರ್ಹತೆ, ಪ್ರಾದೇಶಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಆಧಾರವಾಗಿಟ್ಟುಕೊಂಡು ಪಾರದರ್ಶಕವಾಗಿ ಕೆಲಸ ಮಾಡುತ್ತೇನೆ' ಅನ್ನೊ ವಾಕ್ಯವನ್ನು ಈ ನಿಮ್ಮ ಪ್ರಶ್ನೆಗೆ ಬಹಳ ಮುಂಚೆಯೇ ನನ್ನ ಮನವಿ ಪತ್ರದಲ್ಲಿ ಬರೆದುಕೊಂಡಿದ್ದೇನೆ. ಬೇಕಾದ್ರೆ ನೀವೇ ಪರಿಶೀಲಿಸಿ ನೋಡಿ. ಸರ್ಕಾರಿ ಆಡಳಿತ ನನಗೆ ದಕ್ಷತೆಯನ್ನು ಕಲಿಸಿದಂತೆಯೇ ಸಾಹಿತ್ಯ ನನಗೆ ಮಾನವೀಯತೆಯನ್ನು ಕಲಿಸಿದೆ. ಗಂಡು-ಹೆಣ್ಣು, ಜಾತಿ-ಧರ್ಮ, ಮೇಲು-ಕೀಳು ಇವ್ಯಾವುಗಳ ಪೂರ್ವಾಗ್ರಹಕ್ಕೆ ಒಳಗಾಗದೆ ಸಮಾನತೆಯನ್ನು ಕನಸುವುದೇ ಮಾನವೀಯತೆಯ ಮೂಲಧರ್ಮ. ನಾನು ಅಧ್ಯಕ್ಷನಾಗಲಿ, ಬಿಡಲಿ ನನ್ನ ಬದುಕಿನುದ್ದಕ್ಕೂ ಅದನ್ನು ಪಾಲಿಸಿಕೊಂಡು ಹೋಗುತ್ತೇನೆ. ಈಗ ನನಗೆ ಬೆಂಬಲ ಸೂಚಿಸಿರುವ ನಿಕಟಪೂರ್ವ ಅಧ್ಯಕ್ಷ ಪುಂಡಲೀಕ ಹಾಲಂಬಿಯವರು ದಲಿತ ಕವಿ ಸಿದ್ದಲಿಂಗಯ್ಯ ಅವರನ್ನು ಸಮ್ಮೇಳನಾಧ್ಯಕ್ಷ ಮಾಡುವ ಮೂಲಕ ಒಂದು ಹೊಸ ಕ್ರಾಂತಿಯನ್ನು ಮೊಳಗಿಸಿದ್ದಾರೆ. ಅಂತಹ ಪರಂಪರೆಯನ್ನು ನಾನೂ ಮುಂದುವರೆಸಿಕೊಂಡು ಹೋಗುತ್ತೇನೆ.

ಪತ್ರಿಕೆ: ಕಸಾಪ ಈಗ ಸಂಪೂರ್ಣ ರಾಜಕೀಯಮಯವಾಗುತ್ತಿದೆ; ರಾಜಕಾರಣಿಗಳು ಕಸಾಪದೊಳಕ್ಕೆ ಪ್ರವೇಶ ಪಡೆಯುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಈ ಕುರಿತು ತಮ್ಮ ಅಭಿಪ್ರಾಯ.

ಬಳಿಗಾರ್: ಸಾಹಿತ್ಯ ಯಾರಿಗೂ ಸೀಮಿತವಾದದ್ದಲ್ಲ, ರಾಜಕಾರಣಿಯಾದವನೊಬ್ಬ ಸಾಹಿತಿಯಾಗಿರಕೂಡದು ಎಂದೇನಿಲ್ಲವಲ್ಲ, ರಾಜಕಾರಣದ ಜೊತೆಜೊತೆಗೆ ಸಾಹಿತ್ಯದಲ್ಲೂ ತೊಡಗಿಸಿಕೊಂಡ ಎಷ್ಟು ರಾಜಕಾರಣಿಗಳು ಉದಾಹರಣೆಗೆ ಸಿಗುವುದಿಲ್ಲ, ಸಾಹಿತಿಗಳಾದವರಿಗೆ ಒಂದು ರಾಜಕೀಯ ಧೋರಣೆ ಅಂತ ಹೇಗಿರುತ್ತೋ ಹಾಗೆಯೇ ಒಬ್ಬ ರಾಜಕಾರಣಿಗೆ ಸಾಹಿತ್ಯದ ಒಲವೂ ಇರಬಹುದು. ಆ ನಿಟ್ಟಿನಿಂದ ರಾಜಕಾರಣಿ ಕಸಾಪ ಚುನಾವಣೆಯಲ್ಲಿ ಸ್ಪರ್ಧಿಸುವುದು ತಪ್ಪು ಅಂತ ನನಗನ್ನಿಸುವುದಿಲ್ಲ. ಆದರೆ ಹೀಗೆ ಪ್ರವೇಶಿಸಿದವರು ಇಲ್ಲಿಗೆ ಬಂದಮೇಲೆ ಒಳರಾಜಕಾರಣ ಮಾಡಬಾರದು. ಸಾಹಿತ್ಯವನ್ನು ಶುದ್ಧವಾಗಿಡುವುದಷ್ಟೇ ಅವರ ಪ್ರಾಧಾನ್ಯತೆಯಾಗಬೇಕು.

ಆದರೆ ಇಲ್ಲೊಂದು ಮಾತನ್ನು ನಾನು ಹೇಳಲೇಬೇಕು. ಆಳುವ ಸರ್ಕಾರಗಳು ಕಸಾಪ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತವೆ ಎಂಬ ಮಾತುಗಳೂ ನನ್ನ ಕಿವಿಗೆ ಬಿದ್ದಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ನಾನು ಸವೆಸಿದ ಇಷ್ಟು ವರ್ಷಗಳ ಅನುಭವದಲ್ಲಿ ಅಂತಹ ಬೆಳವಣಿಗೆಯೇನೂ ನನ್ನ ಕಣ್ಣಿಗೆ ಕಂಡಿಲ್ಲ, ಕಸಾಪ ಕೇವಲ ಒಂದು ಸಂಸ್ಥೆಯಲ್ಲ ಕನ್ನಡ ಮತ್ತು ಕರ್ನಾಟಕದ ಸಾಕ್ಷಿಪ್ರಜ್ಞೆ, ಅಂತದ್ದು ಪ್ರಭುತ್ವದ ಹಿಡಿತಕ್ಕೆ ಸಿಕ್ಕಿಕೊಳ್ಳುವುದು ಸ್ವೀಕರಿಸುವಂತದ್ದಲ್ಲ, ಆದೇರೀತಿ ಅನುದಾನವನ್ನು ಸ್ವೀಕರಿಸಿದ ಮಾತ್ರಕ್ಕೆ ಕಸಾಪ ಸರ್ಕಾರದ ಹಿಡಿತಕ್ಕೊಳಪಡುತ್ತದೆ ಎಂಬುದೂ ತಪ್ಪು, ಒಂದೊಮ್ಮೆ ಇಂತಹ ವ್ಯವಸ್ಥೆಯೇನಾದರು ಈಗ ಅಸ್ತಿತ್ವದಲ್ಲಿದ್ದರೆ ನನ್ನ ಇದುವರೆಗಿನ ಆಡಳಿತ ಅನುಭವವನ್ನು ಬಳಸಿಕೊಂಡು ಅದನ್ನು ಅಂತ್ಯಗಾಣಿಸುತ್ತೇನೆ.

ಪತ್ರಿಕೆ: ಕಸಾಪ ಚುನಾವಣೆಯಲ್ಲೂ ಜಾತಿ ಮಹತ್ವದ ಪಾತ್ರ ವಹಿಸುತ್ತೆ ಎಂಬ ಮಾತಿದೆ. ಈ ಚುನಾವಣೆಯಲ್ಲಿ ಇದು ನಿಮ್ಮ ಅನುಭವಕ್ಕೆ ಬಂದಿದೆಯಾ?

ಬಳಿಗಾರ್: ನೋಡಿ, ಪುಂಡಲೀಕ ಹಾಲಂಬಿ, ಶೇಖರಗೌಡ ಮಾಲಿ ಪಾಟೀಲ, ದೊಡ್ಡರಂಗೇಗೌಡರು ನನ್ನ ಸ್ಪರ್ಧೆಯ ಸೂಚಕರು. ಇನ್ನುಳಿದಂತೆ ದೇಜಗೌ, ಚಂಪಾ, ಮನರೂರು, ಗೊ.ರು.ಚನ್ನಬಸಪ್ಪ, ಸಿದ್ದಲಿಂಗಯ್ಯ, ಕಮಲಾ ಹಂಪನಾ, ಜಿ.ವೆಂಕಟಸುಬ್ಬಯ್ಯ, ಎಲ್.ಎಸ್.ಶೇಷಗಿರಿರಾವ್, ಮಳಲಿ ವಸಂತಕುಮಾರ್, ಬರಗೂರು, ರಂಜಾನ್ ದರ್ಗಾ, ಬಿ.ಟಿ.ಲಲಿತಾ ನಾಯಕ್ ಹೀಗೆ ಸಾಕಷ್ಟು ಹಿರಿಯ ಸಾಹಿತಿಗಳು ನನಗೆ ಬಹಿರಂಗವಾಗಿ ಬೆಂಬಲ ಸೂಚಿಸಿದ್ದಾರೆ. ಇವರನ್ನು ಜಾತಿಯ ಆಧಾರದಲ್ಲಿ ವರ್ಗೀಕರಿಸಿ ನೋಡಿ. ಯಾವುದೇ ಒಂದು ಜಾತಿಯವರು ಮಾತ್ರ ಇಲ್ಲಿದ್ದಾರಾ? ಅಥವಾ ಪ್ರಬಲ ಜಾತಿಗಳವರು ಮಾತ್ರ ನನ್ನ ಬೆಂಬಲಕ್ಕೆ ಬಂದಿದ್ದಾರಾ?

ನಿಜ ಹೇಳಬೇಕಂದ್ರೆ ನಾನು ಕೊಟ್ಟಿರೊ ಹೆಸರುಗಳ ಪಟ್ಟಿ ತೀರಾ ಚಿಕ್ಕದಾಯ್ತು, ಎಲ್ಲಾ ವರ್ಗದ, ಎಲ್ಲಾ ಜಾತಿಯ ಹಿರಿ-ಕಿರಿ ಸಾಹಿತಿಗಳು, ಕಲಾವಿದರು, ಚಿಂತಕರು, ಹೋರಾಟಗಾರರು ನನ್ನನ್ನು ಬೆಂಬಲಿಸುತ್ತಿದ್ದಾರೆ. ಅವರಲ್ಲೆಲ್ಲ ಜಾತಿಯನ್ನು ಎಣಿಸುವುದಕ್ಕಾಗುವುದಿಲ್ಲ, ಜಾತಿಯ ಕಾರಣಕ್ಕೆ ಅವರ್ಯಾರೂ ನನ್ನ ಜೊತೆಗಿಲ್ಲ, ಹಾಗಾಗಿ ಕಸಾಪ ಚುನಾವಣೆಯಲ್ಲಿ ಜಾತಿ ಪ್ರಭಾವ ಬೀರುತ್ತೆ ಅನ್ನೋ ಅಂಶ ನನ್ನ ಅನುಭವಕ್ಕಂತೂ ಬಂದಿಲ್ಲ.

ಪತ್ರಿಕೆ: ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಗಳಿಗೂ ಸರ್ಕಾರದಿಂದ ಅನುದಾನ ಲಭಿಸುವಂತೆ ಮಾಡುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ತ ಪಾತ್ರ ಅಪಾರ. ಇಂತಹ ಆಲೋಚನೆ ನಿಮಗೆ ಬ ಕಾರಣ?

ಬಳಿಗಾರ್: 1989-90ರಲ್ಲಿ ಬಿಜಾಪುರದಲ್ಲಿ ಜ ಸಾಹಿತ್ಯ ಸಮ್ಮೇಳನವೊಂದು ನಡೆದಿತ್ತು, ನಾನು ಸ್ವಾ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಆ ಸಮ್ಮೇಳನಕ್ಕೆ ನಾ ಖುದ್ದು ಆಸ್ಥೆ ವಹಿಸಿ ಶಿವರಾಮ ಕಾರಂತರನ್ನು ಕರೆ ಅವರು ಬಂದಾಗ ಉಳಿದುಕೊಳ್ಳಲು ಒಳ್ಳೆಯ ಜಾ ಇರಲಿಲ್ಲ, ನಮಗಿದ್ದ ಅನುದಾನದಲ್ಲಿ ಅತಿಥಿಗೆ ಐಬಿ ರೂಮು ಮಾಡಬೇಕಿತ್ತು, ಆ ಐಬಿ ತೀರಾ ಕ ವ್ಯವಸ್ಥೆಯಲ್ಲಿತ್ತು. ಅದನ್ನು ಕಂಡು ಬೇಸರಗೊಂಡ ನಾ ಮುದ್ದೇಬಿಹಾಳದ ನನ್ನ ಮನೆಯಲ್ಲೇ ಅವರನ್ನು ಎ ದಿವಸ ಉಳಿಸಿಕೊಂಡಿದ್ದೆ. ಜಿಲ್ಲಾ ಮಟ್ಟದ ಸಾ ಸಮ್ಮೇಳನಗಳಿಗೇ ಸರ್ಕಾರಗಳಿಂದ ಈ ಮಟ್ಟಿಗಿನ ನಿ ಕಂಡುಬರುತ್ತಿದೆ, ಇನ್ನು ತಾಲ್ಲೂಕು ಮಟ್ಟದಲ್ಲಿ ನಡೆಯ ಸಮ್ಮೇಳನಗಳ ಶೋಚನೆ ಹೇಗಿರಬೇಡ ಅಂತ ನನಗನ್ನಿಸಿತ್ತು.

ಆದಾಗಿ 16 ವರ್ಷಗಳ ನಂತರ ಕನ್ನಡ ಮ ಸಂಸ್ಕೃತಿ ಇಲಾಖೆಯ ನಿರ್ದೇಶಕನ ಹುದ್ದೆ ನನಗೆ ಒ ಬಂದಾಗ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಐದು ಲಕ್ಷ ಮ ತಾಲ್ಲೂಕು ಸಮ್ಮೇಳನಕ್ಕೆ 1 ಲಕ್ಷ ಅನುದಾನ ಬಿಡು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿ, ಅನುಮೋ ಪಡೆದೆ.

ಪತ್ರಿಕೆ: ಕನ್ನಡವನ್ನು ಘಸರಿಸಲು ನಿಮ್ಮದೇ ಯೋಜನೆಯನ್ನೇನಾದರು ಹಾಕಿಕೊಂಡಿದ್ದೀರಾ?

ಬಳಿಗಾರ್: ನನ್ನ ಮುಂದೆ ಎರಡು ಗುರಿಗಳ ಮೊದಲನೆಯದ್ದು ಕನ್ನಡ ತಂತ್ರಾಂಶ ವರದಿಗೆ ಹ ಒತ್ತು ಕೊಡುವುದು. ಇದು ತಂತ್ರಜ್ಞಾನದ ಯು ಪ್ರತಿಯೊಬ್ಬರ ಅಂಗೈಗೂ ಅಂತರ್ಜಾಲ ಬಂದು ತಲು ಅದನ್ನು ಬಳಸಿಕೊಂಡು ಕನ್ನಡ ಭಾಷೆಯನ್ನು ಮತ್ತ ಪ್ರಚುರಪಡಿಸಬೇಕೆನ್ನುವುದು ನನ್ನ ಆಸೆ. ಡಾ. ಚಿದಾನ ಗೌಡರ ನೇತೃತ್ವದಲ್ಲಿ ಗಣಕಯಂತ್ರ ತಜ್ಞರ ತಂಡವೊಂ ಕನ್ನಡ ತಂತ್ರಾಂಶ ವರದಿಯನ್ನು ಸಲ್ಲಿಸಿದೆ. ನಾನು ಕನ್ನ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಿರ್ದೇಶಕನಾಗಿದ್ದಾ ರಚಿಸಿದ್ದಂತಹ ಸಮಿತಿ ಅದು. ವರದಿ ಪೂರ್ಣ ಪ್ರಮಾಣ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ, ಅದಕ್ಕೆ ಒತ್ತುಕೊಟ್ಟು ಜಾರಿಗೆ ತರಲು ಯತ್ನಿಸುತ್ತೇನೆ. ಆಗ ಯುವಪೀಳಿಗೆ ವರಲ್ಲೂ ಕನ್ನಡಾಭಿಮಾನವನ್ನು ಮೊಳೆಸಲು ಸಾಧ್ಯವಾಗುತ್ತ ಕನ್ನಡ ಸಾಹಿತ್ಯವನ್ನೂ ಸಂಪದ್ಭರಿತವಾಗಿಸಬಹುದು.

ನನ್ನ ಅವಧಿಯಲ್ಲಿ ವಿಶ್ವ ಕನ್ನಡ 'ಸಾಹಿತ್ಯ' ಸಮ್ಮೇಳನವ ನಡೆಸಬೇಕು ಎನ್ನುವುದೇ ನನ್ನ ಎರಡನೇ ಮಹದಾ ವಿಶ್ವ ಕನ್ನಡ ಸಮ್ಮೇಳನವನ್ನು ಬೆಳಗಾವಿಯಲ್ಲಿ ಯಶಸ್ವಿಯಾ ಆಯೋಜಿಸಿದ ಅನುಭವ ನನಗಿದೆ. ಅದನ್ನೇ ಬಳಸಿಕೊಂ ಕನ್ನಡ ಸಾಹಿತ್ಯಕ್ಕೂ ಒಂದು ವಿಶ್ವ ಸಮ್ಮೇಳ ಆಯೋಜಿಸಬೇಕು. ಅದರಿಂದೇನು ಪ್ರಯೋಜನ ಅ ನೀವು ಕೇಳಬಹುದು. ನೋಡಿ, ನಮ್ಮ ದೇಶದ ಬಹುಪಾಲು ಪ್ರಾದೇಶಿಕ ಭಾಷೆಗಳು ಇವತ್ತು ಇಂಗ್ಲಿಷ್ ಪ್ರಭಾವ ಸಿಲುಕಿಕೊಂಡಿವೆ. ಆದೊಂದು ಜಾಗತಿಕ ಭಾಷೆ, ಅದ ಸಹಜ ಅಂತ ನೀವಂದುಕೊಂಡಿರಬಹುದು. ಹಾಗಾದ ನಿಮಗೊಂದು ಪ್ರಶ್ನೆ, ಇವತ್ತು ಪ್ರಪಂಚದಲ್ಲಿ ಹೆಚ್ಚು ಜನರ ಮಾತಾಡುವುದು ಯಾವ ಭಾಷೆ ಗೊತ್ತ? ಇಂಗ್ಲಿಷ್ ಅಲ ಚೀನಿಯರ ಮ್ಯಾಂಡರಿನ್ ಭಾಷೆ. ಅದಲ್ಲದೆ ಫ್ರೆಂ ಅರೇಬಿಕ್, ಸ್ಪ್ಯಾನಿಶ್, ಜಪಾನಿ ಭಾಷೆಗಳೂ ಇಂಗ್ಲಿ ಪ್ರಭಾವದ ಹೊರತಾಗಿ ತಮ್ಮ ಅಸ್ಮಿತೆಯನ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಹಾಗಿದ್ದಲ್ಲಿ ನಮ ಪ್ರಾದೇಶಿಕ ಭಾಷೆಗಳಿಗೆ ಅದು ಸಾಧ್ಯವಿಲ್ಲವೇ?

ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ ನಡೆಸುವುದರಿಂದಲೇ ಅದು ಸಾಧ್ಯವಾಗಿಬಿಡುತ್ತೆ ಎಂ ಭ್ರಮೆ ನನ್ನದಲ್ಲ, ಆದರೆ ಆ ಮೂಲಕ ನಮ್ಮ ಸಾಹಿತ್ಯ

ನಿರ್ಮಾತೃ ಮತ್ತು ಕೃತಿಗಳನ್ನು, ಭಾಷೆಯ ಅಸ್ತಿತ್ವವನ್ನು ಪ್ರಪಂಚಕ್ಕೆ ತೆರೆದಿಡಲು ಅದು ಒಂದು ವೇದಿಕೆ ...ತ್ತೆ. ಸತ್ವಯುತ ಕೃತಿಗಳು ವಿಶಾಲಗೊಂಡಷ್ಟೂ ನಮ್ಮ ...ತ್ಯ ಆ ಮೂಲಕ ನಮ್ಮ ಭಾಷೆ ವಿಸ್ತಾರಗೊಳ್ಳುತ್ತದೆ ...ೀದು ನನ್ನ ಅನಿಸಿಕೆ. ಈ ವಿಚಾರವಾಗಿ ನಾನಿನ್ನು ...ಯನ್ನು ಮುಕ್ತವಾಗಿಟ್ಟುಕೊಂಡಿದ್ದೇನೆ. ಎಲ್ಲರ ಸಲಹೆ, ...ನೆ, ಆಕ್ಷೇಪಗಳನ್ನು ಪರಿಗಣಿಸಿಯೇ ಮುಂದಡಿ ...ಟ್ಟಿಸುವೆ.

ಪತ್ರಿಕೆ: ಕಸಾಪ ತನ್ನನ್ನು ತೊಡಗಿಸಿಕೊಳ್ಳಬಹುದಾದಂತಹ ...ವಾ ತೊಡಗಿಸಿಕೊಳ್ಳಲೇಬೇಕಾದಂತಹ ಯಾವ ಜ್ವಲಂತ ...ಸ್ಯೆಗಳು ನಿಮಗೆ ಕಾಣಿಸುತ್ತಿವೆ?

ಬಳಿಗಾರ್: ಇವತ್ತಿನ ಮಟ್ಟಿಗೆ ಹೇಳುವುದಾದರೆ ...ತೃಭಾಷಾ ಮಾಧ್ಯಮ ಸಮಸ್ಯೆ, ಗಡಿ ಸಮಸ್ಯೆ, ನದಿ ...ು ಹಂಚಿಕೆ ವಿವಾದ, ಪ್ರಾದೇಶಿಕ ಅಸಮಾನತೆಗಳಿಗೆ ... ತ್ವರಿತವಾಗಿ ಸ್ಪಂದಿಸಬೇಕಿದೆ. ಅದರಲ್ಲೂ ಮಾತೃಭಾಷಾ ...ಧ್ಯಮದ ಸಮಸ್ಯೆ ಗಂಭೀರವಾದದ್ದು. ಏಕೆಂದರೆ ಮಕ್ಕಳ ...ಯ ಮೇಲೆ, ಆ ಮೂಲಕ ಪ್ರಜ್ಞಾವಂತ ಪೀಳಿಗೆ ...ಮುಗೊಳ್ಳುವುದಕ್ಕೇ ತಡೆಗೋಡೆಯಾಗಬಲ್ಲ ಸವಾಲು ...ು. ಈಗಾಗಲೇ ಸುಪ್ರೀಂಕೋರ್ಟ್ ಪ್ರಾದೇಶಿಕ ...ಷೆಗಳಿಗೆ ಆಘಾತವಾಗುವಂತಹ ನಿಲುವನ್ನು ...ರಹಾಕಿದೆ. ನ್ಯಾಯಾಲಯಕ್ಕೆ ಶೈಕ್ಷಣಿಕ ಮನೋವಿಜ್ಞಾನ ...ಯಿಂದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ...ು ವಿಫಲರಾದದ್ದೇ ಕೋರ್ಟ್‌ನ ಈ ನಿಲುವಿಗೆ ಕಾರಣ ...ನ್ನೋದು ನನ್ನ ಅನಿಸಿಕೆ. ಇದನ್ನೊಂದು ಸಿವಿಲ್ ...ರಣದಂತೆ ಪರಿಗಣಿಸಿದರೆ ಸಾಲದು, ಕಲಿಕಾ ...ೋಧನೆಗಳ ಪುರಾವೆಗಳನ್ನು ನ್ಯಾಯಾಲಯದ ಮುಂದೆ ...ಜರುಪಡಿಸಬೇಕಿದೆ. ಶಿಕ್ಷಣ ಮಂತ್ರಿಗಳ ಆಪ್ತ ...ರ್ಗದರ್ಶಿಯಾಗಿಯೂ ಕೆಲಸ ಮಾಡಿ ಅನುಭವ ಇರುವ ...ಗೆ ಈ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ...ದಷ್ಟು ಆಲೋಚನೆಗಳಿವೆ.

ಇನ್ನು ಗಡಿ ಸಮಸ್ಯೆಗೆ ಬರುವುದಾದರೆ, ಮೊದಲು ...ನ್ನು 'ಸಮಸ್ಯೆ' ಅನ್ನುವುದೇ ತಪ್ಪು, ಅದು ಗಡಿ 'ವಿಷಯ' ...ಷ್ಟೆ. ಆಡಳಿತಾತ್ಮಕವಾಗಿ ಮತ್ತು ಭೌಗೋಳಿಕವಾಗಿ ...ರ್ನಾಟಕದ ಗಡಿ ಸ್ಪಷ್ಟವಾಗಿದೆ. ಹೀಗಿದ್ದರೂ ಆಗಾಗ ...ಳಿಬರುವ ಗಡಿ ತಗಾದೆಗಳನ್ನು ನಾವು ಉಗ್ರವಾಗಿ ...ಭಟಿಸಬೇಕಾಗುತ್ತೆ. ಈ ವಿಚಾರದಲ್ಲಿ ಕೇವಲ ಕಸಾಪ ...ಾತ್ರವಲ್ಲ, ಪ್ರತಿಯೊಬ್ಬ ಕನ್ನಡಿಗನೂ ದನಿಗೂಡಿಸುವ ...ತ್ಯವಿದೆ. ಅದೇರೀತಿ ನದಿ ನೀರಿನ ಹಂಚಿಕೆ ವಿಷಯ ...ಗೂ ಪ್ರಾದೇಶಿಕ ಅಸಮಾನತೆಗಳನ್ನು ಹೋಗಲಾಡಿಸಲು ...ವು ಸಮಗ್ರ ಹೋರಾಟ ನಡೆಸಬೇಕಿದೆ.

ಪತ್ರಿಕೆ: ಕಸಾಪ ಮತದಾರರು ಮನು ಬಳಿಗಾರ್‌ರಿಗೇ ...ಕೆ ಮತ ಹಾಕಬೇಕು?

ಬಳಿಗಾರ್: ಈ ಪ್ರಶ್ನೆ ತುಂಬಾ ನೇರವಾಗಿದೆ, ಹಾಗಾಗಿ ...ತ್ತರವನ್ನೂ ನೇರವಾಗಿ ಕೊಟ್ಟುಬಿಡುತ್ತೇನೆ. ಸಾಹಿತ್ಯ ...ನಶೀಲತೆಯನ್ನು ಕೇಳುತ್ತೆ, ಆಡಳಿತ ದಕ್ಷತೆಯನ್ನು ...ೇಕ್ಷಿಸುತ್ತೆ. ಕಸಾಪದ ಅಧ್ಯಕ್ಷರಾದವರಿಗೆ ಸಾಹಿತ್ಯ ಮತ್ತು ...ಳಿತ ಎರಡರ ಅನುಭವವೂ ಇದ್ದರೆ ಚೆನ್ನ. ಯಾಕಂದ್ರೆ ...ಿತ್ಯದ ಮತ್ತು ಭಾಷೆಯ ಅಭ್ಯುದಯಕ್ಕೆ ಕ್ರಿಯಾಶೀಲ ...ು ಕಾಣುವುದು ಎಷ್ಟು ಮುಖ್ಯವೋ, ಸಕಾರಾತ್ಮಕವಾಗಿ ... ಯೋಜನೆಗಳನ್ನು ಸರ್ಕಾರದೊಂದಿಗೆ ಸಂವಹಿಸಿ ...ರ್ಯರೂಪಕ್ಕೆ ತಂದು ಫಲಪ್ರದವಾಗಿಸುವುದೂ ಅಷ್ಟೇ ...ುಖ್ಯ. ಮೊದಲನೇ ವಿಚಾರಕ್ಕೆ ನಮ್ಮ ಸಾಹಿತ್ಯಿಕ ...ನಶೀಲತೆ ನೆರವಾದರೆ, ಸರ್ಕಾರಿಯಂತ್ರದ ಆಡಳಿತಾತ್ಮಕ ...ರ್ಯ ಕೈಗೂಡುವುದು ಆಡಳಿತ ವ್ಯವಹಾರದಿಂದ. ದೊಡ್ಡ ...ಟ್ಟದ ಸಾಹಿತಿಯಲ್ಲದಿದ್ದರು ಬಾಲ್ಯದಿಂದ ನಾನು ...ಕೊಂಡ ಸಾಹಿತ್ಯಪ್ರೇಮ ನನ್ನೊಳಗೆ ಸಾಹಿತಿ ಮನಸ್ಸನ್ನು ...ರಿಸಿದ್ದರೆ ಮೂರು ದಶಕಗಳ ನನ್ನ ವೃತ್ತಿ ಅನುಭವ ...ಳಿತಾತ್ಮಕ ದಕ್ಷತೆಯನ್ನು ಕಲಿಸಿದೆ.


ಇದಕ್ಕಿಂತಲೂ ಹೆಚ್ಚಾಗಿ ನಾಡುನುಡಿಯ ಸೇವೆ ...ಡಬೇಕೆನ್ನುವ ತುಡಿತವಿದೆಯಲ್ಲ ಅದು ನನ್ನಲ್ಲಿ ಅಪಾರ ...ಮ್ಮಸ್ಸು ತುಂಬಿದೆ. ಎಲ್ಲರನ್ನೂ ಒಟ್ಟಿಗೇ ಕರೆದೊಯ್ಯುವ ...ಮಾಣಿಕ, ಜಾತ್ಯತೀತ ಮನಸ್ಸಿದೆ. ಮಹಿಳೆಯರಿಗೆ ಮತ್ತು ...ವ ಸಾಹಿತಿಗಳಿಗೆ ಹೆಚ್ಚೆಚ್ಚು ಅವಕಾಶ ಮಾಡಿಕೊಟ್ಟು ...ಿತ್ಯ ವೈವಿಧ್ಯತೆಯನ್ನು ಅರಳಿಸುವ ಆಸೆ ಇದೆ. ಈ ...ಲ್ಲ ಕಾರಣಗಳನ್ನು ಮುಂದಿಟ್ಟು ಬೆಂಬಲ ಕೋರುತ್ತಿದ್ದೇನೆ. ...ಗಾಗಲೇ ಇಡೀ ಕರ್ನಾಟಕ ರಾಜ್ಯ ಸುತ್ತಿ ಬಂದಿರುವ ...ಗೆ, ಅಂದುಕೊಂಡಿದ್ದಕ್ಕಿಂತ ಅಭೂತಪೂರ್ವವಾದ ...ಪ್ರತಿಸ್ಪಂದನವೇ ಸಿಕ್ಕಿದೆ. ಗೆಲ್ಲುವ ವಿಶ್ವಾಸ ನನ್ನಲ್ಲಿದೆ. ಫಲಿತಾಂಶ ...ೇ ಬರಲಿ, ನನ್ನ ಸಾಹಿತ್ಯ ಸೇವೆಯನ್ನು ಮಾತ್ರ ...ಸುವುದಿಲ್ಲ.

ಪತ್ರಿಕೆ: ನಿಮಗೆ ಶುಭವಾಗಲಿ...

ಬಳಿಗಾರ್: ಧನ್ಯವಾದಗಳು.

● ಸಂದರ್ಶನ: ಗಿರೀಶ್ ತಾಳಿಕಟ್ಟೆ

ಧಾರವಾಡ ಕಸಾಪ ಚುನಾವಣೆ: ಹಲಗತ್ತಿ V/s ಅಂಗಡಿ


ಶಂಕರ್ ಹಲಗತ್ತಿ


ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗಾದಿಗಳಿಗೆ ಇದೇ 28ರಂದು ಚುನಾವಣೆ ನಡೆಯಲಿದೆ. ಧಾರವಾಡದ ಮಟ್ಟಿಗೆ ಈ ಚುನಾವಣೆ ಜಿಲ್ಲಾ ಪಂಚಾಯತಿ ಚುನಾವಣೆಗಿಂತಲೂ ರಂಗೇರಿದೆ. ಕಾರಣ ಇಷ್ಟು ದಿನ ಜಾತಿಯ ಗದ್ದಲವಿಲ್ಲದೆ ನಡೆಯುತ್ತಿದ್ದ ಕಸಾಪ ಚುನಾವಣೆಯಲ್ಲಿ ಈ ಬಾರಿ ಜಾತಿಯ ಸೋಂಕು ಅಡರಿದೆ. ಅದಕ್ಕಿಂತಲೂ ಮುಖ್ಯವಾಗಿ ಎಡಪಂಥ ಮತ್ತು ಬಲಪಂಥಗಳ ನಡುವಿನ ಸೈದ್ಧಾಂತಿಕ ಸಂಘರ್ಷದಂತಹ ಬಿಗುವನ್ನು ಹುಟ್ಟುಹಾಕಿದೆ. ಧಾರವಾಡದ ವಿದ್ಯಾವರ್ಧಕ ಸಂಘದ ಚುನಾವಣೆಯಲ್ಲಿ ಪ್ರತ್ಯೇಕ ಗುಂಪನ್ನು ರಚಿಸಿಕೊಂಡು ಸ್ಪರ್ಧೆಗೆ ಇಳಿದಿದ್ದ ಸಂಘ ಪರಿವಾರ ಈ ಚುನಾವಣೆಯಲ್ಲಿ ಜಿಲ್ಲಾ ಕಸಾಪ ಹಾಲಿ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿಯನ್ನು ಮುಂದಿಟ್ಟುಕೊಂಡು ಮಸಲತ್ತು ನಡೆಸುತ್ತಿದೆ. ಇದು ಹಿರಿಯ ಸಾಹಿತಿಗಳಲ್ಲಿ ವಿಪರೀತ ಬೇಸರ ತರಿಸಿದೆ. ಹಾಗಾಗಿ ಇದಕ್ಕೆ ಪರ್ಯಾಯವೆಂಬಂತೆ ಎಡಪಂಥೀಯ ವಿಚಾರಧಾರೆಯ ಪ್ರಗತಿಪರ ಗುಂಪು ಹುಟ್ಟಿಕೊಂಡಿದ್ದು ವಿದ್ಯಾವರ್ಧಕ ಸಂಘದ ಹಾಲಿ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿಯ ಬೆಂಬಲಕ್ಕೆ ನಿಂತಿದೆ.

ಜಿಲ್ಲೆಯ ಒಟ್ಟು 2,788 ಮತದಾರರಲ್ಲಿ ಧಾರವಾಡದಲ್ಲಿ 1188, ಹುಬ್ಬಳ್ಳಿಯಲ್ಲಿ 790, ನವಲಗುಂದದಲ್ಲಿ 940, ಕುಂದಗೋಳದಲ್ಲಿ 305, ಕಲಘಟಗಿಯಲ್ಲಿ 110 ಮತದಾರರಿದ್ದಾರೆ. ಡಾ. ಲಿಂಗರಾಜ ಅಂಗಡಿ, ಶಂಕರ ಹಲಗತ್ತಿ, ಮಹೇಶ ಹೊರಕೇರಿ, ಶ್ರೀಮತಿ ಹನುಮಾಕ್ಷಿ ಗೋಗಿ ಹೀಗೆ ಕಸಾಪ ಜಿಲ್ಲಾ ಅಧ್ಯಕ್ಷ ಗಾದಿಗೆ ಒಟ್ಟು ನಾಲ್ಕು ಜನ ಕಣದಲ್ಲಿದ್ದಾರೆ. ಆದರೆ ನೇರ ಪೈಪೋಟಿ ಇರುವುದು ಡಾ. ಲಿಂಗರಾಜ ಅಂಗಡಿ ಹಾಗೂ ಶಂಕರ ಹಲಗತ್ತಿ ನಡುವೆ. ವಿಶೇಷವೆಂದರೆ ಹನುಮಾಕ್ಷಿ ಗೋಗಿ ನಾಲ್ಕನೇ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಚುನಾವಣೆ ಸಮಯದಲ್ಲಿ 'ಸಾಹಿತ್ಯ ಸೇವೆ'ಯ ಜಪ ಮಾಡುವ ಈಯಮ್ಮ ಮತ್ತೆ ಕಾಣಿಸಿಕೊಳ್ಳುವುದು ಮುಂದಿನ ಚುನಾವಣೆಯಲ್ಲೇ. ಗ್ರಂಥಪಾಲಕರಾಗಿರುವ ಮಹೇಶ ಹೊರಕೇರಿ ಇದೇ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಆಷಾಡಭೂತಿ ಅಂಗಡಿ

ಕಳೆದ ಬಾರಿ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾಗ ಮುಂದಿನ ಬಾರಿ ನಿಲ್ಲುವುದಿಲ್ಲ ಎನ್ನುವ ಆಣೆ ಪ್ರಮಾಣ ಮಾಡಿ ಸಿಂಪತಿ ಮೇಲೆ ಆಯ್ಕೆಗೊಂಡಿದ್ದ ಲಿಂಗರಾಜ ಅಂಗಡಿ ಈ ಸಲ ಸ್ಪರ್ಧಿಸುವ ಮೂಲಕ ತನ್ನ ನಾಲಿಗೆಯ ನಿಯತ್ತನ್ನು ಪ್ರದರ್ಶನಕ್ಕಿಟ್ಟಿದ್ದಾನೆ. ಅಂಗಡಿಯದ್ದು ಪಕ್ಕಾ ಪೊಲಿಟಿಕಲ್ ಲೆಕ್ಕಾಚಾರಗಳು. ಹಾಗೆ ನೋಡಿದರೆ, ಎಂಎಲ್‌ಸಿ ಆಗಬೇಕೆನ್ನುವ ವಿಪರೀಪ ಹಂಬಲ ಆತನಿಗಿದೆ. ಅದೇ ಆಸೆಯಿಂದ ಮೊದಮೊದಲು ಬಸವರಾಜ್ ಹೊರಟ್ಟಿಯೊಂದಿಗೆ ಗುರುತಿಸಿಕೊಂಡಿದ್ದ. ಆದರೆ ಯಾವಾಗ ಬಸವರಾಜ್ ಹೊರಟ್ಟಿ ತನ್ನ ಕುಟುಂಬದ ಹೊರತು ಮತ್ತಾರಿಗೂ ಅವಕಾಶ ಮಾಡಿಕೊಡಲ್ಲ ಅನ್ನೋದು ಖಾತ್ರಿಯಾಯ್ತೊ ಆಗಲೇ ಹೊರಟ್ಟಿ ಅಂಗಳದಲ್ಲಿದ್ದ ಅಂಗಡಿ ಬಂದ್ ಆಗಿತ್ತು. ನಾನು ಸಮಾಜವಾದಿ, ಕಮ್ಯುನಿಸ್ಟ್ ಅಂತೆಲ್ಲಾ ಪೋಜು ಕೊಡುತ್ತಲೇ ಸಿಪಿಎಂ ಗೆಳೆಯರ ಗೊಬ್ಬರದಿಂದ ಪೊಗರ್‌ದಸ್ತಾಗಿ ಬೆಳೆದಿದ್ದ ಲಿಂಗರಾಜ್ ಅಂಗಡಿ ತನ್ನ ಎಂಎಲ್‌ಸಿ ಕನಸು ನನಸು ಮಾಡಿಕೊಳ್ಳಲು ನೇರ ಎಡತಾಕಿದ್ದು ಚಡ್ಡಿ ಸಂಘದ ಬಿಜೆಪಿಯನ್ನು!

ಲಿಂಗರಾಜ ಅಂಗಡಿ, ಜಗದೀಶ್ ಶೆಟ್ಟರ್ ಸಮ್ಮುಖದಲ್ಲಿ ಕಮಲ ಅಪ್ಪಿಕೊಂಡಿದ್ದೇ ಮುಂದಿನ ಚುನಾವಣೆಯಲ್ಲಿ ಶಿಕ್ಷಕರ ಕ್ಷೇತ್ರದಿಂದ ತನಗೆ ಎಂಎಲ್‌ಸಿ ಟಿಕೆಟ್ ಗ್ಯಾರಂಟಿ ಎನ್ನುವ ಅಭಯ ಸಿಕ್ಕಮೇಲೆ. ಆದರೆ ಅಂಗಡಿಗೆ ಕೈಕೊಟ್ಟ ಬಿಜೆಪಿ ಮಾ. ನಾಗರಾಜನನ್ನು ಅಭ್ಯರ್ಥಿಯಾಗಿ ಘೋಷಿಸಿ ಎಲ್ಲಾ ತಯಾರಿಯನ್ನೂ ಆರಂಭಿಸಿದೆ. 'ಬಿಜೆಪಿಗೆ ನಾನು ಹೋಗಿ ದೊಡ್ಡ ತಪ್ಪು ಮಾಡಿದೆ. ಶೆಟ್ಟರ್ ನನಗೆ ಮೋಸ ಮಾಡಿದ' ಅಂತೆಲ್ಲಾ ಡಂಗೂರ ಹೊಡೆಯುತ್ತಿರುವ ಲಿಂಗರಾಜ್ ಅಂಗಡಿ ಕಡೇಪಕ್ಷ ಕಸಾಪ ಅಧ್ಯಕ್ಷ ಗಾದಿಯಾದರೂ ಉಳಿಯಲಿ ಅಂತ ತನ್ನ ಪ್ರತಿಜ್ಞೆಯನ್ನೇ ಮರೆತು ಸ್ಪರ್ಧೆಗೆ ನಿಂತಿದ್ದಾನೆ. ಎಡಪಂಥೀಯ ಸಾಹಿತಿ ವಲಯದಿಂದ ಸಂಪೂರ್ಣ ದೂರಗೊಂಡಿರುವ ಈತ ಈ ಸಲ ಗೆಲ್ಲುವುದಕ್ಕಾಗಿ ಜಾತಿ ಲೆಕ್ಕಾಚಾರದಲ್ಲಿ ಮುಳುಗಿದ್ದಾನೆ. ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಹುದ್ದೆಯಿರುವ ಶಂಕರ ಹಲಗತ್ತಿಗೆ ಕಸಾಪ ಜಿಲ್ಲಾಧ್ಯಕ್ಷ ಸ್ಥಾನವೇಕೆ? ಅನ್ನೋ ಪ್ರಶ್ನೆ ಹಾಕುತ್ತಿರುವ ಅಂಗಡಿ ತನಗೇ ಮತ


ಲಿಂಗರಾಜು ಅಂಗಡಿ

ನೀಡುವಂತೆ ಅಂಗಲಾಚುತ್ತಿದ್ದಾನೆ. ಜೊತೆಗೆ ಫೇಸ್‌ಬುಕ್ ರಂಪಾಟದ ಮೂಲಕ ಶಂಕರ ಹಾಲಗತ್ತಿ ಇಮೇಜಿಗೆ ಕುಂದು ತರುವ ಪ್ರಯತ್ನಕ್ಕೂ ಕೈಹಾಕಿದ್ದಾನೆ.

ಶಂಕರ ಹಾಲಗತ್ತಿ ಪ್ರಧಾನ ಕಾರ್ಯದರ್ಶಿಯಾಗಿರುವ ವಿದ್ಯಾವರ್ಧಕ ಸಂಘದಲ್ಲಿ ಹಣದ ಅವ್ಯವಹಾರ ನಡೆದಿದ್ದು ಅದಕ್ಕೆಲ್ಲ ಹಾಲಗತ್ತಿಯೇ ಕಾರಣ ಎನ್ನುವ ಪುಕಾರು ಎದ್ದಿರೋದು ಕೂಡಾ ಅಂಗಡಿ ಹಿಕಮತ್ತಿನಿಂದ. ಈ ಮೊದಲು ಹಿರಿಯ ಸಾಹಿತಿ ಪಾಟೀಲ ಪುಟ್ಟಪ್ಪನವರು ಶಂಕರ ಹಲಗತ್ತಿಗೆ ಬೆಂಬಲ ಸೂಚಿಸಿದ್ದರು. ಆದರೆ ಇಲ್ಲಸಲ್ಲದ ತಾದಾತಿಗಡಿ ಮಾಡಿದ ಅಂಗಡಿ ಕೊನೆಗೆ ಪಾಪು ತಟಸ್ಥರಾಗುಳಿವಂತೆ ಮಾಡಿದ್ದಾನೆ.

ಎಐಎಸ್‌ಎಫ್ ವಿದ್ಯಾರ್ಥಿ ಸಂಘಟನೆಯೊಂದಿಗೆ ಬೆಳೆದ ಶಂಕರ ಹಲಗತ್ತಿ ಎಡಪಂಥೀಯ ಚಳವಳಿಗಳಲ್ಲಿ ಗುರುತಿಸಿಕೊಂಡಂತವರು. ವಿದ್ಯಾವರ್ಧಕ ಸಂಘದಲ್ಲಿ ಹಲವಾರು ವರ್ಷಗಳಿಂದ ತೊಡಗಿಸಿಕೊಂಡಿರುವ ಇವರು ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವ ಸಲುವಾಗಿ ಚಿಲಿಪಿಲಿ ಪ್ರಕಾಶನದ ಹೆಸರಲ್ಲಿ ಮಾಸಪತ್ರಿಕೆಯನ್ನು ಹೊರತರುತ್ತಿದ್ದಾರೆ. ಡಾ. ಸಿದ್ದನಗೌಡ ಪಾಟೀಲ, ಡಾ. ಶ್ರೀಶೈಲ ಹುದ್ದಾರ, ಬಸವರಾಜ ಸೂಳಿಬಾವಿ, ಎಂ.ಡಿ. ಒಕ್ಕುಂದ, ಡಾ. ವಿನಯಾರಂತಹ ಎಡಪಂಥೀಯ ವಿಚಾರಧಾರೆಯ ಗೆಳೆಯರ ಬಳಗವೇ ಇಂದು ಅವರ ಬೆಂಬಲಕ್ಕೆ ನಿಂತಿದೆ.

ಜೊತೆಗೆ ಧಾರವಾಡದ ಹಿರಿಯ ಸಾಹಿತಿಗಳು ಹಾಲಗತ್ತಿಯ ಬೆನ್ನಿಗಿದ್ದಾರೆ. ಕಲಬುರ್ಗಿ ಹತ್ಯೆಯನ್ನು ವಿರೋಧಿಸಿ ಸಾಹಿತ್ಯ ಚಳವಳಿಯನ್ನು ಹುಟ್ಟು ಹಾಕುವಲ್ಲಿ ಹಾಲಗತ್ತಿಯವರ ಪಾತ್ರವೂ ಇದೆ. ಎಡಪಂಥೀಯ ಚಳವಳಿಯ ಮೂಲಕ ಧಾರವಾಡದ ಸಾಹಿತ್ಯ, ಸಾಂಸ್ಕೃತಿಕ ಲೋಕದಲ್ಲಿ ತೊಡಗಿಸಿಕೊಂಡಿರುವ ಹಲಗತ್ತಿ ಧ್ವನಿ ಅಡಗಿಸಲು ಸಂಘ ಪರಿವಾರ ನಾನಾ ಕಸರತ್ತು ನಡೆಸುತ್ತಿದೆ.

■ ಹುಬ್ಬಳ್ಳಿಯಾಂವ

ಪುರುಷನ ಅಜ್ಞಾನ ಹೆಣ್ಣಿನ ಶೋಷಣೆ

ಕಳೆದ ವಾರ ಸಂಪಾದಕೀಯ ಕಂಡಹಾಗೆ 'ಪ್ರೇಮಲತಾರ ಮೌನ ಮತ್ತು ಪಚೌರಿಯ ಬದ್ಧಿ' ಪ್ರಸ್ತುತವಾಗಿತ್ತು.



ಪ್ರೇಮಲತಾರ ವಿಷಯಕ್ಕೆ ಬಂದಾಗ ಸಮಾಜವನ್ನು ತಿದ್ದುವ, ಎಚ್ಚರಿಸುವ, ಮಾರ್ಗದರ್ಶನ ನೀಡಬೇಕಾದ ಖಾವಿಧಾರಿಗಳೇ ಇಂತಹ ಹೀನ ಕೃತ್ಯಕ್ಕೆ ಕೈ ಹಾಕಿದರೆ ಹೇಗೆ?

ಆರ್ಥಿಕ, ಸಾಮಾಜಿಕವಾಗಿ ಪ್ರಬಲ ಹಿನ್ನೆಲೆಯುಳ್ಳ ಇಂತಹವರು ಏನು ಮಾಡಿಬೇಕಾದರೂ ಸಹಿಸಿಕೊಳ್ಳಬಲ್ಲರು ಎನ್ನುವುದಕ್ಕೆ ಈ ಪ್ರಕರಣ ಸಾಕ್ಷಿ! ಇಲ್ಲಿ ಪ್ರೇಮಲತಾರ ಅಸಹಾಯಕತೆ, ಹತಾಶೆ ಎದ್ದು ಕಾಣುತ್ತದೆ. ಆಕೆಗೆ ಕಾನೂನಿನ ನ್ಯಾಯದ ಜತೆಗೆ ಸಮಾಜದ ಸಹಾಯ, ಸಹಕಾರವೂ ಬೇಕು. ಹೆಣ್ಣು ಪ್ರತಿಯೊಂದು ಕ್ಷೇತ್ರದಲ್ಲೂ ಲೈಂಗಿಕವಾಗಿ, ಮಾನಸಿಕವಾಗಿ ಶೋಷಣೆಗೆ ಒಳಗಾಗುತ್ತಾ ಬರುತ್ತಿದ್ದಾಳೆ. ಈ ಬಗ್ಗೆ ಪುರುಷ ಸಮಾಜದಲ್ಲಿ ಅರಿವು, ಜ್ಞಾನೋದಯ ಎಂತಾದಾಗ ಮಾತ್ರ ಹೆಣ್ಣಿನ ಶೋಷಣೆ ತಪ್ಪಿಸಲು ಸಾಧ್ಯ!

-ಶ್ರೀಧರ್ ದಿ. ರಾಮಚಂದ್ರಪ್ಪ, ಚಿತ್ರದುರ್ಗ

ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...


ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ : 700 ರೂ.
ಎರಡು ವರ್ಷಕ್ಕೆ : 1400 ರೂ.
ಮೂರು ವರ್ಷಕ್ಕೆ : 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817/080-26676427

ಕರ್ನಾಟಕದ ಅಮಿತ್ ಶಾ?





ರವಿ

ಇನ್ನೆರಡು ವರ್ಷಗಳೊಳಗೆ ರಾಜ್ಯದ ಚುಕ್ಕಾಣಿ ಹಿಡಿಯುವ ಬಿಜೆಪಿಯ ದುರಾಶೆಗೊಬ್ಬ ಸೈತಾನಿ ಮಹತ್ವಾಕಾಂಕ್ಷೆಯ ನಾಯಕ ಯಾರಾಗಬಹುದು? ಅರವಿಂದ ಲಿಂಬಾವಳಿಯೋ, ಕೇಂದ್ರ ಸಚಿವ ಸದಾನಂದ ಗೌಡರೋ, ಸಂಸದ ನಳಿನ್‌ಕುಮಾರ್ ಕಟೀಲುವೋ, ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕರೋ, ಮಾಜಿಮಂತ್ರಿ ಸಿ.ಟಿ. ರವಿಯೋ, ಹಾಲಿ ಕೇಂದ್ರ ಮಂತ್ರಿ ಅನಂತ್‌ಕುಮಾರರೋ ಅಥವಾ ಭ್ರಷ್ಟಾಚಾರದ ಆರೋಪಗಳಲ್ಲಿ ಸಿಲುಕಿಕೊಂಡಿರುವ ಯಡಿಯೂರಪ್ಪನೋ?

ಯಾರು ಕರ್ನಾಟಕದ ಅಮಿತ್ ಶಾ? ಬಾಯಿಬಿಟ್ಟರೆ ಬೆಂಕಿಯನ್ನೇ ಕಕ್ಕಬೇಕು. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ತಲಾ ಒಂದೊಂದು ಸೂಕ್ಷ್ಮ ಪ್ರದೇಶದಲ್ಲಾದರೂ ಸಣ್ಣ ಮಟ್ಟದ ಕೋಮುಗಲಭೆಯನ್ನಾದರೂ ಸೃಷ್ಟಿಸುವ ಶಕ್ತಿಯಿರಬೇಕು. ಭ್ರಷ್ಟಾಚಾರದ ಆರೋಪಗಳಿರಕೂಡದು. ಲೈಂಗಿಕ ಹಗರಣಗಳಲ್ಲಿ ಸಿಲುಕಿರಕೂಡದು. ಬಲಾಢ್ಯ ಜಾತಿಯವನಾಗಿರಬೇಕು. ಮುಂಬರುವ ಚುನಾವಣೆಗೆ ಸಂಪನ್ಮೂಲ ಹೊಂದಿಸುವಂತಿರಬೇಕು ಮತ್ತು ಮಾಸ್ ಲೀಡರ್ ಅಂದರೆ ಸಾರ್ವಜನಿಕವಾಗಿ ವರ್ಚಸ್ವಿಯಾಗಿರಲೇಬೇಕು. ಅಂಥಾ ಒಬ್ಬ ಕೇಸರಿ ಬ್ರಾಂಡ್ ಅಂಬಾಸಿಡರ್ ಆಗಬಲ್ಲ ವರ್ಚಸ್ವಿ ಯಾರು? ಅಥವಾ ಹಾಲಿ ಅಧ್ಯಕ್ಷ ಪ್ರಹ್ಲಾದ್ ಜೋಷಿಯನ್ನೇ ಮತ್ತೊಂದು ಅವಧಿಗೆ ಮುಂದುವರಿಸಿದರೆ ಹೇಗೆ?

ಇದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾನ ಚಿಂತನಮಂಥನ ಗೊಂಥನವಂತೆ. ಹಾಲಿ ಅಧ್ಯಕ್ಷ ಪ್ರಹ್ಲಾದ್ ಜೋಷಿ ಹೇಳಿಕೇಳಿ ಉದ್ದಂಡ ನಾಯಕ ಅನಂತ್‌ಕುಮಾರ್‌ರ ಮನೆಕೆಲಸದ ಗುಮಾಸ್ತ, ಸಂಘಟನೆ, ಹೋರಾಟ, ಕಾರ್ಯತಂತ್ರಗಳೆಲ್ಲವೂ ಪಕ್ಕಾ ಗುಮಾಸ್ತನದ್ದೇ ಶೈಲಿಯಲ್ಲಿರುತ್ತದೆ. ಸಿಟಿ ರವಿಯಂತೆ ವಾಕ್ಚಾತುರ್ಯವಿಲ್ಲ, ಸದಾನಂದ ಗೌಡರಂತೆ ಜಾತಿಬಲವಿಲ್ಲ, ಅಶೋಕ್ ದಾಟಿಯಲ್ಲಿ ಡೀಲು ಕುದುರಿಸಲಾರ. ಯಡ್ಡಿಯಂತೆ ಓಡಾಡಲಾರ. ಹೀಗಾಗಿ ಪ್ರಹ್ಲಾದ್ ಜೋಷಿ ಬಿಜೆಪಿ ಪಾಲಿಗೆ ಮನೆಗೆ ಮಗನೂ ಅಲ್ಲ ಸುಡುಗಾಡಿಗೆ ಬೇಕಾದ ವಸ್ತುವೂ ಅಲ್ಲ. ಹೇಗೂ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಹೊಸದಿನಗಳಾದ್ದರಿಂದ ಜೋಷಿಯ ನಿಷ್ಕ್ರಿಯತೆ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ.

ಮಾಸ್ ಲೀಡರ್

ಆದರೆ ಈಗ ಪರಿಸ್ಥಿತಿಯೇ ಬೇರೆ. ಚುನಾವಣೆಗಿನ್ನು ಎರಡು ವರ್ಷಗಳಷ್ಟೇ ಬಾಕಿಯಿದೆಯಾದ್ದರಿಂದ ಶತಗತಾಯ ಅಧಿಕಾರ ಹಿಡಿಯಲೇಬೇಕಾದ ತುರ್ತಿಗೆ ಬಿದ್ದಿರುವ ಸಂಘಪರಿವಾರಕ್ಕೊಬ್ಬ ಬಲಭೀಮನಂಥ ನಾವಿಕನೇ ಬೇಕು. ಒಂದು ವರ್ಷದ ಹಿಂದಿನಿಂದಲೇ ಯಡ್ಡಿಯನ್ನು ಮತ್ತೆ ಅಧ್ಯಕ್ಷಗಾದಿಗೆ ತರಬೇಕೆಂಬ ಕೂಗು ಅಸ್ಪಷ್ಟವೆಂಬಂತೆ ಕೇಳಿಬರುತ್ತಿದ್ದದ್ದು ಈಗ ಸ್ಪಷ್ಟವಾಗಿ ಕೇಳಿಸುತ್ತಿದೆ. ಅದೂ ಸದಾನಂದ ಗೌಡರು ಯಡ್ಡಿ ಬೆಂಬಲಕ್ಕೆ ನಿಂತ ಮೇಲಂತೂ ಬಸನಗೌಡ ಯತ್ನಾಳರು ಶುರುವಿನಲ್ಲೇ ಹಾಕಿದ ಕೂಗಿಗೆ ಮೈಕು ಸಿಕ್ಕಂತಾಯಿತು. ಆದರೆ ರಾಜ್ಯ ಬಿಜೆಪಿ ದುರ್ಗತಿ ಹೇಗಿದೆಯೆಂದರೆ ಅಮಿತ್ ಶಾ, ರಾಜನಾಥ್, ಜೇಟ್ಲಿ, ಪರಿಕ್ಕರ್ ಥರದ ಒಬ್ಬೇ ಒಬ್ಬ ವರ್ಚಸ್ವಿ ನಾಯಕ ರಾಜ್ಯದ ಮಟ್ಟಗಿಲ್ಲ. ಅನಂತ್‌ಕುಮಾರ್ ಒಳ್ಳೇ ಜೋಕರ್ ಥರ ಕಾಣುವುದಿಲ್ಲವೆ? ಪ್ರಹ್ಲಾದ್ ಜೋಷಿ ಹೇಳಿಕೇಳಿ ಗುಮಾಸ್ತ ಶೆಟ್ಟರ್ ಹೆಚ್ಚು ಅಂಗಡಿಯ ಶೆಟ್ಟಿಯಂತೆ, ಸದಾನಂದ ಗೌಡರು ಕಾಮಿಡಿ ಪೀಸಿನಂತೆ. ಅಶೋಕ್ ಡೀಲಿಗೆ ನಿಂತ ಮಧ್ಯವರ್ತಿಯಂತೆ ಕಂಡರೆ ಅಷ್ಟಿಷ್ಟು ವರ್ಚಸ್ಸು, ಬಲಾಢ್ಯ ಜಾತಿಯ ಬಲ ಮತ್ತು ಚೂರುಪಾರು ಮಾಸ್ ಲೀಡರ್‌ನ ಗತ್ತಿರುವುದು ಯಡ್ಡಿಗೇ. ಆದರೆ ಯಡ್ಡಿಯ ಬೆನ್ನಿಗಿರುವ ಭೂತಗಳೇನು ಕಮ್ಮಿಯೆ?

ಕಳೆದ ಕೆಲವರ್ಷಗಳಿಂದ ರಾಜ್ಯ ಬಿಜೆಪಿಯ ಮೇಲ್ಕೈ ಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದ ಯಾರಿಗಾದರೂ ವೆಂಕಯ್ಯನಾಯ್ಡು ಎಂಬ ಆಂಧ್ರ ಮೂಲದ ಆಸಾಮಿಯೇ ಕರ್ನಾಟಕದ ಬಿಜೆಪಿಯನ್ನು ಕೇಂದ್ರಮಟ್ಟದಲ್ಲಿ ಪ್ರತಿನಿಧಿಸುವ ದೊಡ್ಡಬಾಯಾಗಿ ಕಾಣುತ್ತಾರೆಯೇ ಹೊರತು ಅನಂತ್, ಸದಾನಂದಗೌಡ, ಸಿದ್ದೇಶ್ವರ್‌ರಂಥ ಕೇಂದ್ರ ಮಂತ್ರಿಗಳ್ಯಾರೂ ಆ ಮಟ್ಟದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲೇ ಇಲ್ಲ. ವೆಂಕಯ್ಯ ನಾಯ್ಡು ಹೊರತುಪಡಿಸಿ ಮಿಕ್ಕೆಲ್ಲರೂ ಎರಡನೇ ದರ್ಜೆಯ ನಾಯಕರಂತೆ ಕಾಣಿಸುತ್ತಾರೆ. ಇನ್ನು ಸಿ.ಟಿ. ರವಿ, ಲಿಂಬಾವಳಿ, ಕಟೀಲು, ಆರ್. ಅಶೋಕ್ ಥರದವರೆಲ್ಲ ಮೂರನೇ ಹಂತದ ಜೂನಿಯರ್‌ಗಳಂತಿದ್ದಾರೆ. ಕುಮಾರಸ್ವಾಮಿ, ದೇವೇಗೌಡ, ಸಿದ್ದು, ಖರ್ಗೆಯಂಥವರ ಮುಂದೆ ಯಡ್ಡಿ ಬಿಟ್ಟರೆ ಬಿಜೆಪಿ ಹೇಳಿಕೊಳ್ಳುವಂಥ ಮತ್ತೊಬ್ಬ ನಾಯಕನಲ್ಲಿ ಯಾವ ದುರ್ಬೀನಿಟ್ಟು ಹುಡುಕಿದರೂ ಸಿಗುವುದು ಕಷ್ಟವೇ!

ಮಿಸ್ಟರ್ ಕ್ಲೀನ್!


ಸದ್ಯ ರಾಜ್ಯ ಬಿಜೆಪಿ ಅಧ್ಯಕ್ಷಗಾದಿಗೊಬ್ಬ ವರ್ಚಸ್ವಿ ನಾಯಕನನ್ನು ತರಬೇಕೆಂಬ ಅಮಿತ್ ಶಾನ ಮಹತ್ವಾಕಾಂಕ್ಷೆಗೂ ಬೇರೆಯದೇ ಕಾರಣವಿದೆ. ಅದು ಬಿಜೆಪಿ ಪಾಲಿಗೆ ದಕ್ಷಿಣದ ಗೇಟ್‌ವೇ ಎಂದೇ ಭಾವಿಸಲ್ಪಟ್ಟ ಕರ್ನಾಟಕದ ಕೇಸರೀಕರಣ. ಪ್ರಧಾನಿ ಮೋದಿ ಜೊತೆ ಯಡ್ಡಿಗೆ ಶುರುವಿನಿಂದಲೂ ಆತ್ಮೀಯತೆ ಇದೆ ನಿಜ. ಆದರೆ ಜೈಲಿಗೆ ಹೋದ ಕಳಂಕವಿದೆಯಲ್ಲ. ಬೆನ್ನಿಗಿರುವ ಭೂಹಗರಣಗಳು, ಗಣಿಲಂಚ, ಡೀನೋಟಿಫಿಕೇಷನ್- ಹೀಗೆ ಬರೋಬ್ಬರಿ ಒಂದು ಡಜನ್ ಪ್ರಕರಣಗಳನ್ನು ತಲೆಗೆ ಸುತ್ತಿಕೊಂಡೇ ಎದ್ದು ನಿಂತ ಯಡ್ಡಿಯ ಬಗ್ಗೆ ಅಮಿತ್ ಶಾಗೂ ಆಸೆಯಿಲ್ಲವೆಂದಲ್ಲ.

ಯಡ್ಡಿಗೆ ಪರ್ಯಾಯವಾಗಿ ಮತ್ತೊಬ್ಬ ವರ್ಚಸ್ವೀ ನಾಯಕನನ್ನು ಹುಡುಕಬೇಕೆಂದರೆ ಇರುವವರಾದರೂ ಯಾರು? ಒಂದೋ ಅನಂತ್‌ಕುಮಾರ್ ಅಥವಾ ಸದಾನಂದ ಗೌಡ ಬಿಟ್ಟರೆ ಬೇರೆ ಯಾರಿದ್ದಾರೆ. ಮಿಕ್ಕವರೆಲ್ಲ ಇವರಿಗಿಂತ ಜೂನಿಯರ್‌ಗಳೇ ತಾನೇ? ಅಶೋಕ್ ಒಳ ವ್ಯವಹಾರ ನಿಪುಣನೇ ಹೊರತು ವರ್ಚಸ್ವಿಯಲ್ಲ. ಲಿಂಬಾವಳಿಗೆ ಸಾರ್ವಜನಿಕವಾದ ಮುಖವಾಡವಿಲ್ಲ, ಕಟೀಲು ದಕ್ಷಿಣ ಕನ್ನಡದ ಮಾಣಿ. ಹಾಗೆ ನೋಡಿದರೆ ಬಿಜೆಪಿಯ 'ಮಿಸ್ಟರ್ ಕ್ಲೀನ್' ಸುರೇಶ್‌ಕುಮಾರ್ ತನ್ನ ವ್ಯಕ್ತಿತ್ವದಿಂದ ಮಿಂಚಬಹುದೇ ಹೊರತು ಆತ ಮಾಸ್ ಲೀಡರ್ ಅಲ್ಲ, ಬಿಜೆಪಿಯ ಶುದ್ಧ ಮುಖವಾಡದ ಕರಾವಳಿ ಸ್ಯಾಂಪಲ್ಲು ವಿಶ್ವೇಶ್ವರ ಹೆಗಡೆ ಕಾಗೇರಿ. ಇವರಿಬ್ಬರನ್ನು ಯಾವುದೋ ಆದರ್ಶ ಡೆಮೋ ಪೀಸುಗಳನ್ನಾಗಿ ಬಿಜೆಪಿ ಬಳಸಬಹುದೇ ಹೊರತು ರಾಜ್ಯನೌಕೆಯ ಚುಕ್ಕಾಣಿಯೊಪ್ಪಿಸುವುದು ಕಷ್ಟವೇ. ಅಶೋಕ್ ಬೆನ್ನಿಗೆ ಅನಂತ್‌ಕುಮಾರ್ ಬಣವಿರುವುದು ಅಂದಿಗೂ ಇಂದಿಗೂ ನಿಗೂಢವೇನಲ್ಲ. ಜಾತಿಯಿಂದ ಒಕ್ಕಲಿಗ ಎಂಬುದನ್ನು ಬಿಟ್ಟರೆ ಬೆಂಗಳೂರಿನಿಂದಾಚೆಗೆ ಅಶೋಕ್ ಬೆಳೆಯಲಿಲ್ಲ. ಹಾಗೇ ಕಟೀಲು ನಳಿನ್‌ಕುಮಾರ್ ಆರೆಸ್ಸೆಸ್‌ನ ಶಿಸ್ತಿನ ಸಿಪಾಯಿಯಾಗಿ ಮಿನಿ ಧನಂಜಯ್‌ಕುಮಾರ್ ಗೆಟಪ್ಪಿಗಷ್ಟೇ ಸೀಮಿತಗೊಂಡು ದ.ಕ.ದಿಂದಾಚೆಗೆ ವಿಸ್ತರಿಸಲೇ ಇಲ್ಲ. ಇನ್ನು ಯಡ್ಡಿಗೆ ಪರ್ಯಾಯವಾಗಿ ಉಳಿಯುವುದು ಸಿ.ಟಿ. ರವಿಯೇ.


ಹುಮ್ಮಸ್ಸು, ಹರೆಯ, ರಾಜ್ಯ ಸುತ್ತಬಲ್ಲ ಚೈತನ್ಯ ಮತ್ತು ಎಂಥವರನ್ನೂ ಬಾಯಿಮುಚ್ಚಿಸಬಲ್ಲ ವಾಕ್ ಚಾತುರ್ಯಕ್ಕೆ ಹೆಸರಾದ ಸಿ.ಟಿ. ರವಿಯನ್ನು ಆತನ ಬಾಯಿಯ ಕಾರಣಕ್ಕೇ 'ಸೀಟಿ ರವಿ' ಎಂದು ಆಡಿಕೊಂಡವರುಂಟು. ಇದ್ಯಾವುದನ್ನೂ ನಿರಾಕರಿಸದಷ್ಟು ಭಂಡತನವೂ ಅವರಲ್ಲುಂಟು. ಸದ್ಯ ಯಡ್ಡಿಗೆ ಪರ್ಯಾಯವಾಗಿ ಬಿಜೆಪಿ ಅಧ್ಯಕ್ಷಗಾದಿಗೆ ಅಮಿತ್ ಶಾ ಮುಂದಿರುವುದೂ ರವಿಯೆಂಬ ಹೆಸರೇ.

ಮಿನಿ ಅಮಿತ್ ಶಾ?


ಏಕೆಂದರೆ ಲಿಂಗಾಯತರ ಹೊರತಾಗಿ ಮತ್ತೊಂದು ಬಲಾಢ್ಯ ಜನಾಂಗವಾದ ಒಕ್ಕಲಿಗ ವರ್ಗದ ರವಿಗೆ ಆರ್. ಅಶೋಕ್ ಮೀರಿದ ರಾಜ್ಯವ್ಯಾಪಿ ವರ್ಚಸ್ಸಿರುವುದು ಸುಳ್ಳೇನಲ್ಲ. ಎಂಥಾ ಕ್ಷುಲ್ಲಕ ವಿಷಯವನ್ನೂ ಕೋಮು ದಾವಾನಲವನ್ನಾಗಿ ಪರಿವರ್ತಿಸಬಲ್ಲ ಚಾಕಚಕ್ಯತೆ, ಸಾಂಸ್ಕೃತಿಕವಾಗಿ ಸಣ್ಣಪುಟ್ಟ ಸಂಗತಿಗಳನ್ನೂ ಹಿಂದೂ-ಮುಸ್ಲಿಂ ವೈಷಮ್ಯವನ್ನಾಗಿ ರೂಪಿಸುವ ಮಾತುಗಾರಿಕೆಯಿಂದಾಗಿಯೇ ಸೀಟಿ ರವಿಯನ್ನು ಕರ್ನಾಟಕದ 'ಅಮಿತ್ ಶಾ' ಎಂದವರೂ ಇಲ್ಲದಿಲ್ಲ. ಆದರೆ ರವಿ ಪಾಲಿಗೆ ದೊಡ್ಡಮಟ್ಟದ ನಾಯಕರಿಲ್ಲ. ಯಡ್ಡಿಗೆ ಪರ್ಯಾಯವಾಗಿ ಕೊನೇ ಗಳಿಗೆಯಲ್ಲಿ ಅನಂತ್‌ಕುಮಾರ್, ಅಶೋಕ್, ಈಶ್ವರಪ್ಪ ಇತ್ಯಾದಿಗಳೆಲ್ಲ ರವಿಯ ಬೆಂಬಲಕ್ಕೇನೋ ನಿಲ್ಲಬಹುದು. ವಿಕಟವೆಂದರೆ ಯಡ್ಡಿಯನ್ನು ಮುಂದಿಟ್ಟುಕೊಳ್ಳದೇ ಚುನಾವಣೆಯನ್ನು ಎದುರಿಸಬಲ್ಲ ತಾಕತ್ತು ಮತ್ತು ಧೈರ್ಯ ಯಾವೊಬ್ಬ



ಪ್ರಹ್ಲಾದ್ ಜೋಷಿ



ಅನಂತ್‌ಕುಮಾರ್




ಸದಾನಂದ ಗೌಡ

ಬಿಜೆಪಿ ನಾಯಕನಿಗೂ ಇದ್ದಂತಿಲ್ಲ.

ಬಿಜೆಪಿಯ ದಾರಿದ್ರ್ಯ ಮತ್ತು ಬೌದ್ಧಿಕ ದಿವಾಳಿತನ ಹೇಗಿದೆಯೆಂದರೆ ಯಡ್ಡಿಯನ್ನು ಟ್ರಾಯ್ ಯುದ್ಧದ ಟ್ರೋಜನ್ ಕುದುರೆಯಂತೆ ಬಳಸದೇ ಹೋದರೆ ತಮಗ್ಯಾರಿಗೂ ಬರಕತ್ತಿಲ್ಲ ಎಂಬುದು ಕಳೆದ ಚುನಾವಣೆಯಲ್ಲೇ ಮನವರಿಕೆಯಾಗಿ ಹೋಗಿದೆ. ತನ್ನದೇ ಕೆಜೆಪಿಯನ್ನು ಹುಟ್ಟು ಹಾಕಿ ಬರೋಬ್ಬರಿ ನಲವತ್ತು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗಿಂತಲೂ ಹೆಚ್ಚಿಗೆ ಮತ ಗಳಿಸಿದ ಯಡ್ಡಿಯ ವರ್ಚಸ್ಸು ಈಶ್ವರಪ್ಪಾದಿಯಾಗಿ ಅನಂತ್‌ಕುಮಾರ್‌ತನಕ ಯಾರೊಬ್ಬರಿಗೂ ಇಲ್ಲವೆಂಬುದು ಸಾಬೀತಾಗಿಹೋಗಿದೆ. ಹೀಗಾಗಿ ಏನೇ ಲೋಕಲ್ 'ಅಮಿತ್ ಶಾ' ಎಂದು ಹೈಕಮಾಂಡ್ ತಲಾಶು ನಡೆಸಿದರೂ ಯಡ್ಡಿಗೊಬ್ಬ ಪರ್ಯಾಯ ನಾಯಕನನ್ನು ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಭ್ರಷ್ಟಾಚಾರ, ಕಳಂಕ ಎಂದೆಲ್ಲ ಆರೆಸ್ಸೆಸ್ ಏನೇ ನೆಪವೊಡ್ಡಿ ಯಡ್ಡಿಯ ಬಾಯಿ ಮುಚ್ಚಿಸಲೆತ್ನಿಸಬಹುದು. ಆದರೆ ಯಡ್ಡಿಯನ್ನು ಮುಂದಿಟ್ಟುಕೊಳ್ಳದೆ ಎಲೆಕ್ಷನ್ ಎದುರಿಸಬಲ್ಲ ಛಾತಿ ಮಾತ್ರ ಯಾರಲ್ಲೂ ಕಾಣಿಸುತ್ತಿಲ್ಲ. ಇದು ಕೇವಲ ಹೈಕಮಾಂಡ್ ಲೆಕ್ಕಾಚಾರವಷ್ಟೇ ಅಲ್ಲ; ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಬಿಜಾಪುರದಿಂದ ಗೆದ್ದ ಬಸನಗೌಡ ಯತ್ನಾಳ್ 'ನಾನೇನಾದ್ರೂ

ಅಗೋಚರ ಸಂತೋಷ್‌ಜಿಯ ಅನಿರೀಕ್ಷಿತ ಪ್ರವೇಶ!



ಇತ್ತೀಚೆಗಷ್ಟೇ ಸುತ್ತೂರು ಮಠದ ಕಾರ್ಯಕ್ರಮವೊಂದಕ್ಕೆಂದು ಮೈಸೂರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿಗೆ ವಿಚಿತ್ರವೆನಿಸಿದ್ದು ಅಲ್ಲಿನ ಲಿಂಗಾಯತರು ಯಡ್ಡಿ ಭಾಷಣವನ್ನು ಬೆಂಬಲಿಸಿದ ರೀತಿ. ಮೋದಿಗಿಂತಲೂ ಹೆಚ್ಚಿನ ಜೈಕಾರ ಕೇಳಿಬಂದದ್ದು ಯಡ್ಡಿ ಪರವಾಗಿಯೇ. ಮೇಲುನೋಟಕ್ಕಿದು ಸುತ್ತೂರು ಮಠದ ಕಾರ್ಯಕ್ರಮವಾದರೂ ಪರೋಕ್ಷವಾಗಿ ಅದನ್ನು ತನ್ನ ವೇದಿಕೆಯನ್ನಾಗಿ ಬಳಸಿಕೊಂಡಿದ್ದು ಯಡ್ಡಿ. ಮತ್ತೊಂದು ಅರ್ಥದಲ್ಲದು ಲಿಂಗಾಯತರ ತಾಕತ್ತಿನ ಪ್ರದರ್ಶನ ಕೂಡ.

ಹೀಗೆ ಮೈಸೂರಿಗೆ ಬಂದ ಪ್ರಧಾನಿ ಮೋದಿಯನ್ನು ಸ್ವಾಗತಿಸಲೆಂದು ಬಂದವರ ಪೈಕಿ ಕೊಂಚ ವಿಲಕ್ಷಣ ಆಸಾಮಿಯಂತೆ ಕಂಡಿದ್ದು ಸಂತೋಷ್‌ಜಿ. ಹೆಚ್ಚು ಗೊತ್ತಿಲ್ಲದೆ ಸಮಯಪ್ರಜ್ಞೆಯ ಅರಿವಿಲ್ಲದೆ ಸಂತೋಷ್ ವಿಶೇಷ ಲಕೋಟೆಯೊಂದರಲ್ಲಿ ಅದೇನೋ ಅರ್ಜಿಯೊಂದನ್ನು ಪ್ರಧಾನಿಗೆ ಸಲ್ಲಿಸಿದಂತಿತ್ತು, ಇದು ರಾಜ್ಯ ಬಿಜೆಪಿ ಅಧ್ಯಕ್ಷತೆಗೆ ತನ್ನನ್ನೇ ನೇಮಿಸುವಂತೆ ಸಂತೋಷ್ ನೀಡಿದ ಅರ್ಜಿಯೆಂಬುದು ಯಡ್ಡಿ ಕುಚೋದ್ಯ!

ಆದರೆ ಸಂತೋಷ್ ತಂದಿದ್ದು ಹಿರಿಯ ಆರೆಸ್ಸೆಸ್ ಮುಖಂಡರೊಬ್ಬರು ವಸ್ತುಸ್ಥಿತಿ ವಿವರಿಸಿ ಬರೆದಿದ್ದ ಪತ್ರವನ್ನು. ರಾಜ್ಯಪಾಲ ವಜುಭಾಯಿ ವಾಲಾರ ಮೂಲಕ ಪ್ರಮುಖ ವಿಶ್ವವಿದ್ಯಾಲಯವೊಂದಕ್ಕೆ ನೇಮಿಸಬೇಕಾದ ಸಂಘಿ ಪಂಡಿತರೊಬ್ಬರಿಗೆ ಪೇಜಾವರರು ನೀಡಿದ ಪತ್ರವನ್ನು ಲಗತ್ತಿಸಲಾಗಿತ್ತಂತೆ. ಅದನ್ನು ಮೈಸೂರಿನಲ್ಲೇ ಏಕೆ ಕೊಟ್ಟರೋ ಗೊತ್ತಿಲ್ಲ, ಸಂತೋಷ್‌ಗೆ ತಾನೂ ರಾಜ್ಯ ಬಿಜೆಪಿಯ ಅನಿರೀಕ್ಷಿತ ಪಾತ್ರಧಾರಿಯ ವೇಷ ಹಾಕಲೇಬೇಕಿದೆ. ಯಡ್ಡಿ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನೇ ಮುಂದು ಮಾಡಿ ಸಂತೋಷ್‌ನನ್ನು ರಾಜಿ ಅಭ್ಯರ್ಥಿಯಾಗಿ ತಂದು ಅಂತಿಮವಾಗಿ ತಾನು ಸಮಯ ಸಾಧಿಸುವ ಅನಂತ್ ಲೆಕ್ಕಾಚಾರಕ್ಕೆ ಸಂತೋಷ್ ಒಂದು ದಾಳವಷ್ಟೆ.

ರನ್ನು ಬೆಂಬಲಿಸಬೇಕು ಅಂದ್ರ ಮೊದಲು ರಪ್ಪನವರನ್ನ ರಾಜ್ಯ ಅಧ್ಯಕ್ಷರನ್ನಾಗಿ ಮಾಡಬೇಕು...' ಷ್ಟಂಗಿ ಬಾಂಬ್ ಹಾಕಿಯೇಬಿಟ್ಟರು.

ಮದ್ದಾನೆಯ ಹಿಂದೆ


ನಲ ಯತ್ನಾಳ್ ಮಾತ್ರವಲ್ಲ ಉದಾಸಿ, ನಿರಾಣಿ, ಜ ಪಾಟೀಲ್ ಸೇಡಂ, ಗದ್ದಿಗೌಡರ್, ಜಿಗಜಿಣಗಿ, ಮಣ್ಣ ಕರಡಿ ಸಂಗಣ್ಣ ರೇವೂ ನಾಯಕ್ ಬೆಳಮಗಿ ತ ಉತ್ತರ ಕನ್ನಡ ಭಾಗದ ಬಹುತೇಕ ಲಿಂಗಾಯತ ರೆಲ್ಲ ಈಗಾಗಲೇ ಯಡ್ಡಿ ಭಜನೆ ಶುರುವಿಟ್ಟಾಗಿದೆ. ಸೂಕ್ಷ್ಮವಾಗೇ ವಾಸನೆ ಹಿಡಿದ ಮಾಜಿ ಮುಖ್ಯಮಂತ್ರಿ ಶೆಟ್ಟರ್ 'ಪಕ್ಷವನ್ನು ಮುನ್ನಡೆಸಲು ನಮಗೊಬ್ಬ ಲೀಡರ್ ಬೇಕು....' ಎಂದು ಅಡ್ಡಗೋಡೆ ಮೇಲೆ ಟ್ಟಂತೆ ಕೊಟ್ಟ ಹೇಳಿಕೆ ಪರೋಕ್ಷವಾಗಿ ಪ್ರಹ್ಲಾದ್ ಯನ್ನು ನಾಲಾಯಕ್ಕೆಂಬುದನ್ನು ಸೂಚಿಸುತ್ತದೆ ಮತ್ತು ಯಿಲ್ಲದೆ ಅಧಿಕಾರ ಹಿಡಿಯುವುದು ಸಲೀಸಲ್ಲ ದನ್ನೂ ಶೆಟ್ಟರ್ ಮಾರ್ಮಿಕವಾಗಿ ಪ್ರಸ್ತಾಪಿಸಿದ್ದೇ

ಹೊಲಸು ಬಾಯಿ ಈಶ್ವರಪ್ಪನ ಹುಚ್ಚಾಟದ ಹಿಂದೆ



ದುಡಿಯಲು ಭೀಮಣ್ಣ ಉಣ್ಣಲು ರಾಮಣ್ಣ ಎಂಬಂತೆ ಏಕಾಏಕಿ ಹರಕುಬಾಯಿ ಈಶ್ವರಪ್ಪನೂ ಯಡ್ಡಿ ಗುಣಗಾನ ಶುರು ಹಚ್ಚಿಕೊಂಡದ್ದು ಅನೇಕರಿಗೆ ಅಚ್ಚರಿಯೆನಿಸಿರಬೇಕು. ಅದು ಕೇವಲ ಈಶ್ವರಪ್ಪನ ಹುಚ್ಚಾಟವಷ್ಟೇ ಅಲ್ಲ, ಕೇಶವಶಿಲ್ಪದ ಲೆಕ್ಕಾಚಾರ ಕೂಡ. ಯಡ್ಡಿಯನ್ನು ಮುಂದಿಟ್ಟುಕೊಂಡು ಚುನಾವಣೆ ಗೆಲ್ಲುವುದು, ಆನಂತರ ಕೈಕೊಟ್ಟು ಅನಂತ್‌ಕುಮಾರ್‌ಗೆ ಮಣೆ ಹಾಕುವುದು ಸ್ಥಳೀಯ ಆರೆಸ್ಸೆಸ್ ಭಟ್ಟರೊಬ್ಬರ ದೂರಾಲೋಚನೆಯಂತೆ.

ಆದರಿದು ಅಷ್ಟು ಸುಲಭದ ಮಾತಲ್ಲ. ರಾಷ್ಟ್ರ ಬಿಜೆಪಿಯ ಸೂತ್ರವೀಗ ಹಿಂದಿನಂತೆ ಅಡ್ವಾಣಿಯ ಕೈಯಲ್ಲಿಲ್ಲ. ಅಡ್ವಾಣಿ ಮನೆ ಮಗನಂತಿದ್ದ ಅನಂತ್‌ಗೆ ಕೇಂದ್ರ ಸರ್ಕಾರದಲ್ಲಿ ಹಿಂದಿನ ಕಿಮ್ಮತ್ತೂ ಉಳಿದಿಲ್ಲ. ಇತ್ತೀಚೆಗೆ ಬಿಹಾರ ಚುನಾವಣೆಯನ್ನು ನಿಭಾಯಿಸಲಾಗದ ಅಪಖ್ಯಾತಿಯೂ ಅನಂತ್ ಬೆನ್ನಿಗಂಟಿದೆ. ಹೀಗಾಗಿ ಈಶ್ವರಪ್ಪನಂಥವರನ್ನು ಮುಂದೆ ಬಿಟ್ಟು ದಾಳ ಉರುಳಿಸಬೇಕಾದ ದುರ್ಗತಿಗೆ ಅನಂತ್ ಬಿದ್ದಿದ್ದಾರೆ. ಕಳೆದ ಚುನಾವಣೆಯಲ್ಲಿ ಕೆಜೆಪಿ ಅಭ್ಯರ್ಥಿಯೆದುರು ಸೋತು ಮೂರನೇ ಸ್ಥಾನಕ್ಕೆ ಕುಸಿದ ಈಶ್ವರಪ್ಪಂಗೂ ಗೊತ್ತು, ತಾನೇನಿದ್ದರೂ ಆರೆಸ್ಸೆಸ್ ಚೇಲಾಗಿರಿ ಮಾಡಿಕೊಂಡೇ ಅಸ್ತಿತ್ವ ಉಳಿಸಿಕೊಳ್ಳಬೇಕೇ ಹೊರತು ಸ್ವಂತ ಬಲದಿಂದ ಜಯಿಸಲಾಗದೆಂದು.





ಸುರೇಶ್ ಕುಮಾರ್



ಅಶೋಕ್

ಬಿಜೆಪಿಯ ದಾರಿದ್ರ್ಯದ ಸಂಕೇತದಂತಿತ್ತು.

ಇಂಥ ಹತಾಶೆಯ ಮುಂದುವರಿಕೆಯೆಂಬಂತೆ ಯಡ್ಡಿ ಪರ ಬಹಿರಂಗ ಬ್ಯಾಟಿಂಗಿಗೆ ಏಂತದ್ದು ಸದಾನಂದ ಗೌಡ. "ನಾನು ಕೂಡ ಅಧ್ಯಕ್ಷಗಿರಿಯ ಆಕಾಂಕ್ಷಿಯೇ, ಹಾಗಂತ ನನ್ನನ್ನೇ ನೇಮಿಸಿ ಅಂತ ಕೇಳೋಕಾಗುತ್ತಾ? ನನಗೂ ಯಡ್ಡಿಯೂರಪ್ಪನವರಿಗೂ ಒಸೇ ಭಿನ್ನಾಭಿಪ್ರಾಯವಿರಬಹುದು. ಆದರೆ ಅವರೊಬ್ಬ ಜನನಾಯಕ, ಕರ್ನಾಟಕದ ಬಹುಸಂಖ್ಯಾತ ಸಮೂಹವೊಂದು ಅವರನ್ನು ತನ್ನ ಪ್ರಶ್ನಾತೀತ ನಾಯಕನೆಂದು ಒಪ್ಪಿಕೊಂಡಿರುವಾಗ ಅವರನ್ನು ಸುಮ್ಮನೇ ಕೂರಿಸಿ ನಾವೇನಾದರೂ ಎಲೆಕ್ಷನ್ನು ಅಂತ ಹೋಗೋದಾದರೆ ಬಿಜೆಪಿ ಅಧಿಕಾರಕ್ಕೆ ಬರೋದು ಕಷ್ಟ......!"

ಇದು ಸದಾನಂದ ಗೌಡರ ಮಸ್ಕಾ ರಾಜಕಾರಣದ ವೈಖರಿಯಾದರೆ ಮಿಕ್ಕಂತೆ ಕರಂದ್ಲಾಜೆ, ರೇಣುಕಾಚಾರ್ಯ, ಗಣಿಕಳ್ಳರ ಕೂಟದ ಅಧಿನಾಯಕ ಶ್ರೀರಾಮುಲು ಸೇರಿದಂತೆ ಬಹುತೇಕರಿಗೆಲ್ಲ ಯಡ್ಡಿಯನ್ನು ಮುಂದಿಟ್ಟುಕೊಳ್ಳದೆ ಬೇರೆ ವಿಧಿಯೇ ಇಲ್ಲ. ಈ ಎಲ್ಲಾ ಬೆಳವಣಿಗೆಗಳನ್ನು ಲೆಕ್ಕ ಹಾಕಿಯೇ ಜಿಲ್ಲಾ ಪಂಚಾಯ್ತಿ ಚುನಾವಣೆ ತನಕ ಕಾದುನೋಡುವ ತಂತ್ರಕ್ಕೆ ಬಿದ್ದ ಅಮಿತ್ ಶಾ ಫೆಬ್ರವರಿ 23 ರ ರಾತ್ರಿ ತನ್ನ ಮನೆಯಲ್ಲೇ ರಾಜ್ಯ ನಾಯಕರೊಂದಿಗೆ ಸಮಾಲೋಚಿಸಿದ್ದಾನೆ. ರಾಜ್ಯಕ್ಕೊಬ್ಬ ಮರಿ ಅಮಿತ್ ಶಾನನ್ನು ಹುಟ್ಟುಹಾಕುವ ಹಿರಿ ಅಮಿತ್ ಶಾನ ದುರಾಶೆಗೆ ಕರ್ನಾಟಕದಲ್ಲಿ ಬೇಳೆ ಬೇಯುವುದಿಲ್ಲ ಎಂಬುದು ನಿಧಾನಕ್ಕಾದರೂ ಅರ್ಥವಾಗಿರಬೇಕು.

ಕರ್ನಾಟಕದ ಅಮಿತ್ ಶಾ, 2018 ರ ಟ್ರೋಜನ್ ಕುದುರೆ, ಬರಗೆಟ್ಟ ಬಿಜೆಪಿಗೊಬ್ಬ ಅನ್ನದಾತ ಇತ್ಯಾದಿ ಬಿಜೆಪಿ ಪಾಲಿಗೆ ಪ್ರತಿಯೊಂದೂ ಆಗಿರುವ ಯಡ್ಡಿಯೆಂಬ ಮದ್ದಾನೆಯನ್ನು ಪಳಗಿಸುವುದು ಹೈಕಮಾಂಡಿಗೂ ತಲೆನೋವಾಗಿ ಬಿಟ್ಟಿದೆ.

■ ರಾ. ಸೋಮನಾಥ್

ಮ್ಮ ಜೊತೇಲಿ ಇದ್ರೆ ಇಲಿ ಪಾಶಾಣ ತಿನ್ನಬೇಕಾಗಿತ್ತು

ಥೂತ್ತೇರಿ

ಯಾಹೂ

ದೆಹಲಿಯ ಜೆಎನ್‌ಯುನಲ್ಲಿ ನಡೆಯುತ್ತಿರುವ ಹಿತಶಾಹಿ ಪುಂಡರ ನಾಟಕ ದಿನಕ್ಕೊಂದು ತಿರುವು ತ್ತ ಸತ್ಯಸಂಗತಿಗಳು ಅನಾವರಣವಾಗುತ್ತಿವೆಯಂತಲ್ಲಾ, ಗತಿಗಳನ್ನು ಬಿತ್ತರಿಸುವ ಮಾಧ್ಯಮದವರನ್ನು ಇವರೆಲ್ಲಾ ಹಾದರದ ಜನ ಎಂದು ಹಾದಿಹೋಕರೆಲ್ಲಾ ಾಡುತ್ತಿದ್ದಾರಂತಲ್ಲಾ, ಈ ಮಧ್ಯೆ ನಮ್ಮ ಕನ್ನಡದ ವಾಣಿ ಜೆಎನ್‌ಯು ವಿದ್ಯಾರ್ಥಿನಿಯಾಗಿದ್ದ ಜ್ಯೋತ್ಸ್ನಾ ಎಂಬ ಲೇಖಕಿಯ ಯುಕ್ತವಾದ ಲೇಖನವನ್ನು "ಇದು ಅವರ ವೈಯಕ್ತಿಕ ಅಭಿಪ್ರಾಯ" ಎಂಬ ಬರೆದಿದೆಯಲ್ಲಾ, ಇಂತಹ ಪರಾ ಬರೆಯುವ ಸ್ಥಿತಿ ವಾಣಿಗೆ ಇದೆಯೇ ಎಂದು ಯೋಚಿಸಿದಂತೆಲ್ಲಾ ಈ ವಾಣಿ ಮೊದಲಿನಂತಿಲ್ಲ, ಊರಿಗೊಬ್ಬಳೇ ವತಿಯಂತೆ ಮೆರೆದ ಇದರ ತಲೆ ಈಚೆಗೆ ಾದಂತೆ ಕಾಣುತ್ತಿದೆ ಎಂದೆನಿಸುತ್ತಿದೆಯಲ್ಲಾ, ಹಿಂದುಳಿದ ವರ್ಗದ ಬಂಗಾರಪ್ಪ ಮುಖ್ಯಮಂತ್ರಿಯಾದ ೕ ಸಂಭ್ರಮದಿಂದ ಸಂದರ್ಶನ ಮಾಡಿ ಯಾರೇ ಡಲಿ ಎಂದು ಮೆರೆದಿದ್ದ ಪ್ರಜಾವಾಣಿ, ಅದೇ ಂದುಳಿದ ವರ್ಗದ ಸಿದ್ದರಾಮಯ್ಯ ಮುಖ್ಯಮಂತ್ರಿಯಾದಂದಿನಿಂದಲೂ ದೇವೇಗೌಡರನ್ನು ಸಣ್ಣತನ ಮೆರೆಯುತ್ತಿರುವುದಕ್ಕೆ ಕಾರಣಗಳನ್ನೆ ನ ಮಾಡಬೇಕು" ಎಂದು ಗಾಂಧಿನಗರದ ಕುರುಬರ ಹಾಸ್ಟಲಿನಲ್ಲಿ ಚರ್ಚೆಯಾಯ್ತಂತಲ್ಲಾ, ಥೂತ್ತೇರಿ!!

* * * *

ಜೇರ್ ಸಾಹೇಬರು ಕಂಡ ಜಿಲ್ಲಾ ಸರ್ಕಾರಗಳ ವಣೆ ನಡೆದು, ಹತ್ತು, ಏಳು, ಎರಡು ಎಂಬ ಲ್ಲಿ ಕ್ರಮವಾಗಿ ಕಾಂಗ್ರೆಸ್, ಬಿಜೆಪಿ, ದಳ ಜಿಲ್ಲೆಗಳನ್ನು ರುವಾಗ ಉಳಿದ ಹನ್ನೊಂದು ಜಿಲ್ಲೆ ತ್ರವಾಗಿವೆಯಲ್ಲಾ, ಯಾರು ಏನೇ ಹೇಳಿದರೂ ಟಕದ ಸಮಸ್ತ ಮತಬಾಂಧವರು ಮೂರಾಬಟ್ಟೆಯಾಗಿ ದ್ದಾರೆ. ಯಡಿಯೂರಪ್ಪನ ಹಿಂದೆ ಹೋದ ಶರಣ ಹ, ದೇವು ಜೊತೆ ಗುರುತಿಸಿಕೊಂಡ ಗೌಡ ಸಮಾಜ ಕಾಂಗ್ರೆಸ್ ಜೊತೆ ಗುರುತಿಸಿಕೊಂಡ ಅಹಿಂದ ಸಮಾಜ... ದರೆ ಯಾವ ಪಾರ್ಟಿಗೂ ಮೆಜಾರಿಟಿ ಸಿಗುವುದಿಲ್ಲ, ಂದು ಜಿಲ್ಲೆಯ ಅತಂತ್ರರ ಜೊತೆ ಹೊಂದಾಣಿಕೆ ಕೊಳ್ಳದೆ ವಿಧಿಯಿಲ್ಲ, ಆದ್ದರಿಂದ ಕೇವಲ ಎರಡು ಲ್ಲಿ ಪೂರ್ಣ ಪ್ರಮಾಣದ ಅಧಿಕಾರ ಹಿಡಿದಿರುವ ಸ್, ಯಾವ ಕಡೆಯಿಂದ ನೋಡಿದರೂ ರಾಷ್ಟ್ರೀಯ ಗಳಿಗಿಂತಲೂ ಹೆಚ್ಚು ಜಿಲ್ಲೆಯನ್ನು ಕಬಳಿಸುವ ಸಂಚೇ ತ್ತಿದೆಯಂತಲ್ಲಾ, ಥೂತ್ತೇರಿ!!

* * * *

ಜೆಪಿ, ಕಾಂಗ್ರೆಸ್ ಜೊತೆಯಲ್ಲೇ ಹೆಚ್ಚೆ ಹಾಕಿದಂತೆ

ನಮ್ಮವ ಇವ ನಮ್ಮವ ಎಂದು ಪರಿಗಣಿಸಿರುವ ಯಡಿಯೂರಪ್ಪನ ಮೇಲೆ ಇಟ್ಟಿರುವ ವ್ಯಾಮೋಹವೇ ಕಾರಣವಂತಲ್ಲಾ, ಇದಕ್ಕೆ ಹಳೆಯ ಉದಾಹರಣೆ ಕೊಡುವುದಾದರೆ, ಯಡಿಯೂರಪ್ಪ ದಿಲ್‌ದಾರ್ ರಾಜಕಾರಣಿ. ಆತನ ಕಾಲದಲ್ಲಿ ಎಲ್ಲರೂ ಹಣ ಮಾಡಿಕೊಂಡರು. ಆಸ್ತಿ ಮಾಡಿಕೊಂಡರು. ವ್ಯಭಿಚಾರ ಮಾಡಿದರು. ಸ್ವತಃ ಯಡಿಯೂರಪ್ಪನೇ ಶೋಭಕ್ಕನ ಜೊತೆ ಎಗ್ಗಿಲ್ಲದೆ ತಿರುಗಾಡಿದರು. ಜೊತೆಯಾಗಿ ಕುಳಿತು ಯಜ್ಞಕಾರ್ಯ ಮಾಡಿಸಿದರು. ಯಾಗ ಮಾಡಿಸಿದರು. ಇದನ್ನೆಲ್ಲಾ ನೋಡಿ ಸಹಿಸಲಾರದ ಯತ್ನಾಳ್ ಎಂಬ ದೈತ್ಯ ರಾಜಕಾರಣಿ ಸಿಡಿದೆದ್ದು, ಶರಣ ಸಮೂಹ ಎಚ್ಚೆತ್ತು ಯಡಿಯೂರಪ್ಪನಿಂದ ಬಿಜೆಪಿ ಬಿಡಿಸಿಕೊಂಡು ರಕ್ಷಿಸಬೇಕೆಂದರು. ಆಗ ಶರಣ ಸಮೂಹ ಯಡಿಯೂರಪ್ಪನ ಹಿಂದಿದ್ದ ಕಾರಣಕ್ಕೆ ಯತ್ನಾಳರನ್ನು ಬಿಜಾಪುರದ ಬಟ್ಟಂಬಯಲಿಗೆ ಎತ್ತಿ ಎಸೆಯಲಾಯ್ತು. ಆದರೇನು, ಯಾರೂ ಯತ್ನಾಳರನ್ನ ಎತ್ತಿ ನಿಲ್ಲಿಸಲಿಲ್ಲ, ಕ್ರಮೇಣ ತಾನೇ ಎದ್ದು ನಿಂತು ಸುಧಾರಿಸಿಕೊಂಡ



ಯತ್ನಾಳ್, ಮತೀಯ ಗಲಭೆಯ ಮುಖ್ಯಸ್ಥನಾಗಿ ಗುರುತಿಸಿಕೊಂಡು ಸಹಬಾಳ್ವೆಗೆ ಹೆಸರಾಗಿದ್ದ ಬಿಜಾಪುರದ ಶರಣರನ್ನ ಸಾಬರ ವಿರುದ್ಧ ಎತ್ತಿಕಟ್ಟಿ, ಮತಾಂಧ ನಾಯಕನಾದದ್ದು ಈಗ ಇತಿಹಾಸ. ಅಂತಹ ಯತ್ನಾಳ್ ಮತ್ತೆ ಯಡಿಯೂರಪ್ಪ ಬಿಜೆಪಿ ಸಾರಥ್ಯ ವಹಿಸಿದರೆ ಮಾತ್ರ ನಾನು ಬಿಜೆಪಿಗೆ ಬರುತ್ತೇನೆ ಎಂಬ ಕೂಗು ಸಂಚಲನವನ್ನೇ ಉಂಟು ಮಾಡಿ, ಜಿಲ್ಲಾ ಪಂಚಾಯ್ತಿ ಚುನಾವಣೆಯ ಮೇಲೂ ಪರಿಣಾಮ ಬೀರಿತಂತಲ್ಲಾ, ಇದು ನಿಜವೇ? ಥೂತ್ತೇರಿ!!

* * * *

ಯಾರು ಏನೇ ಹೇಳಿದರೂ, ಈಗ ಪ್ರಕಟಗೊಂಡಿರುವ ಚುನಾವಣೆ ಫಲಿತಾಂಶ ಕಾಂಗ್ರೆಸ್ ಯೋಗ್ಯತೆಗೆ ತಕ್ಕನಾಗಿಯೇ ಇದೆಯಂತೆ. ಮಾಡು ಇಲ್ಲವೆ ಮಡಿ ಎಂಬರ್ಥದಲ್ಲಿ ಚೆಡ್ಡಿ ಕಾರ್ಯಕರ್ತರು ಹೋರಾಡಿದರೆ, ಹಲವಾರು ಭಾಗ್ಯಗಳನ್ನು ಕೊಟ್ಟದ್ದೇವೆ, ನಮಗೆ ಓಟು ಮಾಡದೆ ಇನ್ನಾರಿಗೆ ಮಾಡುತ್ತಾರೆ ಎಂದು ಸಿದ್ದರಾಮಯ್ಯನಂತೆ ಮಲೆತಿರುವ ಕಾಂಗ್ರೆಸ್ ಕಾರ್ಯಕರ್ತರು ಇನ್ನ ದಾಯಾದಿ ಕಲಹದಿಂದ ಸಂಕಟಪಡುತ್ತ, ಮನಸ್ಸಿಲ್ಲದ ಮನಸ್ಸಿನಿಂದ ಓಡಾಡಿದ ದಳದ ಹುಡುಗರು, ಇದೆಲ್ಲಕ್ಕಿಂತ ಮುಖ್ಯವಾಗಿ ಒಂದೋಟಿಗೆ ಕೇವಲ ಒಂದು ಸಾವಿರದಂತೆ ವ್ಯಾಪಾರ ನಡೆದು, ಸದರಿ ಹಣವನ್ನು ಯಾವ ಅಳುಕೂ ಇಲ್ಲದೆ ಜೇಬಿಗಿಡುತ್ತ, ತಾವು ಮಾಡುವವರಿಗೆ ಮಾಡಿದ ಜನತಾ ಜನಾರ್ಧನರು. ಹೀಗೆ ಅಂತಂಥವರೇ ಸೇರಿಕೊಂಡು ಮಾಡಿದ ಅಂತಗಟ್ಟಮ್ಮನ ಜಾತ್ರೆಯಂತೆ ನಡೆದ ಜಿಲ್ಲಾ, ತಾಲ್ಲೂಕು, ಪಂಚಾಯ್ತಿ ಚುನಾವಣೆ ದೆಸೆಯಿಂದ, ಪ್ರಜಾಪ್ರಭುತ್ವವೇ ಎಕ್ಕುಟ್ಟಿ ಹೋಯ್ತಲ್ಲಾ, ಥೂತ್ತೇರಿ!!!

* * * *

ಈ ಚುನಾವಣೆ ಫಲಿತಾಂಶದ ಬಗ್ಗೆ, ಸಂಬಂಧಪಟ್ಟವರನ್ನು ಮಾತನಾಡಿಸಬೇಕೆನಿಸಿದ ಕೂಡಲೇ ಹೊಳೆದ ಹೆಸರು ನಮ್ಮ ಪ್ರೀತಿಯ ಮಾಜಿ ಪ್ರಧಾನಿ ದೇವೇಗೌಡರದ್ದು. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು:

ರಿಂಗ್‌ಟೋನ್: "ಶಿವ ಶಿವ ಎಂದರೆ ಭಯವಿಲ್ಲ ಶಿವನಾಮಕೆ ಸಾಟಿ ಬೇರಿಲ್ಲ... ಶಿವ....."

"ಹಲೋ?"

"ನಮಸ್ಕಾರ ಸಾರ್, ನಾನು ಯಾಹು."

"ಹೇಳಿ ಗುರುವೇ."

"ಡೆಲ್ಲಿಲಿದೀರಂತಲ್ಲಾ ಸಾರ್?"

"ಹೌದು, ಬರಬೇಕಲ್ಲಾ."

"ಕಂಗ್ರಾಟ್ಸ್ ಸಾರ್. ಭವಾನಿ ಮೇಡಂ ಗೆದ್ದಿದ್ದಾರೆ."

"ಜನತೆ ಆಶೀರ್ವಾದ ಮಾಡಿದಾರೆ, ಅವರಿಗೆ ಅಭಿನಂದನೆ."

"ನೀವಿನ್ನೂ ಓಡಾಡಬೇಕಿತ್ತು ಸಾರ್. ಹಾಸನದಲ್ಲೇ ಉಳುದ್ರಿ."

"ಮರಿಯಾದೆ ಪ್ರಶ್ನೆ, ಈ ಸಿದ್ದರಾಮಯ್ಯನ ಕೆಟ್ಟ ಸರಕಾರ ಏನು ಮಾಡುತ್ತೋ ಏನೋ ಅಂತ ಹಾಸನದಲ್ಲಿ ಇರಬೇಕಾಯ್ತು."

"ಭವಾನಿ ಮೇಡಂ ಗೆದ್ದ ಮೇಲೆ ಬಾಲಕೃಷ್ಣ ರಮೇಶನೆಂದ್ರಿ ಏನಾದ್ರು ರಾಜಕೀಯಕ್ಕೆ ಬರ್ತರಾ ಸಾರ್."

"ಅಂತ ಸ್ಥಿತಿ ಇನ್ನೂ ಬಂದಿಲ್ಲ."

"ಹೀಗಾದ್ರೆ ಜೆಡಿಎಸ್ ಕತೆಯೇನು ಸಾರ್?"

"ನಮ್ಮ ಪಕ್ಷ ಚೆನ್ನಾಗಿಯೇ ಇದೆ. ಹಣ ಬಲ, ತೋಳ್ಬಲ, ಜಾತಿಬಲ ಪ್ರದರ್ಶನದಲ್ಲಿ ನಾವು ಸೋತಿರಬಹುದು. ಆದರೆ ಜನ ಬಲವೇ ಮುಖ್ಯ ಅನತಕ್ಕಂತದನ್ನು ತೋರುಸ್ತೀವಿ."

"ಜಿಲ್ಲಾ ಪಂಚಾಯ್ತಿಲಿ ಗೆಲ್ಲಕ್ಕೆ ಇವೆಲ್ಲ ಬಲಗಳು ಬಳಕೆಯಾದವ ಸಾರ್?"

"ಹಾಗಂತ ಕೇಳ್ತಿರಲ್ರೀ, ನಿಮಗೆ ಕಾಣಲಿಲ್ವೆ?"

"ಮಂಡ್ಯ ಹಾಸನದಲ್ಲೂ ಇದು ನಡೀತಾ ಸಾರ್?"

"ಇಲ್ಲ, ಅಲ್ಲೀ ನಮ್ಮ ಕಾರ್ಯಕರ್ತರು ಶ್ರಮಪಟ್ಟು ಗೆಲ್ಲಿಸಿದಾರೆ."

"ಅಂದ್ರೆ ಬರೀ ಜಾತಿಬಲ ಕೆಲಸ ಮಾಡ್ತು ಅನ್ನಿ."

"ನನ್ನ ರಾಜಕೀಯ ಜೀವನದಲ್ಲಿ ನಾನೆಂದೂ ಜಾತಿ ರಾಜಕಾರಣ ಮಾಡಿದೋನಲ್ಲ."

"ನಿಜ ಸಾರ್. ಕೆಳಜಾತಿ ಜನಗಳನ್ನ ಲೀಡ್ರು ಮಾಡಕ್ಕೆ ಸ್ವಜಾತಿ ಲೀಡ್ರುಗಳನ್ನು ಸುಮ್ಮನಿರ್ಸಿದ್ದನ್ನ ನಾನೇ ನೋಡಿದ್ದೀನಿ."

"ಅಂತ ಕೆಳಜಾತಿ ಲೀಡ್ರು ನಮಗೇನು ಮಾಡಿದ್ರು? ಬೆನ್ನಿಗೇ ಚೂರಿ ಹಾಕಿದ್ರು."

"ಯಾರು ಸಾರ್?"

"ಯಾರು ಅಂತ ಕೇಳ್ತಿರಲ್ರೀ? ಇವತ್ತು ಅಹಂಕಾರದಿಂದ ಮೆರೀತಾಯಿರೊ ಮಹಾನಾಯಕ ಎಲ್ಲಿದ್ದ?"

"ನಿಮ್ಮ ಜೊತೆಲೆ ಇದ್ರೆ ಏನು ಮಾಡತಿದ್ರಿ ಸಾರ್?"

"ಏನು ಮಾಡತಿದ್ದೆ ಅನ್ನದನ್ನ ಇದ್ದು ನೋಡಬೇಕಿತ್ತು."

"ನಿಮ್ಮ ಜೊತೆಲೆ ಇದ್ರೆ ಇಲಿ ಪಾಶಾಣ ತಿಂದು ಸಾಯಂಗೆ ಮಾಡತಿದ್ರಿ ಸಾರ್. ಈಗಾಗ್ಲೆ ಜಮೀರ್, ಚಲುವ ಬಾಲಣ್ಣನ ಕತೆ ಅಂಗೆ ಆಗಿಲ್ವ?"

"ಹಲೋ ಸಾರ್... ಹಲೋ ಸಾರ್....."

"ಥೂತ್ತೇರಿ!!!" ■


ಜೆಎನ್‌ಯು ನೋಟ

ಅಪರಾಧವೇ ಅಧಿಕಾರವಾದಾಗ...?

ಸುಹೃದಯ ಓದುಗರೇ,


ಕಳೆದ ಒಂದು ತಿಂಗಳಿನಿಂದ ರೋಹಿತ್ ವೇಮುಲ ಘಟನೆ, ನಂತರ ಕನ್ನಯ್ಯ ಘಟನೆಗಳು ಮುನ್ನೆಲೆಗೆ ಬಂದು ಇಡೀ ದೇಶದ ಗಮನ ಆ ಕಡೆ ನೆಟ್ಟಿದೆ. ಇಲ್ಲಿಗೆ ಸರಿಯಾಗಿ ಒಂದು ತಿಂಗಳ ಹಿಂದೆ ಮಾಧ್ಯಮಗಳಲ್ಲಿ ಸ್ಥಾನ ಪಡೆದುಕೊಂಡಿದ್ದ ಪ್ರಮುಖ ರಾಜಕೀಯ ವಿದ್ಯಮಾನಗಳು ಯಾವುವು ಎಂಬುದನ್ನು ಒಮ್ಮೆ ನಾವು ನೆನಪು ಮಾಡಿಕೊಳ್ಳಲು ಪ್ರಯತ್ನಿಸೋಣವೇ?

ಈಗಿನ ಹಣಕಾಸು ಸಚಿವ ಅರುಣ್ ಜೈಟ್ಲಿಯವರು ಇಲ್ಲಿಗೆ ಎರಡು ವರ್ಷಗಳ ಹಿಂದೆ ದೆಹಲಿಯ ಕ್ರಿಕೆಟ್ ಬೋರ್ಡ್‌ನ ಅಧ್ಯಕ್ಷರಾಗಿದ್ದಾಗ ನಡೆಸಿದ ಹಗರಣಗಳು ಬಯಲಾಗಿದ್ದವು. ಈ ಹಗರಣ ಬಯಲಾಗಿದ್ದು ಕೂಡ ಒಬ್ಬ ಕೀರ್ತಿ ಆಜಾದ್ ಎಂಬ ಬಿಜೆಪಿ ಸಂಸದನಿಂದಲೇ ಎಂಬುದು ವಿಶೇಷ. ದೆಹಲಿಯ ಸಿಎಂ ಕೇಜ್ರಿವಾಲ್ ಜೈಟ್ಲಿ ವಿರುದ್ಧ ತನಿಖಾ ಆಯೋಗ ರಚಿಸುವ ಪ್ರಯತ್ನ ನಡೆಸಿದ್ದು, ದೆಹಲಿ ಗವರ್ನರ್ ಮತ್ತು ಮೋದಿ ಸರ್ಕಾರ ಅದಕ್ಕೆ ಇನ್ನಿಲ್ಲದಂತೆ ತಡೆಯೊಡ್ಡಿದ್ದು ಎಲ್ಲವೂ ನಾಟಕದ ದೃಶ್ಯಗಳಂತೆ ನಡೆಯುತ್ತಿದ್ದವು. ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದ ಜೈಟ್ಲಿ ಕತೆ ಮುಗಿಯಿತು ಎಂಬಂಥ ಸ್ಥಿತಿ, ಮೋದಿ ಸರ್ಕಾರದ ಮೊದಲ ವಿಕೆಟ್ ಪತನ ಎಂಬ ಚರ್ಚೆಗಳು ಮಾಧ್ಯಮಗಳಲ್ಲಿ ಕಾಣಿಸತೊಡಗಿತ್ತು. ವಿರೋಧ ಪಕ್ಷಗಳು ಕೂಡ ಜೈಟ್ಲಿ ರಾಜೀನಾಮೆಗೆ ಒತ್ತಾಯಿಸಿ ಗದ್ದಲವೆಬ್ಬಿಸಿದ್ದವು.



ಆದರೆ ಭ್ರಷ್ಟಾಚಾರದ ವಿರುದ್ಧ ಹಗಲುವೇಷ ಹಾಕಿ ಅಧಿಕಾರ ಹಿಡಿದ ಮೋದಿ ಸರ್ಕಾರದ ಪ್ರತಿಕ್ರಿಯೆ ಏನಾಗಿತ್ತು? ಭ್ರಷ್ಟಾಚಾರವನ್ನು ಪ್ರಶ್ನೆ ಮಾಡಿದ ತಪ್ಪಿಗೆ ತಮ್ಮದೇ ಸಂಸದ ಕೀರ್ತಿ ಆಜಾದ್‌ನನ್ನು ಪಕ್ಷದಿಂದ ಹೊರದಬ್ಬಲಾಯ್ತು. ಪ್ರತಿಪಕ್ಷವನ್ನು ಹಣಿಯಲು ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯ ಮೇಲೆ ನ್ಯಾಷನಲ್ ಹೆರಾಲ್ಡ್ ಎಂಬ ಪತ್ರಿಕೆಯ ನೊಣ ತಿಂದ ಕೇಸೊಂದನ್ನು ಹೊರತಂದು ಅವರನ್ನು ರಾಜಕೀಯವಾಗಿ ಮುಗಿಸಲು ಯತ್ನಿಸಲಾಯ್ತು. ಆದರೆ ಯಾವಾಗ ಸೋನಿಯಾ ಗಾಂಧಿ 'ಇದು ದ್ವೇಷದ ರಾಜಕೀಯವಾದ್ದರಿಂದ ತಾವು ಜಾಮೀನಿಗೆ ಅರ್ಜಿ ಸಲ್ಲಿಸುವುದಿಲ್ಲ; ಜೈಲಿನಲ್ಲಿ ಕೂರಲು ಸಿದ್ಧ' ಎಂದು ಘಂಟಾಘೋಷವಾಗಿ ಘೋಷಿಸಿಬಿಟ್ಟರೋ ಮೋದಿ ಕೂಟದ ರಾಜಕೀಯ ತಿರುಗುಬಾಣವಾಗಿ ಪರಿಣಮಿಸಿತ್ತು. ಹೆಚ್ಚು ಹುರುಳಿಲ್ಲದ ಕೇಸನ್ನು ಹಿಡಿದು ಜಗ್ಗಾಡುವುದು ಸಾಧ್ಯವೇ ಇಲ್ಲವೆಂಬುದು ಕೇಸರಿಕೂಟಕ್ಕೆ ನಿಚ್ಚಳವಾಗಿತ್ತು.

ಒಟ್ಟಾರೆ ಒಂದು ತಿಂಗಳ ಹಿಂದೆ ಮಾಧ್ಯಮಗಳಲ್ಲಿ ಸ್ಥಾನ ಆಕ್ರಮಿಸಿಕೊಂಡಿದ್ದ ವಿಚಾರಗಳೇನು ಅಂತ ಸ್ವಲ್ಪ ನೋಡೋಣ. ಮೋದಿಯ ಆರ್ಥಿಕನೀತಿಗಳು ಮಕಾಡೆ ಬಿದ್ದ ಪರಿಣಾಮ ಡಾಲರ್‌ನ ಎದುರು ರೂಪಾಯಿ ಚಾರಿತ್ರಿಕ ಕುಸಿತ ಕಂಡು 69 ರೂಪಾಯಿಗೆ ಏರಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂದು ಅಗ್ಗದ ವಸ್ತುವಾಗಿರುವ



ಪೆಟ್ರೋಲ್ - ಡೀಸೆಲ್ ದರ ಏರಿಕೆ ಮಾಡಿ ಲೂಟಿ ಮಾಡುತ್ತಿರುವ ಮೋದಿ ನೀತಿಯ ಬಗ್ಗೆ ಪ್ರತಿರೋಧ ಸಮಾಜದಲ್ಲಿ ಮಡುಗಟ್ಟುತ್ತಿತ್ತು, ಮತ್ತೊಂದೆಡೆ ರೈತರ ಆತ್ಮಹತ್ಯೆ ಎಂಬುದು ಪರಿಹಾರವೇ ಇಲ್ಲದ ಸಮಸ್ಯೆಯಾಗಿ ಮುಂದುವರೆಯುತ್ತಿದೆ. ದೇಶದ ಶೇಕಡ 40 ರಷ್ಟು ಪ್ರದೇಶಗಳಲ್ಲಿ ಬರಗಾಲ ಉಂಟಾಗಿದ್ದು, ಈ ಬಗ್ಗೆ ಸ್ವರಾಜ್ ಅಭಿಯಾನದ ಪ್ರಶಾಂತ್ ಭೂಷಣ್ ಮತ್ತು ಯೋಗೇಂದ್ರ ಯಾದವ್ ಸುಪ್ರೀಂಕೋರ್ಟ್‌ನಲ್ಲಿ ದಾಖಲಿಸಿದ್ದು, ಕೋರ್ಟ್ ಪಿಐಎಲ್ ವಿಚಾರಣೆ ಕೈಗೆತ್ತಿಕೊಂಡು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತ್ತು.

ಇನ್ನೊಂದೆಡೆ ಬಹುಚರ್ಚಿತ ಮೇಕಿಂಗ್ ಇಂಡಿಯಾ ಮತ್ತೊಂದು ಫ್ಲಾಪ್ ಶೋ ಆಗಿ ಪರಿಣಮಿಸುತ್ತಿದೆ. ಅತ್ತ ಪ್ರಧಾನಿಯ ಆಪ್ತ, ಹಲವು ಹಗರಣಗಳ ಸರದಾರ ಲಲಿತ್ ಮೋದಿಯ ಕೇಸು ಮತ್ತೊಂದು ತಿರುವು ಪಡೆದುಕೊಂಡಿದ್ದು ಇಂಟರ್‌ಪೋಲ್ ಆತನ ಬಗ್ಗೆ ರೆಡ್‌ಕಾರ್ನರ್ ನೋಟಿಸ್ ಜಾರಿ ಮಾಡಿದೆ. ಹೀಗೆ ಎಲ್ಲೆಡೆ ಮೋದಿ ಸರ್ಕಾರದ ಸರ್ವವ್ಯಾಪಿ ವೈಫಲ್ಯಗಳು, ಮಂತ್ರಿಗಳ ಭ್ರಷ್ಟಾಚಾರಗಳು ಚರ್ಚೆಗೆ ಗ್ರಾಸವಾಗಿದ್ದ ಸಂದರ್ಭವದು. ಮೋದಿ ಸರ್ಕಾರ ಮತ್ತು ಸಂಘಿ ಕೂಟ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲಾಗದೆ ಹೆಣಗುತ್ತಿದ್ದ ಸನ್ನಿವೇಶ ನಿರ್ಮಾಣವಾಗುತ್ತಲಿತ್ತು.

ಇದು ಕಟ್ಟುಕತೆಯೋ, ಊಹಾಪೋಹವೋ ಅಲ್ಲ. ಒಂದುಕ್ಷಣ ಧ್ಯಾನಿಸಿ ನಮ್ಮ ಸ್ಮೃತಿಪಟಲಕ್ಕೆ ಕೆಲಸ ಕೊಟ್ಟರೆ ಈ ಎಲ್ಲ ಘಟನಾವಳಿಗಳ ಸುರುಳಿಗಳು ತಂತಾನೇ ಬಿಚ್ಚಿಕೊಳ್ಳುತ್ತವೆ.

ಇಂಥಾ ಪರಿಸ್ಥಿತಿಯಲ್ಲಿ ಹೈದರಾಬಾದ್ ಯೂನಿವರ್ಸಿಟಿಯ ಜಾತಿವಾದಿಗಳ ಅಟ್ಟಹಾಸ ತಾರಕಕ್ಕೇರಿತು. ರೋಹಿತ್ ವೇಮುಲನ ಬಲಿಯೂ ನಡೆದುಹೋಯಿತು. ಈ ಘಟನಾವಳಿ ಇಡೀ ದಲಿತ ಸಮುದಾಯವನ್ನೇ ತನ್ನಿಂದ ದೂರ ಸರಿಸುತ್ತಿದೆ ಎಂಬ ಸತ್ಯ ಅರಿವಾಗುತ್ತಿದ್ದಂತೆ ಬಿಜೆಪಿಯ ಕೇಸರಿ ಕೂಟ "ರಾಷ್ಟ್ರಭಕ್ತಿ"ಯ ಮುಸುಕಿನಲ್ಲಿ ಅತ್ಯಂತ ವ್ಯವಸ್ಥಿತವಾಗಿ ಜೆಎನ್‌ಯು ಮೇಲೆ ದಾಳಿ ಆರಂಭಿಸಿದೆ. ಈ ಮೂಲಕ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ಹುನ್ನಾರ ನಡೆಸಿದ್ದಾರೆ.

ಜೆಎನ್‌ಯು ಮೇಲೆ ಕೇಸರಿ ಕಣ್ಣೇಕೆ?

ಸಂಘಿಗಳ ಕೂಟ ಜೆಎನ್‌ಯುವನ್ನು ಇಷ್ಟೊಂದು



ಟಾರ್ಗೆಟ್ ಮಾಡುತ್ತಿರುವುದಾದರೂ ಯಾತಕ್ಕಾಗಿ? ಅದಕ್ಕೆ ಸ್ಪಷ್ಟ ಕಾರಣವಿದೆ. ಈ ಜೆಎನ್‌ಯುನ ಪರಂಪರೆಯೇ ಅಂಥಾದ್ದು. ಜೆಎನ್‌ಯು ಆರಂಭವಾದಾಗಿನಿಂದ ಇದುವರೆಗೂ ಪ್ರಜಾತಂತ್ರದ ಪರವಾದ, ಜನಪರವಾದ ವಿಚಾರಗಳ ಕುಲುಮೆಯಂತೆ ಕೆಲಸ ಮಾಡುತ್ತಿದೆ. ಎಲ್ಲ ಬಗೆಯ ಕಂದಾಚಾರಗಳನ್ನೂ, ನಿರಂಕುಶತ್ವವನ್ನೂ ವಿರೋಧಿಸುವ ವೈಜ್ಞಾನಿಕ, ಜಾತ್ಯತೀತ ಮನೋಭೂಮಿಕೆ ಇಲ್ಲಿ ಹಾಸುಹೊಕ್ಕಾಗಿದೆ. ಅಷ್ಟು ಮಾತ್ರವಲ್ಲ; ಆಡಳಿತಾರೂಢ ಶಕ್ತಿಗಳಿಂದ ಅಥವ ಬಂಡವಾಳಶಾಹಿಪರ ಶಕ್ತಿಗಳಿಂದ ಪ್ರಜೆಗಳ ಮೇಲೆ ದಮನ ದೌರ್ಜನ್ಯ ನಡೆದಾಗ ಜೆಎನ್‌ಯು ವಿದ್ಯಾರ್ಥಿಗಳು / ಪ್ರಾಧ್ಯಾಪಕರು ಅದಕ್ಕೆ ಸ್ಪಂದಿಸಿ ಬೀದಿಗಿಳಿಯುತ್ತಾರೆ.


ತುರ್ತು ಪರಿಸ್ಥಿತಿಯ ವಿರುದ್ಧ ಜೆಪಿ ಚಳವಳಿಯಲ್ಲಿ ಜೆಎನ್‌ಯು ಮಹತ್ವದ ಪಾತ್ರ ವಹಿಸಿತ್ತು. ಮಂಡಲ್ ಹೋರಾಟವಿರಲಿ, ಇರಾಕ್ ಮೇಲಿನ ದಾಳಿಯಿರಲಿ, ನಿರ್ಭಯಾ ಪ್ರಕರಣವಿರಲಿ, ಗುಜರಾತ್ ಹತ್ಯಾಕಾಂಡದ ವಿರುದ್ಧವಿರಲಿ- ಹೀಗೆ ಹತ್ತು ಹಲವು ವಿಚಾರಗಳಿಗೆ ಈ ವಿವಿ ಸ್ಪಂದಿಸಿದೆ. ಯುಪಿಎ ಸರಕಾರದ ಜನವಿರೋಧಿ ನೀತಿಗಳ ಬಗ್ಗೆ ಅದೆಷ್ಟೋ ವಿಚಾರಗೋಷ್ಠಿಗಳು ಇಲ್ಲಿ ನಡೆದಿವೆ. ಒಮ್ಮೆ ಮನಮೋಹನ ಸಿಂಗ್ ಭಾಷಣ ಮಾಡಲು ಬಂದಾಗ ಅದನ್ನು ಈ ವಿದ್ಯಾರ್ಥಿಗಳು ವಿರೋಧಿಸಿದ ಘಟನೆ ನಡೆದಿತ್ತು.

ಒಂದು ಕಾಲದಲ್ಲಿ ಎಡಪಂಥೀಯ ಚಳವಳಿಯ ಪ್ರಭಾವ



ಕಾಂಡೋಮ್ ಗಣತಿಯೂ-ರಾಷ್ಟ್ರಭಕ್ತಿಯೂ!!

ಜನರಿಂದ ಓಟು ಪಡೆದು ಚುನಾಯಿತನಾದ ಎಂಎಲ್‌ಎ ನಾನಾ ಸಾಧನೆ ಮಾಡಿದ್ದರ ಬಗ್ಗೆಯೂ, ಏನೇನೋ ಅವಾಂತರ ಮಾಡಿಕೊಂಡಿದ್ದರ ಬಗ್ಗೆಯೂ ನೀವು ಕೇಳಿರುತ್ತೀರಿ, ನೋಡಿರುತ್ತೀರಿ. ಆದರೆ ಬಳಸಿ ಬಿಸಾಡಿದ ಕಾಂಡೋಮ್ ಗಣತಿಯಲ್ಲಿ ತೊಡಗಿಸಿಕೊಂಡ ಒಬ್ಬ ಎಂಎಲ್‌ಎ ಬಗ್ಗೆ ಯಾರಾದರೂ ಕೇಳಿದ್ದೀರಾ? ಹಿಂದೆಂದೂ ಕಂಡುಕೇಳರಿಯದ ಇಂಥಾ 'ಅದ್ವಿತೀಯ ಸಾಧನೆ' ಮಾಡಿದವರು ಬೇರಾರೂ ಅಲ್ಲ; ರಾಜಸ್ಥಾನದ ರಾಮಗಡ ಕ್ಷೇತ್ರವನ್ನು ಪ್ರತಿನಿಧಿಸುವ ಬಿಜೆಪಿ ಪಕ್ಷದ ಎಂಎಲ್‌ಎ ಗ್ಯಾನದೇವ್ ಅಹುಜಾ! ಸನ್ಮಾನ್ಯ ಗ್ಯಾನದೇವರು ರಾಷ್ಟ್ರಭಕ್ತಿಯ ಪರಾಕಾಷ್ಠೆಯಲ್ಲಿ ಇಂಥಾ ಮಹಾನ್ ಸಾಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ.



ರಾಷ್ಟ್ರಭಕ್ತಿಗೂ - ಬಳಸಿದ ಕಾಂಡೋಮ್‌ಗಳ ಲೆಕ್ಕಕ್ಕೂ ಎತ್ತಣಿಂದೆತ್ತಣ ಸಂಬಂಧ ಅಂತ ನೀವು ಕೇಳಬಹುದು. ಇಲ್ಲೇ ಇರೋದು ಮಸಲತ್ತು !

ಇತ್ತೀಚೆಗೆ ಈತ ಒದಗಿಸಿದ ಅಭೂತಪೂರ್ವ ಅಂಕಿಅಂಶಗಳ ಪ್ರಕಾರ - ಜೆಎನ್‌ಯುದಲ್ಲಿ ಪ್ರತಿದಿನ 3000 ಬಳಸಿದ ಕಾಂಡೋಮ್‌ಗಳು ಸಿಕ್ಕಿವೆಯಂತೆ! ಎಂಥಾ ಅದ್ಭುತ ಸಂಶೋಧನೆ ? ಇದು ಇಷ್ಟಕ್ಕೇ ನಿಲ್ಲುವುದಿಲ್ಲ, ಪ್ರತಿನಿತ್ಯ 10,000 ಸಿಗರೆಟ್ ತುಂಡುಗಳು, 4000 ಬೀಡಿ ತುಂಡುಗಳು, 2000 ಖಾಲಿ ಮದ್ಯದ ಸೀಸೆಗಳು ಸಿಗುತ್ತವಂತೆ. ಜೊತೆಗೆ 50,000 ತಿಂದು ಬಿಸಾಡಿದ ಮೂಳೆ ಚೂರುಗಳನ್ನು ಲೆಕ್ಕಹಾಕಲಾಗಿದೆಯಂತೆ. ಅಷ್ಟು ಮಾತ್ರವಲ್ಲ, ಗರ್ಭಪಾತಕ್ಕೆ ಬಳಸಿದ 500 ಇಂಜಕ್ಷನ್‌ಗಳೂ ಸಿಕ್ಕಿವೆಯೆಂದು ಈ ದೇಶಭಕ್ತ ಮಹಾಶಯ ಅಂಕಿಅಂಶ ಒದಗಿಸಿದ್ದಾನೆ.


ಶಹಬ್ಬಾಸ್! ಈ ಎಲ್ಲ ವಸ್ತುಗಳ ಬಗ್ಗೆ ಇಷ್ಟೊಂದು ಅಂಕಿಅಂಶ ಕೊಡಬೇಕೆಂದರೆ ಆ ವಸ್ತುಗಳನ್ನು ಅಚ್ಚುಕಟ್ಟಾಗಿ ದಿನವೂ ಸಂಗ್ರಹ ಮಾಡಬೇಕು; ನಂತರ ಅವುಗಳ ಆಡಿಟಿಂಗ್ ಆಗಬೇಕು. ಅದೆಲ್ಲಾ ಹಾಳಾಗೋಗ್ಲಿ, ಬಳಸಿ ಬಿಸಾಡಿದ ಸಾವಿರಾರು ಕಾಂಡೋಮ್‌ಗಳನ್ನು ಸಂಗ್ರಹಿಸಿದ್ದಾದರೂ ಹೇಗೆ? ಇದು ಸವಾಲಿನ ಕೆಲಸವೇ ಸರಿ. ಬಹುಶಃ ಇಂಥಾ ಕಠಿಣ ಸವಾಲಿನ ಕೆಲಸವನ್ನು ನಿಭಾಯಿಸಲು ನಾಗಪುರದಿಂದ ಬಂದ ವಿಶೇಷ ಪರಿಣಿತರ ತಂಡವೊಂದು ಹಗಲಿರುಳೆನ್ನದೆ ದುಡಿದಿರುವ ಸಾಧ್ಯತೆಯಿದೆ. ಆದರೆ ಈ ಬಿಜೆಪಿ ನಾಯಕ ಮಾತ್ರ ತಮ್ಮ ಕಾಂಡೋಮ್ ಕಾರ್ಯಾಚರಣೆಯ ಗುಟ್ಟು ಬಿಚ್ಚಿಕೊಟ್ಟಿಲ್ಲ; ಮಾಧ್ಯಮಗಳಲ್ಲಿ, ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಲಭ್ಯವಿದೆ ಎಂದು ತೇಲಿಕೆಯ ಉತ್ತರ ಕೊಟ್ಟಿದ್ದಾನೆ.

ಇಂಥಾ ಅಮೋಘ ಸಂಶೋಧನೆ ಬಹಿರ್ಗತಗೊಂಡಿದ್ದಾದರೂ ಹೇಗೆ ಅಂತೀರಿ. ದಿನಾಂಕ 22-02-2016ರಂದು ರಾಜಸ್ಥಾನದ ರಾಜಧಾನಿ ಜೈಪುರದಲ್ಲಿ ಜೆಎನ್‌ಯು ವಿದ್ಯಾರ್ಥಿಗಳ "ದೇಶದ್ರೋಹ"ದ ವಿರುದ್ಧ ಬಿಜೆಪಿ ರ್‍ಯಾಲಿಯೊಂದನ್ನು ಸಂಘಟಿಸಿತ್ತು, ಸದರಿ ರ್‍ಯಾಲಿಯಲ್ಲಿ ಶಾಸಕರು ತಮ್ಮ ಈ ಅಮೂಲ್ಯ ಸಂಶೋಧನೆಯನ್ನು ಲೋಕಾರ್ಪಣೆ ಮಾಡಿದರು. ಜೆಎನ್‌ಯು ವಿದ್ಯಾರ್ಥಿಗಳ ಹೋರಾಟವನ್ನು ನ್ಯಾಯಬದ್ಧವಾಗಿ, ನೀತಿಬದ್ಧವಾಗಿ ಅಥವ ಕಾನೂನುಬದ್ಧವಾಗಿ ಎದುರಿಸಲಾಗದ ಬಿಜೆಪಿ ಕಾಂಡೋಮ್ ಕೌಂಟಿಂಗ್‌ನಂಥಾ ಹೀನಮಟ್ಟಕ್ಕೆ ಇಳಿದಿದೆ ಎಂದು ನೀವು ದೂರುವಂತಿಲ್ಲ. ಇಂಥಾ ಸಂಶೋಧನೆ ಮಾಡುವ ಮೂಲಕ ತನ್ನ ದೇಶಭಕ್ತಿಯನ್ನು ಇಮ್ಮಡಿ ಮಾಡಿಕೊಂಡಿದ್ದೇನೆಂದು ಆ ಬಿಜೆಪಿ ಶಾಸಕನ ಭಾವನೆಯಿದ್ದಿರಬಹುದು.

ಬೋಲೋ ... ಮಾತಾಕಿ ಜೈ!!

ಝೀ ನ್ಯೂಸ್ ಪತ್ರಕರ್ತ ದೀಪಕ್ ಬಿಚ್ಚಿಟ್ಟ ಸತ್ಯ

ಕನ್ಹಯ್ಯನನ್ನು ಜೈಲಿಗೆ ದೂಡಲು ಮಾಧ್ಯಮಗಳಲ್ಲಿ ಪ್ರಸಾರವಾದ ಪಾಕಿಸ್ತಾನದ ಪರ ಘೋಷಣೆ ಕೂಗಿದ ವಿಡಿಯೋದ ತುಣುಕನ್ನು ಬಳಸಿಕೊಳ್ಳಲಾಗಿತ್ತು. ಅಂಥಾ ಸುದ್ದಿಗಳಲ್ಲಿ ಝೀ ನ್ಯೂಸ್ ವಾಹಿನಿ ಪ್ರಮುಖ ಸುದ್ದಿ ಮಾಡಿತ್ತು. ಆದರೆ ಸತ್ಯಾಂಶ ಈಗ ಹೊರಬಿದ್ದಿದೆ. ಅಂದು ಆ ಪ್ರತಿಭಟನೆಯನ್ನು ಚಿತ್ರೀಕರಣ ಮಾಡಿ, ವರದಿ ಮಾಡಿದ್ದ ಝೀ ನ್ಯೂಸ್ ವಾಹಿನಿಯ ಪತ್ರಕರ್ತನ ಹೆಸರು ವಿಶ್ವ ದೀಪಕ್ ಎಂದು.




ತನ್ನ ಆತ್ಮಸಾಕ್ಷಿಯ ದನಿಗೆ ಓಗೊಟ್ಟ ಈ ಪತ್ರಕರ್ತ ಸತ್ಯಾಂಶವನ್ನು ಬಯಲಿಗಿಟ್ಟು ಝೀನ್ಯೂಸ್‌ಗೆ ರಾಜೀನಾಮೆ ಕೊಟ್ಟು ಹೊರಬಂದಿದ್ದಾನೆ. ಅಂದು ನಡೆದದ್ದಿಷ್ಟು. ಝೀನ್ಯೂಸ್‌ನವರು ಚಿತ್ರೀಕರಿಸಿದ್ದ ವಿಡಿಯೋದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂಬ ಘೋಷಣೆಯ ಸುಳಿವೇ ಇರಲಿಲ್ಲ; ಯಾಕೆಂದರೆ ಅಲ್ಲಿ ಅಂಥಾ ಘೋಷಣೆಯನ್ನು ಯಾರೂ ಕೂಗಲಿಲ್ಲ. ಆದರೆ ಝೀನ್ಯೂಸ್‌ನ ಸಂಪಾದಕ ಸುಧೀರ್ ಚೌಧರಿಯವರೇ ನೇರವಾಗಿ ಮಧ್ಯಪ್ರವೇಶಿಸಿ ಇದು 'ದೊಡ್ಡ ಸ್ಟೋರಿ'ಯಾಗಿರುವುದರಿಂದ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ್ದಾಗಿ ವರದಿ ಮಾಡಬೇಕೆಂದು ನಿರ್ದೇಶನ ಕೊಟ್ಟರು. ಮೊದಲಿಗೆ ಅಕ್ಷರಗಳಲ್ಲಿ ಸುದ್ದಿ ಬರೆದು ಅದನ್ನು ಪ್ರಸಾರ ಮಾಡಲಾಯ್ತು. ನಂತರ ಬೇರೊಂದು ವಿಡಿಯೋ ಕ್ಲಿಪ್ಪಿಂಗ್‌ನ್ನು ಮಿಕ್ಸಿಂಗ್ ಮಾಡಿ ಈ ಅಪಪ್ರಚಾರ ಮಾಡಲಾಯ್ತು. ಈ ಎಲ್ಲ ಬೆಳವಣಿಗೆಗಳನ್ನು ಕಂಡು ಬೇಸತ್ತ ಪತ್ರಕರ್ತ ವಿಶ್ವ ದೀಪಕ್ ಝೀನ್ಯೂಸ್‌ಗೆ ರಾಜೀನಾಮೆ ಕೊಟ್ಟು ಹೊರಬಂದಿದ್ದಾನೆ.

ತಾನೊಬ್ಬ ಪತ್ರಕರ್ತನಾಗುವುದಕ್ಕಿಂತ ಮುಂಚೆ ನಾನೂ ಕೂಡ ಒಬ್ಬ ಪ್ರಜೆ. ದೇಶದ್ರೋಹದ ಆರೋಪಗಳನ್ನು ದುಷ್ಟ ಉದ್ದೇಶಕ್ಕೆ ಬಳಸುತ್ತಿರುವುದನ್ನು ಸಹಿಸಿಕೊಳ್ಳಲು ನನ್ನ ಆತ್ಮಸಾಕ್ಷಿ ಒಪ್ಪಲಿಲ್ಲ.... ಪತ್ರಿಕಾರಂಗವನ್ನು ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ತಂಭ ಎಂದು ಕರೆಯುತ್ತಾರೆ.... ಪತ್ರಕರ್ತರಾಗಿ ನಮಗೂ ಆ ನೈತಿಕ ಜವಾಬ್ದಾರಿ ಇರಬೇಕು.

ಹೀಗೆ ಕಣ್ಣೆದುರಿನಲ್ಲಿಯೇ ಇಂಥಾ ಅನೈತಿಕ ಸುದ್ದಿ ಪ್ರಸಾರ ಮಾಡುತ್ತಿರುವುದನ್ನು ಕಂಡು ಸಹಿಸಲಾಗದೆ ರಾಜೀನಾಮೆ ಕೊಡುತ್ತಿದ್ದೇನೆಂದು ತನ್ನ ಸುದೀರ್ಘ ಪತ್ರದಲ್ಲಿ ವಿವರಿಸಿದ್ದಾನೆ.

ಪತ್ರಿಕಾರಂಗದ ಆದರ್ಶಗಳನ್ನು ಎತ್ತಿಹಿಡಿದ ಪತ್ರಕರ್ತ ದೀಪಕ್‌ನಿಗೆ ಅಭಿನಂದನೆಗಳು.

ದಶದಿಕ್ಕುಗಳಿಂದಲೂ ಖಂಡನೆ




"ಗಾಯತ್ರಿ ಮಂತ್ರ ಜಪಿಸುತ್ತಾ ಮಹಿಳಾ ಪತ್ರಕರ್ತರ ಮೇಲೆ ಹಲ್ಲೆ ನಡೆಸುವವರು ರಾಷ್ಟ್ರೀಯವಾದಿ ಗಳೆನಿಸಿಕೊಂಡಲ್ಲಿ, ನಾನು ರಾಷ್ಟ್ರವಿರೋಧಿ ಯಾಗಿರುವುದೇ ಲೇಸು."

- ಸಾಗರಿಕಾ ಘೋಷ್,
ಪತ್ರಕರ್ತೆ (ತಮ್ಮ ಟ್ವಿಟರ್‌ನಲ್ಲಿ)

* * * *

ನೋಬಲ್ ಪ್ರಶಸ್ತಿ ಪುರಸ್ಕೃತ ಭಾಷಾತಜ್ಞ ನೋಮ್ ಚಾಮ್‌ಸ್ಕಿಯನ್ನು ಮೊದಲ್ಗೊಂಡು ಅಂತರರಾಷ್ಟ್ರೀಯ ಮಟ್ಟದ ನೂರಾರು ಚಿಂತಕರು, ಪತ್ರಕರ್ತರು ಮೋದಿ ಸರ್ಕಾರದ ಕೃತ್ಯವನ್ನು ಖಂಡಿಸಿದ್ದಾರೆ. ಜೆಎನ್‌ಯುದ ಉಪಕುಲಪತಿಗೆ ಪತ್ರ ಬರೆದಿರುವ ಚಾಮ್‌ಸ್ಕಿಯವರು "ಭಿನ್ನ ಅಭಿಪ್ರಾಯ ಗಳನ್ನು ಹೊಂದಿರುವುದು ಒಂದು ಆರೋಗ್ಯವಂತ ಸಮಾಜದ ಲಕ್ಷಣ. ವಿಶ್ವವಿದ್ಯಾಲಯಗಳಲ್ಲಿ ಭಿನ್ನಭಿನ್ನ ವಿಚಾರಧಾರೆಗಳ ನಡುವೆ ಚರ್ಚೆ, ವಿಚಾರ ವಿನಿಮಯ ಇರಬೇಕು.



ಭಿನ್ನ ವಿಚಾರಧಾರೆ ಹೊಂದಿದ್ದಾರೆ ಎಂಬ ಮಾತ್ರಕ್ಕೆ ಅಂಥವರ ವಿರುದ್ಧ ದೇಶದ್ರೋಹದ ಆರೋಪ ಹೊರಿಸು ವುದು ಸುತರಾಂ ಒಪ್ಪಲಾಗದು.... ಕನ್ಹಯ್ಯ ಮತ್ತು ಆತನ ಸಂಗಡಿಗರು ದೇಶದ್ರೋಹದ ಯಾವುದೇ ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂಬ ವಿಷಯ ಇಷ್ಟು ಸ್ಪಷ್ಟವಾಗಿರುವಾಗ ಕ್ಯಾಂಪಸ್‌ನ ಒಳಗಡೆ ಪೊಲೀಸರು ಬರಲು ಹೇಗೆ ಅನುಮತಿ ಕೊಟ್ಟಿರಿ?" ಎಂದು ಪ್ರಶ್ನಿಸಿದ್ದಾರೆ.

* * * *

ಪ್ರತಿಭಟನಾನಿರತ ವಿದ್ಯಾರ್ಥಿಗಳನ್ನು ಬೆಂಬಲಿಸಿ ಜೆಎನ್‌ಯುಗೆ ಆಗಮಿಸಿದ ಹಿರಿಯ ಪತ್ರಕರ್ತ ಪಿ. ಸಾಯಿನಾಥ್ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಸಮಯೋಚಿತವಾದ ಮಾತುಗಳನ್ನಾಡಿದ್ದಾರೆ. ಆ ಭಾಷಣದ ಆಯ್ದ ಭಾಗ ಇಲ್ಲಿದೆ.

"…. ನೀವು ಇಂದು ನಡೆಸುತ್ತಿರುವ ಹೋರಾಟವನ್ನು ಈ ದೇಶದ ಜನಸಾಮಾನ್ಯರು, ಬಡವರು, ದಲಿತರು ಕಳೆದ ಎರಡು ದಶಕಗಳಿಂದಲೂ ನಡೆಸುತ್ತಾ ಬಂದಿದ್ದಾರೆ. ಆ ಹೋರಾಟ ಇಂದು ಜೆಎನ್‌ಯುನಂಥ ಎಲೈಟ್ ವಿಶ್ವವಿದ್ಯಾಲಯಗಳ ಅಂಗಳ ತಲುಪಿದೆ ಅಷ್ಟೆ! ಮತ್ತೊಂದು ವಿಷಯ ನೀವು ನೆನಪಿಡಬೇಕು. ಇಂದು ನೀವು ನಿಜವಾಗಿಯೂ ಹೋರಾಡುತ್ತಿರುವುದು ಭಿನ್ನಾಭಿಪ್ರಾಯಗಳನ್ನೇ ಅಪರಾಧ ಎಂದು ಸಾಧಿಸಲು ಹೊರಟಿರುವ ಪ್ರಕ್ರಿಯೆಯ ವಿರುದ್ಧ. ನಮ್ಮ ನಡುವೆ ನಡೆಯುತ್ತಿರುವ ಈ ಸಂಗತಿ ಕೇವಲ ಸಾಂವಿಧಾನಿಕ ಕಾನೂನಿನ ವಿರೋಧ ಅಥವಾ ಅತಿಕ್ರಮಣದ ಪ್ರಕ್ರಿಯೆ ಮಾತ್ರ ಆಗಿ ನೋಡಲಾಗದು, ಬದಲಿಗೆ ಇದು ನಮ್ಮ ನಡುವಿನ ಅಭಿಪ್ರಾಯ ಭಿನ್ನತೆ ಹೊಂದುವವರನ್ನು ಅಪರಾಧಿಗಳೆಂದು ಬಿಂಬಿಸುತ್ತಿರುವ ಮಾದರಿಯ ವಿರುದ್ಧದ ಹೋರಾಟ ಎಂಬ ವಿಶಾಲ ಅರ್ಥದಲ್ಲಿ ನೋಡಬೇಕು."




"… ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ ಇಂದು ದೇಶದ ಶೇಕಡ 75ರಷ್ಟು ಗ್ರಾಮೀಣ ಜನರು 5000ಕ್ಕಿಂತಲೂ ಕಡಿಮೆ ಮಾಸಿಕ ಆದಾಯ ಹೊಂದಿದ್ದಾರೆ… ಆದರೆ ಇದೇ ದೇಶದಲ್ಲಿ ಫೋರ್ಬ್ಸ್ ಸಮೀಕ್ಷೆಯ ಶ್ರೀಮಂತರ ಪಟ್ಟಿಯಲ್ಲಿ, ಅಂದರೆ ಅತಿ ಹೆಚ್ಚು ಶ್ರೀಮಂತರನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ 4 ನೇ ಅಥವ 5ನೇ ಸ್ಥಾನದಲ್ಲಿದೆ.....

....ಇದೇ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ 135ನೇ ಸ್ಥಾನದಲ್ಲಿದೆ. ಲ್ಯಾಟಿನ್ ಅಮೆರಿಕದ ಎಲ್ಲಾ ದೇಶಗಳು ಮಾನವ ಅಭಿವೃದ್ಧಿಯಲ್ಲಿ ನಮಗಿಂತ 20 ಸ್ಥಾನ ಮೇಲಿದ್ದರೆ, ಜಗತ್ತಿನಲ್ಲಿಯೇ ಅತ್ಯಂತ ಕ್ರೌರ್ಯಯುತ ಯುದ್ಧಕ್ಕೆ ಗುರಿಯಾಗಿ ರಾಸಾಯನಿಕ ಮತ್ತು ಇನ್ನಿತರ ಅಸ್ತ್ರಗಳ ಕಾರಣಕ್ಕಾಗಿ ಹಲವು ಪೀಳಿಗೆಗಳು ತೊಂದರೆಗೊಳಗಾಗಿರುವ ವಿಯೆಟ್ನಾಂ ನಮಗಿಂತ 50 ಸ್ಥಾನ ಮೇಲಿದೆ. ಈ ದೇಶಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಮಗಿಂತ ಮುಂದಿರುವುದಕ್ಕೆ ಕಾರಣ ಆ ದೇಶಗಳಲ್ಲಿ ಡಾಲರ್, ಮಿಲೆನಿಯೇರ್‌ಗಳ ಉತ್ಪಾದನೆ ಆಗುತ್ತಿಲ್ಲ…"

… "ಇದರ ಜೊತೆಗೆ ಪಾರ್ಲಿಮೆಂಟಿನಲ್ಲಿ ಇರುವ ಅಸಮಾನತೆಯ ವಿಷಯ ನೋಡೋಣ. 2014ರ ಚುನಾವಣೆಯ ಪ್ರಮಾಣಪತ್ರದಲ್ಲಿ ಘೋಷಿಸಿಕೊಂಡಿರುವಂತೆ ನಮ್ಮ ಲೋಕಸಭೆಯ ಶೇ. 82ರಷ್ಟು ಸಂಸದರು ಕೋಟ್ಯಾಧಿಪತಿಗಳು. ಇದರ ಹಿಂದಿನ ಐದು ಮತ್ತು ಹತ್ತು ವರ್ಷಗಳ ಹಿಂದಿನ ಚಿತ್ರಣ ಏನಿತ್ತು ಅಂತಾ ನೋಡಿದರೆ, 2004ರಲ್ಲಿ ಶೇ. 32ರಷ್ಟು ಮತ್ತು 2009ರಲ್ಲಿ 53ರಷ್ಟು ಇದ್ದರು. ಅಂದರೆ ದಿನೇದಿನೇ ಕೋಟ್ಯಾಧಿಪತಿ ಸಂಸದರ ಸಂಖ್ಯೆ ಭಾರೀ ಏರಿಕೆಯಾಗುತ್ತಿದೆ… ಮುಂದುವರಿದು ಡೆನ್ಮಾರ್ಕ್, ಸ್ವೀಡನ್, ಫಿನ್‌ಲ್ಯಾಂಡ್, ಐಸ್‌ಲ್ಯಾಂಡ್, ನಾರ್ವೆಯಂಥಾ ದೇಶಗಳಲ್ಲಿ ಭಾರತದ ಒಟ್ಟು ಬಿಲಿಯನೇರ್‌ಗಳ ಶೇ. 3 ರಷ್ಟು ಮಾತ್ರ ಇದ್ದಾರೆ ಎಂದರೆ ನಿಮಗೆ ಆಶ್ಚರ್ಯ ಆಗಬಹುದು…"

ಹೀಗೆ ದಿನೇದಿನೇ ನಮ್ಮ ಪ್ರಜಾತಂತ್ರ ವ್ಯವಸ್ಥೆಯೇ ಕಾರ್ಪೊರೇಟ್ ಕಂಪನಿಗಳ, ಬಲಾಢ್ಯ ಶಕ್ತಿಗಳ ಕೈವಶವಾಗುತ್ತಿರುವ ಮುಂದುವರಿದ ಪರಿಣಾಮವಾಗಿ ಈ ಎಲ್ಲ ವಿದ್ಯಮಾನಗಳು ಘಟಿಸುತ್ತಿವೆ. ಶೇಕಡ ಒಂದಕ್ಕಿಂತಲೂ ಕಡಿಮೆ ಸಂಖ್ಯೆಯ ಜನರು 130 ಕೋಟಿ ಜನರ ಮೇಲೆ ಸವಾರಿ ಮಾಡುತ್ತಿದ್ದಾರೆ.

ಭಾರತ ಎಚ್ಚೆತ್ತುಕೊಳ್ಳುವುದು ಯಾವಾಗ?



ಹೆಚ್ಚಾಗಿತ್ತಾದರೂ ಕ್ರಮೇಣ ದೇಶಾದ್ಯಂತ ಎಡಪಕ್ಷಗಳು ಕುಸಿಯುತ್ತಿರುವಂತೆಯೇ ಜೆಎನ್‌ಯು ಪರಿಸ್ಥಿತಿಯೂ ಆಯಿತು. ಈಚಿನ ವರ್ಷಗಳಲ್ಲಿ ಎಡಪಕ್ಷಗಳ ಪ್ರಭಾವ ಅಷ್ಟಕ್ಕಷ್ಟೆ. ಹೀಗೆ ಇಲ್ಲಿನ ಜೆಎನ್‌ಯು ಯಾವುದೇ ಒಂದು ನಿರ್ದಿಷ್ಟ ಪಕ್ಷ ಅಥವ ಸಿದ್ಧಾಂತಕ್ಕೆ ಕಟ್ಟುಬೀಳದೇ ಜನಪರ, ಪ್ರಜಾತಾಂತ್ರಿಕ ಮೌಲ್ಯಗಳಿಗೆ ಮನ್ನಣೆ ಕೊಡುತ್ತಾ ಬಂದಿದೆ.

ಶೈಕ್ಷಣಿಕ ದಾಖಲೆಯಲ್ಲಿ ಈ ವಿವಿಗೆ ದೇಶದಲ್ಲೇ ಅತ್ಯಂತ ಮಹತ್ವದ ಸ್ಥಾನವಿದೆ.

ಶೈಕ್ಷಣಿಕ ಮೌಲ್ಯಮಾಪನ ಸಂಸ್ಥೆ ನ್ಯಾಕ್ ಸಮಿತಿ 2012ರಲ್ಲಿ 4 ಅಂಕಗಳಿಗೆ 3.9ರಷ್ಟು ಗರಿಷ್ಠ ಅಂಕ ಕೊಟ್ಟು ದೇಶದಲ್ಲೇ ಪ್ರಥಮ ಸ್ಥಾನ ನೀಡಿದೆ. ಹತ್ತು ಹಲವು ಸರ್ವೆಗಳಲ್ಲೂ ಜೆಎನ್‌ಯುನ ಸ್ಥಾನ ಸದಾ ಎತ್ತರದಲ್ಲೇ ಇರುತ್ತದೆ. ಇಲ್ಲಿ ವ್ಯಾಸಂಗ ಮಾಡಲು ದೇಶವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಇಲ್ಲಿಂದ ಹೊರಬಂದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹಂತಕ್ಕೇರಿದ್ದಾರೆ. ಕೆಲವು ಹೆಸರುಗಳನ್ನು ಪ್ರಸ್ತಾಪಿಸುವುದಾದರೆ ನೇಪಾಳದ ಮಾಜಿ ಪ್ರಧಾನಿ ಬಾಬುರಾಮ್ ಭಟ್ಟಾರಾಯ್, ಇಡೀ ದೇಶವೇ ಮೆಚ್ಚುವ ಜನಪರ ಪತ್ರಕರ್ತ ಪಿ.ಸಾಯಿನಾಥ್, ರಿಸರ್ವ್ ಬ್ಯಾಂಕ್‌ನ ಡೆಪ್ಯೂಟಿ ಗವರ್ನರ್ ಆಗಿದ್ದ ಹರೂನ್ ರಷೀದ್ ಖಾನ್, ಸಿಪಿಎಂ ನಾಯಕರಾದ ಪ್ರಕಾಶ್ ಕಾರಟ್, ಸೀತಾರಾಮ್ ಯೆಚೂರಿ, ಈ ಕಾಲಮಾನದ ಪ್ರಖ್ಯಾತ ಚಿಂತಕ ಸ್ವರಾಜ್ ಅಭಿಯಾನದ ರೂವಾರಿ ಪ್ರೊ.ಯೋಗೇಂದ್ರ ಯಾದವ್ ಮುಂತಾದವರು ಇಲ್ಲಿನ ಹಳೇ ವಿದ್ಯಾರ್ಥಿಗಳು.

ನೆಟ್‌ವರ್ಕ್ 18 ಮಾಧ್ಯಮ ಸಂಸ್ಥೆಯ ಮುಖ್ಯಸ್ಥ ಉಮೇಶ್ ಉಪಾಧ್ಯಾಯ, ಸಿಎನ್‌ಬಿಸಿ ನ್ಯೂಸ್‌ನ ಉದಯನ್ ಮುಖರ್ಜಿ, ಕ್ಯಾಬಿನೆಟ್ ಸೆಕ್ರೆಟರಿಯಾಗಿದ್ದ ಅಜಿತ್ ಶೇಠ್, ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಲಲಿತ್ ಮಾನ್‌ಸಿಂಗ್, ತೀರಾ ಇತ್ತೀಚಿನವರೆಗೆ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಎಸ್.ಜೈಶಂಕರ್‌ರಂಥಾ ಅದೆಷ್ಟೋ ಅಧಿಕಾರಿಗಳು ಜೆಎನ್‌ಯುನಲ್ಲಿ ಕಲಿತಿದ್ದಾರೆ. ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್, ಬಿಜೆಪಿಯ ಇಂದಿನ ಮಂತ್ರಿ ನಿರ್ಮಲಾ ಸೀತಾರಾಮನ್ ಕೂಡ ಜೆಎನ್‌ಯು ಪಟ್ಟಿಯಲ್ಲಿದ್ದಾರೆ. ಲಿಬಿಯಾದ ಮಾಜಿ ಪ್ರಧಾನಿ ಅಲಿ ಜೈದಾನ್ ಕೂಡ ಇಲ್ಲಿ ಕಲಿತುಹೋದವರೇ. ಅಲ್ಲದೇ ಈ ವಿವಿ ಸಾವಿರಾರು ಪ್ರೊಫೆಸರ್‌ಗಳು, ಹತ್ತಾರು ವಿಶ್ವವಿದ್ಯಾಲಯಗಳ ಉಪಕುಲಪತಿಗಳನ್ನೂ ಸೃಷ್ಟಿಸಿದೆ.

ಇಂಥಾ ಶೈಕ್ಷಣಿಕ ಕ್ಷೇತ್ರ ತಮ್ಮ ಕೊಳಕು ಸಿದ್ಧಾಂತವನ್ನು ಅಪ್ಪಿಕೊಳ್ಳುತ್ತಿಲ್ಲ ಎಂಬ ಒಂದೇ ಕಾರಣಕ್ಕೆ ಸಂಘಿ ಆಡಳಿತ ಇದರ ಮೇಲೆ ಮುಗಿಬಿದ್ದಿದೆ. ಮೊದಲಿಗೆ ಅನುದಾನವನ್ನು ಕಡಿತಗೊಳಿಸುವ ಮೂಲಕ, ತಡೆಹಿಡಿಯುವ ಮೂಲಕ ಉಸಿರು ಕಟ್ಟಿಸುವ ತಂತ್ರ ಅನುಸರಿಸಲಾಯಿತು. ಈಗ ಅಂತಿಮವಾಗಿ "ದೇಶದ್ರೋಹ"ದ ಆರೋಪ ಹೊರಿಸಿ ಈ ವಿವಿಯನ್ನೇ ಮುಚ್ಚಿಬಿಡುವ ಷಡ್ಯಂತ್ರ ಹೆಣೆದಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ...

ಮೋದಿ ಮಾದರಿ ಫ್ಯಾಸಿಸಂ ಕ್ರಮೇಣ ಭಾರತದಲ್ಲಿ ಹುರಿಗಟ್ಟುತ್ತಿರುವ ಈ ಹೊತ್ತಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಪ್ರಖ್ಯಾತ ಪತ್ರಿಕೆಗಳು ಭಾರತದ ವಿದ್ಯಮಾನವನ್ನು ಹೇಗೆ ವಿಶ್ಲೇಷಣೆ ಮಾಡಿವೆ ಎಂಬುದರ ಒಂದು ಇಣುಕು ನೋಟ ಇಲ್ಲಿದೆ.

ನ್ಯೂಯಾರ್ಕ್ ಟೈಮ್ಸ್ - "ಭಾರತದ ವಿವಿ ಕ್ಯಾಂಪಸ್‌ಗಳಲ್ಲಿ 2015ನೇ ವರ್ಷ ಕೋಲಾಹಲಕಾರಿಯಾಗಿತ್ತು. ವಿದ್ಯಾರ್ಥಿಗಳು ಭಾರೀ ಸಂಖ್ಯೆಯಲ್ಲಿ ಸಂಘಟಿತರಾಗಿ ಜಾತಿವಾದದ ವಿರುದ್ಧ ಹಾಗೂ ಬಿಜೆಪಿ ನಿಷ್ಠ ಮಂದಿಯನ್ನು ವಿವಿಗಳ ಆಯಕಟ್ಟಿನ ಹುದ್ದೆಗಳಿಗೆ ನೇಮಕ ಮಾಡುವುದರ ವಿರುದ್ಧ ಹೋರಾಟ ಆರಂಭಿಸಿದರು.... ಆದರೆ ಅಧಿಕಾರಾರೂಢ ಬಿಜೆಪಿ ಮತ್ತು ಆರೆಸ್ಸೆಸ್ ಇದಕ್ಕೆ ಪ್ರತಿಕ್ರಿಯೆಯಾಗಿ ಸಂವಾದ ಮತ್ತು ಮಾತುಕತೆಗಳನ್ನು ನಡೆಸುವ ಬದಲಿಗೆ ವಿದ್ಯಾರ್ಥಿಗಳನ್ನು ದಮನಿಸುವ ಮತ್ತು ಶಿಕ್ಷೆಗೆ ಗುರಿಪಡಿಸುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದೆ..."

ಬಿಬಿಸಿ : - " ಜವಹರಲಾಲ್ ಯೂನಿವರ್ಸಿಟಿಯನ್ನು 'ಭಾರತದ ಬರ್ಕ್‌ಲಿ' ಎಂದು ಪರಿಗಣಿಸಲಾಗುತ್ತದೆ. ಯಾಕೆಂದರೆ ಎಡಪಂಥೀಯ ಸಿದ್ಧಾಂತಗಳ ಪ್ರಭಾವ ಅಲ್ಲಿನ ಕ್ಯಾಂಪಸ್ ರಾಜಕೀಯದಲ್ಲಿ ಗಾಢವಾಗಿದೆ... ರಾಜಕೀಯ ವಿಮರ್ಶೆಗಳನ್ನು ಪ್ರತಿಬಂಧಿಸಲು ದೇಶದ್ರೋಹದ ಕಾನೂನುಗಳನ್ನು ಬಳಸಲಾಗುತ್ತಿದೆ; ಅದೇ ಸಂದರ್ಭದಲ್ಲಿ ಹಲವಾರು ಕೋರ್ಟ್ ತೀರ್ಪುಗಳು ರಾಜಕೀಯ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಹೊರಬೀಳುತ್ತವೆ. ಹೀಗೆ ಭಾರತದಲ್ಲಿ ಒಂದು ರೀತಿಯ ಮಿಶ್ರ ಚಿತ್ರಣವನ್ನು ನಾವು ಕಾಣುತ್ತೇವೆ."

ಗಾರ್ಡಿಯನ್ : - "ಇದು ಭಾರತದ ಮಟ್ಟಿಗೆ ಒಂದು ತಿರುವುಬಿಂದು; ಅಸಹಿಷ್ಣುತೆಯ ಬದಲಿಗೆ ಸ್ವಾತಂತ್ರದ ಹಾದಿಯನ್ನು ಭಾರತ ಆಯ್ದುಕೊಳ್ಳಲೇಬೇಕು" ಎಂಬ ಸ್ಪಷ್ಟ ಸಂದೇಶವನ್ನು ನೀಡಿದೆ. ಹಾಗೇ ಮುಂದುವರೆದು "ಇಂದಿನ ಗೃಹಮಂತ್ರಿ ರಾಜನಾಥ್ ಸಿಂಗ್ ಒಬ್ಬ ಕಟ್ಟರ್‌ಪಂಥೀಯನಾಗಿರುವುದರಿಂದ ಪ್ರಭುತ್ವ ದಮನ ಮತ್ತು ಬೌದ್ಧಿಕ ಸ್ವಾತಂತ್ರ್ಯಗಳು ಪರಸ್ಪರ ಮುಖಾಮುಖಿಯಾಗಿವೆ. ಹೀಗೆ ಭಾರತ ಒಂದು ಐತಿಹಾಸಿಕ ತಿರುವುಬಿಂದುವಿನಲ್ಲಿದೆ" ಎಂದು ಭವಿಷ್ಯ ನುಡಿದಿದೆ.

ಜೆಎನ್‌ಯುನ ವಿವಿಧ ಕಾಲೇಜುಗಳ ಡೀನ್‌ಗಳಾಗಿ ಕೆಲಸ ಮಾಡಿದ ಗಣ್ಯರ ಜಂಟಿ ಹೇಳಿಕೆ ಹೀಗಿದೆ:

ಈ ಕೆಳಗೆ ಸಹಿ ಮಾಡಿರುವ ನಾವುಗಳು ಬಹಳ ಸುದೀರ್ಘ ಕಾಲ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಬೋಧಕರಾಗಿ ದುಡಿದಿದ್ದೇವೆ ಹಾಗೂ ಜೆಎನ್‌ಯು ಅಡಿಯಲ್ಲಿರುವ ವಿವಿಧ ಸಂಸ್ಥೆಗಳ ಡೀನ್‌ಗಳಾಗಿಯೂ ಸೇವೆ ಸಲ್ಲಿಸಿದ್ದೇವೆ. ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರನ್ನು 'ರಾಷ್ಟ್ರದ್ರೋಹ'ದ ಆರೋಪದಡಿ ಬಂಧಿಸಿರುವುದನ್ನು ಕೇಳಿ ನಮಗೆ ಆಘಾತವಾಗಿದೆ. ಈ ವಿದ್ಯಾರ್ಥಿ ನಾಯಕರು ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್‌ಗೆ ಸಂಬಂಧಿಸಿದವರಾಗಿರುವುದರಿಂದ ಅವರ ನಿಲುವುಗಳು ಮತ್ತು ರಾಜಕೀಯ ಸಾಮ್ಯತೆಗಳು ಎಲ್ಲರಿಗೂ ತಿಳಿದಂಥವೇ ಆಗಿದ್ದು, ಇವರ ಮೇಲೆ ರಾಷ್ಟ್ರದ್ರೋಹದ ಆರೋಪ ಹೊರಿಸಿರುವುದು ಸರ್ವಥಾ ಸಮರ್ಥನೀಯವಲ್ಲ.

ಇತಿಹಾಸವನ್ನು ಕೆದಕಿದರೆ ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷನನ್ನು 1975 - 77 ರ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಬಂಧಿಸಲಾಗಿತ್ತೆಂಬುದನ್ನು ನಾವು ಗಮನಿಸಬಹುದು. ಈಗಿನ ಜೆಎನ್‌ಯುದ ಪರಿಸ್ಥಿತಿಯು ತುರ್ತು ಪರಿಸ್ಥಿತಿಯ ಕರಾಳ ನೆನಪುಗಳು ಮರುಕಳಿಸುವಂತೆ ಮಾಡಿವೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಭಯಭೀತಿ ಹುಟ್ಟಿಸುತ್ತಿರುವ ಕ್ರಮಗಳನ್ನು ತಡೆಗಟ್ಟಿ, ವಿಶ್ವವಿದ್ಯಾಲಯದ ಕ್ಯಾಂಪಸ್ ಎಂದಿನಂತೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಬೇಕೆಂದು ನಾವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇವೆ.

ಸಹಿ ಮಾಡಿದವರು

ಕೆ.ಎಸ್.ಘಣಿಕ್ಕರ್, ಸಿ.ಪಿ.ಭಾಂಬ್ರಿ, ಅನಿಲ್ ಭಟ್ಟಿ, ಆದಿತ್ಯ ಮುಖರ್ಜಿ, ಉತ್ಸಾ ಪಟ್ನಾಯಕ್, ಪ್ರಭಾತ್ ಪಟ್ನಾಯಕ್, ಝೋಯಾ ಹಸನ್, ಅಂಜನ್ ಮುಖರ್ಜಿ, ಮೃದುಲಾ ಮುಖರ್ಜಿ

ಪ್ರೇಮಲತಾ ಅವರಿಗೆ ಜಯವಾಗಲಿ

ಗೌರಿ ಲಂಕೇಶರಿಗೆ ಹೃತ್ಪೂರ್ವಕ ನಮಸ್ಕಾರಗಳು, ತಮ್ಮ 24 ಫೆಬ್ರವರಿ, 2016 ರ ಸಂಚಿಕೆಯ 'ಕಂಡಹಾಗೆ' ಬಗೆಗೆ ಈ ಪ್ರತಿಕ್ರಿಯೆ ವ್ಯಕ್ತಪಡಿಸಬೇಕೆನಿಸಿತು. ಪ್ರೇಮಲತಾ ಅವರ ಬಗೆಗೆ ತಮಗಿರುವ ಕಾಳಜಿ ಹಾಗೂ ತಮ್ಮ ಮುಕ್ತ ಬೆಂಬಲಕ್ಕೆ ನಮ್ಮಂತಹ ಮಹಿಳಾ ಓದುಗರೆಲ್ಲರ ಅನಂತಾನಂತ ಧನ್ಯವಾದಗಳು. ಈ ರೀತಿಯ ಲೈಂಗಿಕ ದೌರ್ಜನ್ಯಕ್ಕೊಳಗಾಗಿ ನಲುಗುತ್ತಿರುವ ಮಹಿಳೆಯರ ಬಗ್ಗೆ ತಮ್ಮ ನಿಲುವೇನೆಂಬುದನ್ನು ತಿಳಿಯುವ ಕುತೂಹಲ ಬಹಳ ದಿನಗಳಿಂದಲೂ ನನ್ನಲ್ಲಿತ್ತು. ಪ್ರೇಮಲತಾರ ಬಗೆಗೆ ಮಹಿಳೆಯರೂ ಒಳಗೊಂಡಂತೆ ಎಲ್ಲರ ಪ್ರಶ್ನೆ 'ಇಷ್ಟು ವರ್ಷ ಸುಮ್ಮನಿದ್ದು ಈಗ ದೂರು ನೀಡಿರುವುದರ ಹಿಂದಿನ ದುರುದ್ದೇಶ ಏನು?' ಎಂಬುದು. ಈ ಪ್ರಶ್ನೆಗೆ ನೀವು ಬಹಳ ಸಮರ್ಪಕವಾದ, ಸಮಂಜಸವಾದ ಉತ್ತರವನ್ನು (ಅಂತಾರಾ ಜೈಸ್ ಅವರ ರೆಫರನ್ಸ್ ಮೂಲಕ) ನೀಡಿರುತ್ತೀರಿ.

ಈ ಸಮಾಜ ಎಷ್ಟೇ ಆಧುನಿಕವಾಗಿದ್ದರೂ, ಮಹಿಳೆಯರ ... ಸಾಕ್ಷರತೆ ಮಟ್ಟ ಎಷ್ಟೇ ಉನ್ನತಗೊಂಡಿದ್ದರೂ, ಆಕೆಯನ್ನು ..., ಸೆಕೆಂಡ್ ಗ್ರೇಡ್ ಸಿಟಿಜನ್ (ಅಡಿಯಾಳು) ಎಂದೇ ...ಗಣಿಸಲಾಗುತ್ತಿದೆ. ಒಬ್ಬ ಮಹಿಳೆ ಸ್ವಂತ ಅಭಿಪ್ರಾಯ, ವ್ಯಕ್ತಿತ್ವದೊಂದಿಗೆ ವಿಭಿನ್ನಳಾಗಿರುವಳೆಂದರೆ ಅವಳ ಕಥೆ ಮುಗಿದೇಹೋಯಿತು. ಹೆಜ್ಜೆಹೆಜ್ಜೆಗೂ 'ಹೆಣ್ಣು' ಎಂಬ ಒಂದೇ ಕಾರಣಕ್ಕೆ ಮಹಿಳೆಯರು ಅನುಭವಿಸುತ್ತಿರುವ ಹಿಂಸೆ, ಕಿರಿಕಿರಿ, ಕಿರುಕುಳಗಳನ್ನೆಲ್ಲಾ ಧ್ವನಿಯಾಗಿಸಿ ಬಿಟ್ಟರೆ ಇಡೀ ಸಮಾಜವೇ ಬೆತ್ತಲೆಯಾಗಿ ತಲೆತಗ್ಗಿಸಿ ನಿಲ್ಲಬೇಕಾಗುತ್ತದೆ. ಹೆಣ್ಣು ಈ ಸಮಾಜದಲ್ಲಿ ಲೈಂಗಿಕ ತೃಷೆ ತೀರಿಸಲು ಬೇಕಾಗಿರುವ ಒಂದು ವಸ್ತು ಅಷ್ಟೇ. ಹಾಗಿದ್ದರೆ ಹೆಣ್ಣುಮಕ್ಕಳ ಪರಿಸ್ಥಿತಿಯಲ್ಲಿ ಬದಲಾವಣೆ ತರುವುದಾದರೂ ಹೇಗೆ? ಅವಳ ರಕ್ಷಣೆಗೆ ಅವಳೇ ನಿಲ್ಲಬೇಕು. ಅಂದರೆ ನಮ್ಮ ಹೆಣ್ಣು ಮಕ್ಕಳನ್ನು ಬೆಳೆಸುವಾಗಲೇ ಅವರಲ್ಲಿ ಧೈರ್ಯ, ದೃಢತೆ, ಸ್ಥೈರ್ಯ, ಆತ್ಮವಿಶ್ವಾಸ ಮತ್ತು ಆತ್ಮ ರಕ್ಷಣೆಯನ್ನು ತುಂಬಿ ಗಟ್ಟಿ ವ್ಯಕ್ತಿಗಳನ್ನಾಗಿ ಬೆಳೆಸಬೇಕು. ಇದು ಸಾಧ್ಯವೇ?

ನಿಜವಾಗಿಯೂ ಶೋಷಣೆಗೊಳಪಟ್ಟು ಮೂಕವೇದನೆ ಅನುಭವಿಸುತ್ತಿರುವ ಮಹಿಳೆಯರೆಲ್ಲರಿಗೂ ಪ್ರೇಮಲತಾರ ಪರಿಸ್ಥಿತಿ ಏನೆಂಬುದು ಅರ್ಥವಾಗಿರುತ್ತದೆ. ಅವರ ಹೋರಾಟಕ್ಕೆ ನ್ಯಾಯ ಸಿಕ್ಕೀತೆಂಬ ಭರವಸೆಯೇನೂ ನಮಗಿಲ್ಲ. ಆ ರೀತಿ ಏನಾದರೂ ಆಗಿಬಿಟ್ಟರೆ ಈ ನಿರಂತರ ಶೋಷಣೆಗೆ ಮುಕ್ತಾಯ ಹಾಡಬೇಕಾದೀತು. ಏಕೆಂದರೆ ಇನ್ನೂ ಇಂತಹ ಸಾವಿರಾರು ಪ್ರಕರಣಗಳು ಬಾಯಿದೆರೆದುಕೊಂಡು ಈ ಕಾಮಾಸುರರನ್ನು ನುಂಗಿ ನೀರು ಕುಡಿಯಲು ಕಾದು ಕುಳಿತಿದ್ದಾವೆಂಬುದು ಹಸಿ ಸತ್ಯ. ಆದರೆ ಪ್ರೇಮಲತಾ ಅವರಿಗೆ ಜಯವಾಗಲಿ ಮತ್ತು ಅವರು ಧೃತಿಗೆಡದಿರಲಿ ಎಂಬುದಷ್ಟೇ ನಮ್ಮ ಪ್ರಾಮಾಣಿಕ ಆಶಯ.

(ಒಂದು ವೈಯಕ್ತಿಕ ಉದಾಹರಣೆ: ತೀರಾ ಇತ್ತೀಚಿನ ಹೊಸ ಪರಿಚಯದ ಸಹೋದ್ಯೋಗಿಯೊಬ್ಬ ಬೆಳಗ್ಗೆ ಬೆಳಿಗ್ಗೆಯೇ (9 ಗಂಟೆಗೆ) ನಾನು ಕಾಲೇಜಿನಲ್ಲಿ ತರಗತಿಗೆ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಏಕಾಏಕಿ "ನೀವು ಮದುವೆಯಾದಾಗ 'ಅದಕ್ಕೆ' ಎಲ್ಲಿಗೆ ಹೋಗಿದ್ರಿ?" ಎಂದು ಕೇಳಿದ. ಅಂದರೆ ಬೆಳಗ್ಗೆ ಬೆಳಗ್ಗೆ ಕರ್ತವ್ಯದ ಕಡೆಗೆ ಗಮನ ಹರಿಸದೇ ತನಗಿಂತ ಹಿರಿಯ ಮಹಿಳಾ ಸಹೋದ್ಯೋಗಿಗೆ ಈ ಪ್ರಶ್ನೆ ಕೇಳುತ್ತಾರೆಂದರೆ ಇನ್ನು ರಾತ್ರಿಯಿಡೀ ಇವರ ಚಿಂತೆ-ಚಿಂತನೆ ಯಾವುದರ ಕಡೆಗಿರುತ್ತದೆ ಎಂದು ಊಹಿಸಬಹುದು. ಇದು ಒಂದು ತೀರಾ ಸಣ್ಣ ಉದಾಹರಣೆ ಅಷ್ಟೆ. ಇಂತಹ ಅಥವಾ ಇದಕ್ಕಿಂತ ಕೆಟ್ಟ ನೂರಾರು ನೈಜ ಉದಾಹರಣೆಗಳನ್ನು ನಾನೊಬ್ಬಳೇ ನೀಡಬಲ್ಲೆ)

ಹಾಗೂ ಜಿ.ರವಿಕಿರಣ ರೈ ಅವರ "ಹೆಂಗಸರಲ್ಲಿಯ ಮೌಢ್ಯ ಹೋಗದೇ ಸಮಾಜ ಬದಲಾಗದು" ಸಕಾಲಿಕವಾಗಿರುತ್ತದೆ. ರೈ ಅವರು ನಮ್ಮ ಸಮಾಜದ ಯುವ ಜನತೆಯ ಮೌಢ್ಯದ ಮೂಲ ಜಾಡನ್ನು ಸರಿಯಾಗಿ ಗುರುತಿಸಿದ್ದಾರೆ. ನಿಜವಾಗಿಯೂ ಈ ಹೊಸದರೊಳಗಿನ ನವ ಬ್ರಾಹ್ಮಣ್ಯವೇ (ಮುಖ್ಯವಾಗಿ ಮಹಿಳೆಯರಲ್ಲಿ) ಅಪಾಯಕಾರಿ ಬೆಳವಣಿಗೆಯಾಗಿರುತ್ತದೆ. ಪತ್ರಿಕೆ ಹೀಗೇ ವೈಚಾರಿಕ ಬೆಳಕನ್ನು ಚೆಲ್ಲುತ್ತಿರಲಿ ಎಂದು ಆಶಿಸುತ್ತಾ...

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಎಸ್.ವೀಣಾ ಕೃಷ್ಣ ಮೂರ್ತಿ

ಪಂಚಸೂತಕಗಳನ್ನು ತಿರಸ್ಕರಿಸಿದ ಶರಣರು

ಶನಿಶಿಂಗ್ಣಾಪುರದ ಸಮಸ್ಯೆಗೆ ಶರಣರಲ್ಲಿ ಉತ್ತರ

ಜನನಸೂತಕ, ಕುಲಸೂತಕ, ರಜಸೂತಕ,
ಎಂಜಲಸೂತಕ, ಪ್ರೇತಸೂತಕ
ಎಂಬಪಾದಿಯಾದ ಸರ್ವಸೂತಕಂಗಳು
ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ.
ಪೂರ್ವಾಚಾರವಳಿದು ಪುನರ್ಜಾತನಾಗಿ,
ಅಂಗದ ಮೇಲೆ ಲಿಂಗಸಾಹಿತ್ಯನಾದ ಭಕ್ತಂಗೆ
ಜನನಸೂತಕವೆಂಬುದೇ ಪಾತಕ ನೋಡಾ.
ಶಿವಭಕ್ತರಾದ ಬಳಿಕ, ಭವಿನೇಮಸ್ಥರ ಕಳೆದು
ಶಿವಕುಲವೇ ಕುಲವಾದ ಭಕ್ತರಿಗೆ
ಕುಲಸೂತಕವೆಂಬುದೇ ಪಾತಕ ನೋಡಾ.
ಗುರುಪಾದತೀರ್ಥ, ಲಿಂಗಪಾದತೀರ್ಥ,
ಜಂಗಮಪಾದತೀರ್ಥ ಆದಿಯಾದ
ಲಿಂಗೋದಕ, ಪಾದೋದಕ,
ಪ್ರಸಾದೋದಕ ಎಂಬ ತ್ರಿವಿಧೋದಕದಲ್ಲಿ
ಸರ್ವಪಾಕಪ್ರಯತ್ನ, ನಾನಾ ಕ್ರಿಯಾವಿಧಾನ, ಸ್ನಾನಪಾನಂಗಳಿಂದ
ಬಾಹ್ಯಾಭ್ಯಂತರಂ ಶುಚಿಯಾದ,
ಶುದ್ಧ ನಿರ್ಮಲದೇಹಿಯಾದ ಭಕ್ತಂಗೆ
ರಜಃಸೂತಕವೆಂಬುದೇ ಪಾತಕ ನೋಡಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಯುಕ್ತನಾದ ಸದಾ ಸನ್ನಿಹಿತ ಭಕ್ತಂಗೆ
ಎಂಜಲಸೂತಕವೆಂಬುದೆ ಪಾತಕ ನೋಡಾ.
ಗುರುವಿನಿಂ ಜನನ, ಚರಲಿಂಗದಿಂ ಸ್ಥಿತಿ,
ಪರಮ ಪಾವನ ಘನಮಹಾಲಿಂಗದೊಳೈಕ್ಯ
ನಿಜಲಿಂಗೈಕ್ಯವಾದ ಸದ್ಭಕ್ತಂಗೆ
ಪ್ರೇತಸೂತಕವೆಂಬುದೆ ಪಾತಕ ನೋಡಾ.
ಇಂತೀ ಪಂಚಸೂತಕವನುಳ್ಳ ಪಾತಕಂಗಳ
ಪಂಚಾಚಾರಯುಕ್ತನಾದ ಸದ್ಭಕ್ತಂಗೆ ಕಲ್ಪಿಸುವ
ಪಂಚಮಹಾಪಾತಕರ ಅಘೋರ ನರಕದಲ್ಲಿಕ್ಕುವ ಕೂಡಲಸಂಗಯ್ಯ

ಎಂದು ಬಸವಣ್ಣನವರು ಹೇಳಿದ್ದಾರೆ.

"ಭಕ್ತ ಭಕ್ತನೆಂದೇನು? ಪಂಚಸೂತಕವುಳ್ಳನ್ನೆಬರ ಭಕ್ತನೆ?" ಎಂದು ಅಲ್ಲಮಪ್ರಭುದೇವರು ಪ್ರಶ್ನಿಸಿದ್ದಾರೆ. "ರಜಸ್ಸೂತಕ ಕುಲಸೂತಕ ಜನನಸೂತಕ ಪ್ರೇತಸೂತಕ ಉಚ್ಛಿಷ್ಟಸೂತಕ ಎಂದಡೆ, ಆತಂಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ತೀರ್ಥಪ್ರಸಾದವಿಲ್ಲ, ಇಂತೀ ಪಂಚಸೂತಕ ಕಳೆದಲ್ಲದೆ ಭಕ್ತನಾಗ" ಎಂದು ಚೆನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

ರಜಃಸೂತಕದ ವಿರುದ್ಧದ ಈ ಸಂಸ್ಕಾರ 12ನೇ ಶತಮಾನದಲ್ಲೇ ಆರಂಭವಾಗಿದೆ. ಶರಣರು ಪಂಚಸೂತಕ (ಮೈಲಿಗೆ)ಗಳನ್ನು ಪಂಚಪಾಪಗಳೆಂದು ಕರೆದಿದ್ದಾರೆ. ಈ ಪಂಚಸೂತಕಗಳು ನಮ್ಮ ಜನಸಮುದಾಯವನ್ನು ಮೂಢನಂಬಿಕೆಯಲ್ಲಿ ಹಿಡಿದಿಟ್ಟಿವೆ. ಹೆರಿಗೆಯಾದವರ ಮನೆಯಲ್ಲಿ ಐದು ದಿನಗಳ ವರೆಗೆ ಜನನಸೂತಕ, ಅಸ್ಪೃಶ್ಯರಾಗಿ ಹುಟ್ಟಿದವರನ್ನು ಮುಟ್ಟಿದರೆ ಕುಲಸೂತಕ, ಮುಟ್ಟಾದವಳನ್ನು ಮುಟ್ಟಿದರೆ ರಜಃಸೂತಕ, ಒಂದೇ ತಾಟಿನಲ್ಲಿ ಊಟಮಾಡಿದರೆ ಎಂಜಲು ಸೂತಕ, ಸತ್ತವರ ಮನೆಹೊಕ್ಕರೆ ಪ್ರೇತಸೂತಕ- ಹೀಗೆ ವೈದಿಕರ ಬಳುವಳಿಗಳಾದ ಪಂಚಸೂತಕಗಳನ್ನು ಬಸವಾದಿ ಶರಣರು ತಿರಸ್ಕರಿಸಿದ್ದಾರೆ.


ಇಂಥ ಮೂಢನಂಬಿಕೆಗಳನ್ನು ವೈದಿಕರು ಜನರಲ್ಲಿ ಬಿತ್ತುವುದನ್ನು ಚಾರ್ವಾಕರು, ಬುದ್ಧ, ಬಸವ ಮತ್ತು ಅಂಬೇಡ್ಕರರಂಥ ಅವೈದಿಕರು ತಡೆಯಲು ಸತತ ಪ್ರಯತ್ನಿಸಿದ್ದಾರೆ. ಮೂಢನಂಬಿಕೆಗಳ ವಿರುದ್ಧದ ಹೋರಾಟಕ್ಕೆ ಭಾರತದಲ್ಲಿ ಮೂರು ಸಾವಿರ ವರ್ಷಗಳ ಇತಿಹಾಸವಿದೆ. ಆದರೂ ಬಹುಪಾಲು ಜನರು ಮೂಢನಂಬಿಕೆಗಳ ಕಡೆಗೆ ವಾಲುವುದು ರಾಷ್ಟ್ರೀಯ ದುರಂತವಾಗಿದೆ.

ಪಂಚಸೂತಕಗಳು ಜೀವಂತ

21ನೇ ಶತಮಾನದಲ್ಲಿ ಕೂಡ ಈ ಪಂಚಸೂತಕಗಳು, ಮೂಢನಂಬಿಕೆಗಳಿಂದ ತುಂಬಿದ ಮನಸುಗಳಲ್ಲಿ ಜೀವಂತವಾಗಿದ್ದು ಸಮಾಜದಲ್ಲಿ ತಾರತಮ್ಯ ಸೃಷ್ಟಿಸುತ್ತಲೇ ಇವೆ. ಹಿಂದೂ ಮಹಿಳೆಯರು ಗುಡಿಗುಂಡಾರಗಳಲ್ಲಿ ಈ ತಾರತಮ್ಯವನ್ನು ಒಂದಿಲ್ಲೊಂದು ರೀತಿಯಲ್ಲಿ ಅನುಭವಿಸುತ್ತಲೇ ಇರುತ್ತಾರೆ.

ಮಹಾರಾಷ್ಟ್ರ ರಾಜ್ಯದ ಅಹಮದನಗರ ಜಿಲ್ಲೆಯ ಶನಿ ಶಿಂಗ್ಣಾಪುರದಲ್ಲಿನ ಬಯಲುದೇವಾಲಯದಲ್ಲಿ, ಕಪ್ಪುಶಿಲಾರೂಪದಲ್ಲಿರುವ ಶನಿದೇವರನ್ನು ಮುಟ್ಟಿ ಪೂಜಿಸಲು ಮಹಿಳೆಯರಿಗೆ ಅವಕಾಶವಿಲ್ಲ. ನಾಲ್ಕುನೂರು ವರ್ಷಗಳಿಂದ ಮುಂದುವರಿದುಕೊಂಡು ಬಂದ ಈ ಸಂಪ್ರದಾಯವನ್ನು ಮುರಿಯುವುದಕ್ಕಾಗಿ ಕಳೆದ ಜನವರಿ 26ರ ಗಣರಾಜ್ಯೋತ್ಸವದಂದು 400 ಮಹಿಳೆಯರು ಪ್ರಯತ್ನಿಸಿದರು. ಆದರೆ ಪೊಲೀಸ್ ಬಿಗಿ ಬಂದೋಬಸ್ತಿನಿಂದಾಗಿ ಅವರ ಪ್ರಯತ್ನ ವಿಫಲವಾಯಿತು.

ಶನಿದೇವರ ಶಿಲೆಯನ್ನು ಮುಟ್ಟಿ ಪೂಜಿಸುವ ಹಕ್ಕನ್ನು ಚಲಾಯಿಸುವ ಉದ್ದೇಶದಿಂದ 'ಭೂಮಾತಾ ಬ್ರಿಗೇಡ್' ಅಧ್ಯಕ್ಷೆ ತೃಪ್ತಿ ದೇಸಾಯಿ ನೇತೃತ್ವದಲ್ಲಿ ಶಿಂಗ್ಣಾಪುರಕ್ಕೆ ಹೊರಟಿದ್ದ ಈ ಕಾರ್ಯಕರ್ತೆಯರನ್ನು, ಶಿಂಗ್ಣಾಪುರದಿಂದ 70 ಕಿಲೋಮೀಟರ್ ದೂರದ ಸುಪಾ ಪಟ್ಟಣದಲ್ಲಿ ಪೊಲೀಸರು ಬಂಧಿಸಿದರು. ನಂತರ ಬಿಡುಗಡೆ ಮಾಡಿ



ಪುಣೆಗೆ ವಾಪಸ್ ಕಳುಹಿಸಿದರು. ಈ ಸಂದರ್ಭದಲ್ಲಿ ಮಹಿಳೆಯರು ಭಾರಿ ಪ್ರತಿರೋಧ ವ್ಯಕ್ತಪಡಿಸಿದರು. 'ಗಣರಾಜ್ಯೋತ್ಸವ ದಿನ, ಮಹಿಳೆಯರಿಗೆ ಕರಾಳ ದಿನ' ಎಂದು ಘೋಷಿಸುತ್ತ ರಸ್ತೆ ಮೇಲೆ ಮಲಗಿ ಪ್ರತಿಭಟಿಸಿದರು. 'ಇದು ಮಹಿಳೆಯರ ಸಾಂವಿಧಾನಿಕ ಹಕ್ಕಿನ ಸ್ಪಷ್ಟ ಉಲ್ಲಂಘನೆ' ಎಂದು ತೃಪ್ತಿ ದೇಸಾಯಿ ಅತೃಪ್ತಿ ವ್ಯಕ್ತಪಡಿಸಿದರು. ಶಿಂಗ್ಣಾಪುರ ತಲುಪದಂತೆ ನೋಡಿಕೊಂಡ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಟೀಕಿಸಿದರು.

``ಶಿಂಗ್ಣಾಪುರದಲ್ಲಿ ಶನಿದೇವರನ್ನು ಮಹಿಳೆಯರು ಪೂಜಿಸುವ ಹಕ್ಕಿನ ಕುರಿತು ಆಡಳಿತ ಮಂಡಳಿ ಜೊತೆ ಚರ್ಚಿಸಿ ಪರಿಹಾರ ಹುಡುಕುವ ಅಗತ್ಯವಿದೆ" ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಹೇಳಿಕೆ ಕೊಡುವಷ್ಟು ಈ ಮಹಿಳೆಯರ ಹೋರಾಟ ಪ್ರಬಲವಾಗಿತ್ತು.

ಏತನ್ಮಧ್ಯೆ ವಿವಾದ ಇತ್ಯರ್ಥಕ್ಕೆ ಎರಡು ಪರಿಹಾರ ಕ್ರಮಗಳನ್ನು ಕಂಡುಕೊಂಡಿರುವುದಾಗಿ ತಿಳಿಸಿದ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಫೆಬ್ರುವರಿ ಮೊದಲವಾರದಲ್ಲಿ ಶನಿ ಶಿಂಗ್ಣಾಪುರಕ್ಕೆ ಭೇಟಿ ನೀಡಲಿದ್ದಾರೆ. ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ದೇವಾಲಯದ ಟ್ರಸ್ಟಿಗಳು ಮತ್ತು ಶಿಂಗ್ಣಾಪುರ ಗ್ರಾಮಸ್ಥರ ಜೊತೆ ಚರ್ಚಿಸುವ ಉದ್ದೇಶವನ್ನು ಅವರು ಹೊಂದಿದ್ದಾರೆ.

``ಕಾಶಿ ವಿಶ್ವನಾಥ ದೇವಾಲಯದಲ್ಲಿ ಇರುವಂತೆ ಮಹಿಳೆಯರು ಮತ್ತು ಪುರುಷರೆಲ್ಲರಿಗೂ ಗರ್ಭಗುಡಿಗೆ ಪ್ರವೇಶ ನೀಡುವ ಪದ್ಧತಿ ಅನುಸರಿಸಿ. ಇಲ್ಲವೆ ತಿರುಪತಿ ತಿರುಮಲ ದೇವಾಲಯದಲ್ಲಿ ಇರುವಂತೆ ಮಹಿಳೆ ಮತ್ತು ಪುರುಷರೆಲ್ಲರಿಗೂ ಗರ್ಭಗುಡಿಯ ಪ್ರವೇಶ ನಿರ್ಬಂಧಿಸಿ" ಎಂದು ಎರಡು ಪರಿಹಾರ ಸೂತ್ರಗಳನ್ನು ಚರ್ಚೆಗೆ ಇಡಲಿದ್ದಾರೆ ಎಂದು ಆರ್ಟ್ ಆಫ್ ಲಿವಿಂಗ್‌ನ ಕಾರ್ತಿಕ ಕೃಷ್ಣ ತಿಳಿಸಿದ್ದಾರೆ. ವೈದಿಕರನ್ನು ಬಿಟ್ಟು ಶನಿದೇವರ ಕಲ್ಲನ್ನು ಯಾರೂ ಮುಟ್ಟಬಾರದು ಎಂಬುದೇ ಸೂತ್ರದ ಹಿಂದಿರುವ ಮನಸ್ಥಿತಿ ಎಂಬುದು ಮೇಲ್ನೋಟಕ್ಕೇ ಸಾಬೀತಾಗುತ್ತದೆ.

"ಭಾರತೀಯ ದೇವಾಲಯಗಳನ್ನು ಚರ್ಚು, ಮಸೀದಿಗಳಂಥ ಪ್ರಾರ್ಥನಾ ಸ್ಥಳಗಳು ಎಂದು ತಪ್ಪಾಗಿ ಕಲ್ಪಿಸಿದ್ದರಿಂದ ಈ ಎಲ್ಲ ಅವಾಂತರಗಳು. ಭಾರತೀಯರಿಗೆ (ಹಿಂದೂಗಳಿಗೆ) ದೇವಾಲಯಕ್ಕೆ ಹೋಗಿಯೇ ದೇವರನ್ನು ಪೂಜೆ ಮಾಡಬೇಕು ಅಥವಾ ಪೂಜೆ ಮಾಡಿಯೇ ಸದ್ಗತಿಯನ್ನು ಪಡೆಯಬೇಕು ಎಂಬ ನಿರ್ಬಂಧವಿಲ್ಲ. ಹಾಗಾಗಿ ದೇವಾಲಯ ಪ್ರವೇಶವನ್ನು ನಿರಾಕರಿಸಿದ್ದರಿಂದ ಯಾವುದೇ ಭಾರತೀಯನ (ಹಿಂದೂವಿನ) ಧಾರ್ಮಿಕ ಹಕ್ಕುಚ್ಯುತಿಯಾಗುವುದಾಗಲೀ, ಸಾಮಾಜಿಕ ಸ್ಥಾನಮಾನವು ಭ್ರಷ್ಟವಾಗುವುದಾಗಲೀ ಸಾಧ್ಯವಿಲ್ಲ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅಥವಾ ಸದ್ಗತಿಗೆ ದೇವಾಲಯಗಳೊಂದೇ ಸಾಧನ ಎಂಬುದಾಗಿ ನಮ್ಮ ಯಾವ ಮಹಾಪುರುಷರೂ ಹೇಳಿಲ್ಲ, ಯಾವ ಗ್ರಂಥಗಳೂ ಸಾರಿಲ್ಲ. ಹಾಗೆ ಸಾರಿದವರನ್ನು ಅಜ್ಞಾನಿಗಳು ಎಂದೇ ನಮ್ಮ ಪರಂಪರೆ ಹೇಳುತ್ತದೆ. ಹಾಗಾಗಿ ಈ ಸಂದರ್ಭದಲ್ಲಿ ಧಾರ್ಮಿಕ ಹಕ್ಕಿನ ಕುರಿತು ಮಾತನಾಡುವವರಿಗೆ ನಮ್ಮ ಪರಂಪರೆಯ ಕುರಿತು ಈ ಅಜ್ಞಾನವಿದೆ ಎನ್ನಲಡ್ಡಿಯಿಲ್ಲ" ಎಂದು ಕುವೆಂಪು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಡಾ. ರಾಜಾರಾಮ ಹೆಗಡೆ ಜನವರಿ 30ರ ಪ್ರಜಾವಾಣಿ 'ಅಂತರಾಳ'ದಲ್ಲಿ ಹೇಳಿದ್ದಾರೆ. ಇವರಿಗೆ ಏನನ್ನಬೇಕು?.

1930ನೇ ಮಾರ್ಚ್ 3ರಂದು ನಾಸಿಕ್‌ನಲ್ಲಿರುವ ಕಾಳಾರಾಮ್ ಮಂದಿರ ಪ್ರವೇಶ ಚಳವಳಿ ಪ್ರಾರಂಭವಾಯಿತು. 15 ಸಾವಿರ ಸ್ವಯಂಸೇವಕರು ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಬಿ.ಜಿ. ಖೇರ್ ಅವರಂಥ ಖ್ಯಾತ ಬ್ರಾಹ್ಮಣರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಕಾಳಾರಾಮ್ ಮಂದಿರ ಪ್ರವೇಶ ಸತ್ಯಾಗ್ರಹ 5 ವರ್ಷಗಳವರೆಗೆ ನಡೆಯಿತು.

``ದಲಿತರಿಗೆ ಪ್ರವೇಶವಿಲ್ಲದ ಮಂದಿರಗಳಲ್ಲಿ ಪ್ರವೇಶ ಮಾಡುವುದಿಲ್ಲ" ಎಂಬುದು ಗಾಂಧೀಜಿಯವರ ದೃಢನಿರ್ಧಾರವಾಗಿತ್ತು.

ರಾಜಾರಾಮ ಹೆಗಡೆ ಅವರ ಚಿಂತನಾ ಸಾಮರ್ಥ್ಯದ ಪ್ರಕಾರ ಅಂಬೇಡ್ಕರ್, ಖೇರ್, ಗಾಂಧೀಜಿ ಮತ್ತು ಶನಿದೇವರ ಶಿಲಾಸ್ಪರ್ಶಕ್ಕೆ ಹಾತೊರೆಯುವ ಮಹಿಳೆಯರೆಲ್ಲ ಅಜ್ಞಾನಿಗಳೆ?

'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ' ಎಂದು ಬಸವಣ್ಣನವರು ಹೇಳಿದ್ದಾರೆ. ಹೆಣ್ಣಿನ ಅಂಡಾಶಯದೊಳಗೆ ಗಂಡಿನ ರೇತಸ್ಸು ಸೇರಿದಾಗಲೇ, ಅಂದರೆ ಆ ರೇತಸ್ಸು ಹೊಲೆ (ಮುಟ್ಟು) ಕಂಡಲ್ಲದೆ ಪಿಂಡ(ಭ್ರೂಣ)ದ ಸೃಷ್ಟಿಯಾಗದು ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಮುಟ್ಟಿನ ಕಾರಣಕ್ಕೆ ಹೆಣ್ಣನ್ನು ದೂರವಿಡುವುದನ್ನು ವಿರೋಧಿಸಿದ್ದಾರೆ. ಬಸವ ಧರ್ಮವು ಯಾವುದೇ ಸೂತಕಗಳಿಲ್ಲದ ಧರ್ಮವಾಗಿದೆ.

ಮುಂಬೈ ಸಮುದ್ರದೊಳಗಿರುವ ಹಾಜಿ ಅಲಿ ದರ್ಗಾ. ದರ್ಗಾ ಪ್ರವೇಶದ ಹಕ್ಕಿಗಾಗಿ ಮುಸ್ಲಿಂ ಮಹಿಳೆಯರು ಧ್ವನಿ ಎತ್ತಿದ್ದಾರೆ.



ಗುಲಾಮಗಿರಿ

ಜೋತಿಬಾ ಫುಲೆ ಅವರು 19ನೇ ಶತಮಾನದ ಮರಾಠಿ ಭಾಷೆಯಲ್ಲಿ 'ಗುಲಾಮಗಿರಿ' ಪುಸ್ತಕ ಪ್ರಕಟಿಸಿ (ಕನ್ನಡ ಅನುವಾದ: ಡಾ. ಸೂರ್ಯಕಾಂತ ಸುಜ್ಯಾ...) ವೈದಿಕ ಪುರಾಣಗಳು ಯಾವ ರೀತಿಯಲ್ಲಿ ಶೋಷಣೆಗೆ ಪ್ರಚೋದನೆ ನೀಡುತ್ತವೆ. ವೈದಿಕರ ಹಿಡಿತದಿಂದ ಶೂದ್ರ ಮತ್ತು ಅತಿಶೂದ್ರರು ಹೇಗೆ ಹೊರಬಂದು ಆತ್ಮಗೌರವದ ಬದುಕನ್ನು ಬದುಕಬೇಕು ಎಂಬುದನ್ನು ತಿಳಿಸಿಕೊಡುವುದು ಜೋತಿಬಾ ಫುಲೆ ಅವರ ಉದ್ದೇಶವಾಗಿದೆ.

ಈ 'ಗುಲಾಮಗಿರಿ' ಪುಸ್ತಕದಲ್ಲಿ ಬಹಳ ಮಹತ್ವದ ಸಂಭಾಷಣೆಯೊಂದಿದೆ. ಆ ಕಾಲದಲ್ಲಿನ ಮಹಾರಾಷ್ಟ್ರದ ಲಿಂಗಾಯತರಲ್ಲಿ ಕೂಡ 'ರಜಃಸೂತಕ ಸಂಪ್ರದಾಯ' ಇದ್ದಿದ್ದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅದು ಹೀಗಿದೆ:

ಜೋತಿಬಾ: ಹಾಗಾದರೆ, ಇಂಥ ನೀಚ, ದುಷ್ಟ, ದುರಾಚಾರಿ ಬ್ರಾಹ್ಮಣರಿಗೆ ಸಂಬಂಧಿಸಿ ಮನುಸ್ಮೃತಿಯಲ್ಲಿ ಏನನ್ನು ಬರೆಯಲಾಗಿದೆ ಹೇಳು ನೋಡೋಣ.

ಧೋಂಡಿರಾವ್: ಮನು ತನ್ನ ಸ್ಮೃತಿಯಲ್ಲಿ ಪ್ರತಿಪಾದಿಸಿದ ಉತ್ಪತ್ತಿ ಸಿದ್ಧಾಂತ ಅತ್ಯಂತ ಸತ್ಯದೂರ ಮತ್ತು ನಿರಾಧಾರವಾದುದೆಂದು ಪ್ರಮಾಣಿತವಾಗುತ್ತದೆ. ಏಕೆಂದರೆ ಆತನ ಸಿದ್ಧಾಂತ ಸಂಪೂರ್ಣ ಮಾನವ ಸಮಾಜಕ್ಕೆ ಅನ್ವಯವಾಗುವುದಿಲ್ಲ......

ಜೋತಿಬಾ: ಸರಿ, ಹಾಗಾದರೆ ನಿನ್ನಿಚ್ಛೆ. ಬ್ರಾಹ್ಮಣನನ್ನು ಜನ್ಮನೀಡುವ ಬ್ರಹ್ಮನ ಬಾಯಿಯೇನಿದೆಯೋ ಅದು ಪ್ರತಿ ತಿಂಗಳು ಮುಟ್ಟು ಬಂದಾಗ ಮೂರ್‍ನಾಲ್ಕು ದಿನಗಳಿಗಾಗಿ ಅಪವಿತ್ರವಾಗುತ್ತಿತ್ತೋ ಅಥವಾ ಲಿಂಗಾಯತ ಹೆಣ್ಣುಮಕ್ಕಳ ಹಾಗೆ ಭಸ್ಮ (ವಿಭೂತಿ) ಧರಿಸಿ ಪವಿತ್ರವಾಗಿ ಕೆಲಸ ಕಾರ್ಯಗಳಲ್ಲಿ ತೊಡಗುತ್ತಿತ್ತೋ? ಇದಕ್ಕೆ ಸಂಬಂಧಿಸಿ ಮನು ಏನಾದರೂ ಬರೆದಿರುವನೊ ಇಲ್ಲವೊ?

ಧೋಂಡಿರಾವ್: ಇಲ್ಲ, ಆದರೂ ಬ್ರಾಹ್ಮಣರ ಜನನದ ಮೂಲಕಾರಣ ಬ್ರಹ್ಮನೇ ಇದ್ದಾನೆ. ಹಾಗೆಯೆ ಲಿಂಗವಂತ ಮಹಿಳೆಯರ ಉಪದೇಶ ಅವರಿಗೆ ಹೇಗೆ ಉಚಿತ ಎನಿಸಿರಲು ಸಾಧ್ಯ? ಏಕೆಂದರೆ ಇಂದಿನ ಬ್ರಾಹ್ಮಣರು 'ಲಿಂಗಾಯತರು ಮುಟ್ಟಿ ತಟ್ಟಿಯನ್ನು ಪಾಲಿಸುವುದಿಲ್ಲ' ಎಂದು ತಿರಸ್ಕಾರ ಮಾಡುತ್ತಾರೆ.

ಮುಸ್ಲಿಂ ಮಹಿಳೆಯರು

ಮುಸ್ಲಿಂ ಮಹಿಳೆಯ ಸ್ಥಿತಿ ಕೂಡ ಹೀಗೇ ಇದೆ. ಅವರನ್ನು ದರ್ಗಾಗಳಲ್ಲಿ ಬಿಟ್ಟುಕೊಳ್ಳುವುದಿಲ್ಲ. ಮಹಿಳೆಯರು ಹಜ್‌ಗಾಗಿ ಮೆಕ್ಕಾಗೆ ಹೋಗಬಹುದಾದರೆ ದರ್ಗಾಗಳಿಗೆ ಹೋಗುವ ಅನುಮತಿ ಏಕಿಲ್ಲ ಎಂಬ ಪ್ರಶ್ನೆ ಸಹಜವಾಗೇ ಏಳುತ್ತದೆ. ಇಂಥ ಮಹಿಳೆಯರ ಹಕ್ಕುಗಳ ಮೇಲೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದು ಪ್ರತಿಯೊಬ್ಬ ಪ್ರಜ್ಞಾವಂತನ ಆದ್ಯ ಕರ್ತವ್ಯವಾಗಿದೆ.

ಶರಿಯತ್ ಮೂಲ ಮುಸ್ಲಿಮರ ಪವಿತ್ರ ಧರ್ಮಗ್ರಂಥವಾದ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿದೆ. (ಮುಹಮ್ಮದ್ ಪೈಗಂಬರರ ವಾಣಿ ಮತ್ತು ಬದುಕಿದ ಪರಿಯನ್ನು ಹದೀಸ್ ಒಳಗೊಂಡಿದೆ.) ಇಜ್ಮಾ ಮತ್ತು ಕಿಯಾಸ್‌ಗಳ ಮೂಲಕ ಶರಿಯತ್ ವಿಕಸನಗೊಂಡಿದೆ. ಪೈಗಂಬರರ ಸಂಗಾತಿಗಳು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಇಜ್ಮಾ ಎನ್ನುತ್ತಾರೆ. ಮುಸ್ಲಿಂ ನ್ಯಾಯಪಂಡಿತರು ಮತ್ತು ಮುಸ್ಲಿಂ ಸರ್ವಸದಸ್ಯರ ಸಭೆಯ ಒಟ್ಟು ಅಭಿಪ್ರಾಯದ ಮೂಲಕವೂ 'ಇಜ್ಮಾ' ರೂಪಿಸಲಾಗುವುದು. ಕಿಯಾಸ್ ಎಂದರೆ ಔಚಿತ್ಯಪ್ರಜ್ಞೆಯಿಂದ ಮೂಲಗ್ರಂಥದ ಮೂಲಕ ಕಾನೂನನ್ನು ಬೆಳೆಸುವುದು.

ಕುರ್‌ಆನ್ ಮತ್ತು ಹದೀಸ್‌ಗಳ ಮೂಲಕ ಸಮಸ್ಯೆಗಳಿಗೆ ಯಾವುದೇ ಬೆಳಕು ಕಾಣದಿದ್ದರೆ ಏನು ಮಾಡಬೇಕೆಂದು ಕೇಳಿದ್ದಕ್ಕೆ 'ಆಗ ತರ್ಕದ ಮೂಲಕ ನನ್ನ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ' ಎಂದು ಪೈಗಂಬರರು ಹೇಳಿದ್ದರು. ಹೀಗೆ ಮೂಲ ಗ್ರಂಥದ ಆಧಾರದ ಮೇಲೆ ತರ್ಕದ ಮೂಲಕ ಕಾಲದ ಸಮಸ್ಯೆಗಳನ್ನು ಬಗೆಹರಿಸುವ ಕ್ರಿಯೆಗೆ 'ಇಜ್ತಿಹಾದ್' ಎನ್ನುತ್ತಾರೆ.

1983ನೇ ಜುಲೈ 13ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮುಸ್ಲಿಂ ಧರ್ಮಶಾಸ್ತ್ರದ ಸಮ್ಮೇಳನದಲ್ಲಿ ಸೌದಿ ಅರೇಬಿಯಾದ ರಾಜ ಫಾಹ್ದ್ ಅವರು ಮುಸ್ಲಿಂ ಕಾನೂನಿನ ಸುಧಾರಣೆಗಾಗಿ 'ಅಂತರರಾಷ್ಟ್ರೀಯ ಮುಸ್ಲಿಂ ಧರ್ಮಶಾಸ್ತ್ರಜ್ಞರ ಮಂಡಳಿ'ಯನ್ನು ಸ್ಥಾಪಿಸಲು ಕರೆನೀಡಿದರು.

ಕಾಲದ ಅವಶ್ಯಕತೆಗೆ ತಕ್ಕಂತೆ ಭೌತಿಕ ಅಗತ್ಯಗಳ ವಿಚಾರದಲ್ಲಿ ಇಜ್ತಿಹಾದ್ ಮೂಲಕ ಹೊಸ ನಿಯಮಗಳನ್ನು ಸೇರಿಸಿಕೊಳ್ಳಲು ಪ್ರವಾದಿ ಮುಹಮ್ಮದರು ಸೂಚನೆ

...ದಿವಾಸಿಗಳ ಅರಣ್ಯ ಹಕ್ಕುಗಳ ಮೇಲೆ ಮೋದಿ ಸರ್ಕಾರದ ಬುಲ್ಡೋಜರ್

...ಡಿ ಸರ್ಕಾರದ ಕಾರುಬಾರಿನಲ್ಲಿ ಬಡವರು, ... ರೈತರು, ಆದಿವಾಸಿಗಳು, ಮಹಿಳೆಯರು ಮತ್ತು ...ಸ್ವಾತಂತ್ರ್ಯ ನಿರ್ಲಕ್ಷಿತ ಜನ ಸಮುದಾಯಗಳ ...ಲ್ಲಿ ಕೇಳುವವರೇ ಇಲ್ಲವಂತಾಗಿದೆ. ಉದಾಹರಣೆಗೆ ... ಬೆಳವಣಿಗೆಯೊಂದರಲ್ಲಿ ಛತ್ತೀಸ್‌ಗಡ ರಾಜ್ಯದ ...ಸರ್ಕಾರ ಆದಿವಾಸಿಗಳನ್ನು ಅವರ ಸಾಂಪ್ರದಾಯಿಕ ...ಯಿಂದ ಒಕ್ಕಲೆಬ್ಬಿಸಿ ಅಲ್ಲಿ ಕಾರ್ಪೋರೇಟ್ ...ಕೆಗೆ ಮುಕ್ತ ಅವಕಾಶ ಒದಗಿಸುವ ಪ್ರಕ್ರಿಯೆಗೆ ... ನೀಡಿದೆ. ಮುಖ್ಯವಾಹಿನಿಯ ಕಾರ್ಪೋರೇಟ್ ...ಗಳ ನಿರ್ಲಕ್ಷ್ಯದಿಂದಾಗಿ ಇದು ರಾಷ್ಟ್ರಮಟ್ಟದ ...ಗಲಿಲ್ಲ. ಇಂತಹ ನಿರ್ಲಕ್ಷ್ಯಕ್ಕೆ ಕಾರಣವೇನೆಂದು ...ವ ಆಗುತ್ತಿಲ್ಲ ಏಕೆಂದರೆ 2014ರ ಚುನಾವಣೆಗಳಲ್ಲಿ ... ಸಾಧಿಸಿದ ಅಭೂತಪೂರ್ವ ಗೆಲುವಿಗೆ ...ರೇಟುಗಳ ಅಪರಿಮಿತ ಬೆಂಬಲವೆ ಮುಖ್ಯ ...ನ್ನುವುದು ತೆರೆದ ರಹಸ್ಯ. ಈ ಋಣವನ್ನು ...ಪ್ರದಕ್ಕೋಸ್ಕರವೆ ಮೊದಲಿಗೆ ಹಳೆಯ ಭೂಸ್ವಾಧೀನ ...ಗೆ ತಿದ್ದುಪಡಿ ತಂದು ಕಾರ್ಪೋರೇಟುಗಳಿಗೆ ರೈತರ ...ಯನ್ನು ಕಬಳಿಸಲು ಅನುವು ಮಾಡಿಕೊಡುವ ... ಪ್ರಯತ್ನವೊಂದು ನಡೆಯಿತು. ಆದರೆ ಇದಕ್ಕೆ ... ವಿವಿಧ ಭಾಗಗಳಿಂದ, ವಿವಿಧ ...ರ್ಗಗಳಿಂದ ಭಾರಿ ಪ್ರತಿರೋಧ ...ಂದು ಮೋದಿ ಸರ್ಕಾರ ಕನಸಿನಲ್ಲೂ ...ಲಿಲ್ಲ. ಈಗ ಏನಾಗಿದೆಯೆಂದರೆ ... ನುಂಗಲು ಹಾತೊರೆಯುತ್ತಿದ್ದ ...ರ್ಪೋರೇಟು ದಿಗ್ಗಜಗಳು ಸಹನೆ ...ಂಡಿವೆ. ಪರಿಣಾಮವಾಗಿ ಮೋದಿ ...ರ ಕಣ್ಣು ಇದೀಗ ವಿಪುಲ ಭೂಗರ್ಭ ...ಲ್ಲಿ ಹೊಂದಿರುವ ಛತ್ತೀಸ್‌ಗಡ ರಾಜ್ಯದ ... ಜಮೀನುಗಳ ಮೇಲೆ ಬಿದ್ದಿದೆ. ...ಗಿನ ಚುನಾವಣಾ ಪ್ರಚಾರ ...ವೊಂದರಲ್ಲಿ ಮೋದಿ, ತನ್ನ ಸರ್ಕಾರಕ್ಕೆ ...ಬಗ್ಗೆ ಅಪಾರ ಕಾಳಜಿಯಿದೆ ಎಂದು ...ಹೇಳಿದುತ್ತಿದ್ದಂತೆ ಅತ್ತ ಛತ್ತೀಸ್‌ಗಡದ ಬಿಜೆಪಿ ಸರ್ಕಾರ ...ಜಾ ಜಿಲ್ಲೆಯ ಘಾಟ್‌ಬಾರಾ ಗ್ರಾಮದಲ್ಲಿ ...ಗಿರುವ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲು ...ದೆ! ಜೊತೆಗೆ ಆದಿವಾಸಿಗಳಿಗೆ ಆಗುತ್ತಿರುವ ...ಗಳ ವಿರುದ್ಧ ದನಿಯೆತ್ತಿ ಹೋರಾಟ ಮಾಡುತ್ತಿರುವ ...ರು, ಲಾಯರುಗಳು ಮತ್ತು ಮಾನವಹಕ್ಕು ...ಕರ್ತರಿಗೆ ಪರೋಕ್ಷ ಬೆದರಿಕೆ ಒಡ್ಡುವ ಮೂಲಕ ... ರಾಜ್ಯ ಬಿಟ್ಟುಹೋಗುವಂತೆ ಮಾಡಲಾಗುತ್ತಿದೆ. ...ದೇಶದ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಮೋದಿಯ ...ಂಗಿನ ಚುನಾವಣಾಪೂರ್ವದ ಭರವಸೆಗಳಲ್ಲಿ ...ದರೂ ಈಡೇರಿಲ್ಲ; ಆರ್ಥಿಕ ಸ್ಥಿತಿ ಬಿಗಡಾಯಿಸಿದೆ; ...ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಇನ್ನೊಂದೆಡೆ ...ರೇಟುಗಳಿಗೆ ದೇಶದ ಸಂಪತ್ತನ್ನು ಲೂಟಿ ...ಯಲು ಮುಕ್ತ ಅವಕಾಶ. ಇಂಥಾ ಸನ್ನಿವೇಶದಲ್ಲಿ ...ಮಂದಿರ, ಗೋವಧೆ ನಿಷೇಧ, ...ಪ್ರೇಮ-ದೇಶದ್ರೋಹದಂತಹ ಭಾವನಾತ್ಮಕ ...ಗಳು ಭಟ್ಟಂಗಿ ಮಾಧ್ಯಮಗಳ ಮೂಲಕ ಬಿಸಿಬಿಸಿ ಚರ್ಚೆಯ ವಸ್ತುವಾಗಿರುವುದು ಕಾಕತಾಳೀಯವೇನಲ್ಲ. ಅದರ ನೈಜ ಉದ್ದೇಶ ಜನರ ಗಮನವನ್ನು ಬೇರೆಡೆ ಸೆಳೆಯುವುದೇ ಆಗಿದೆ. ವಾಸ್ತವದಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಲಯಗಳ ಕೇಸರೀಕರಣವನ್ನೂ ಒಳಗೊಂಡಂತೆ ಇವೆಲ್ಲವೂ ಫ್ಯಾಸಿಸಂನ ಒಳಪ್ರವೇಶದ ಲಕ್ಷಣಗಳು. ಅದು ಸಮಾಜದ ಮೇಲೆ ತನ್ನ ಹಿಡಿತವನ್ನು ಬಲಪಡಿಸುತ್ತಿರುವುದರ ಚಿಹ್ನೆಗಳು. ದೇಶ ಸರ್ವಾಧಿಕಾರದತ್ತ ಸಾಗುತ್ತಿರುವುದರ ಸೂಚನೆಗಳು.

ಘಾಟ್‌ಬಾರಾ ಗ್ರಾಮ ಹಸದೇವ ಅರಂದ್ ಅರಣ್ಯದಲ್ಲಿದೆ. 2011ರ ಅರಣ್ಯ ಸಮೀಕ್ಷೆ ಪ್ರಕಾರ ಮಧ್ಯ ಭಾರತದ ಅನಧಿಕೃತ ವಲಯದಲ್ಲಿರುವ ಅತಿದೊಡ್ಡ ಕಾಡು ಇದಾಗಿದೆ. ಬುಡಕಟ್ಟುಗಳ ಬಗ್ಗೆ ಇನಿತೂ ಕಾಳಜಿಯಿಲ್ಲದ ಸರ್ಕಾರ ಇಂದು ಅವರನ್ನು ಕಿತ್ತೊಗೆಯುವುದರೊಂದಿಗೆ ಇಂತಹ ಅಪರೂಪದ ಕಾಡನ್ನು ನಾಶ ಮಾಡಲು ಹೊರಟಿದೆ. ಕಾರಣ? ಆ ನೆಲದಡಿ ಇರುವ ಪಾರ್ಸಾ ಈಸ್ಟ್ ಮತ್ತು ಕೆತೆ ಬೆಸನ್ ಎಂಬ ಕಲ್ಲಿದ್ದಲು ನಿಕ್ಷೇಪವನ್ನು ರಾಜಸ್ಥಾನ ವಿದ್ಯುತ್ ಉತ್ಪಾದನಾ ನಿಗಮಕ್ಕೆ ನೀಡಲಾಗಿದ್ದು ನಿಗಮದ ಗುತ್ತಿಗೆದಾರನಾದ ಅದಾನಿ ಮಿನರಲ್ಸ್ ಲಿಮಿಟೆಡ್ ಅಲ್ಲಿ



ಗಣಿಗಾರಿಕೆ ಶುರುಮಾಡಲು ಚಡಪಡಿಸುತ್ತಿದೆ. ಅಂತೆಯೆ ಛತ್ತೀಸ್‌ಗಡ ಸರ್ಕಾರ ಇದೇ ಜನವರಿ 8ರಂದು ಒಂದು ಆದೇಶ ಹೊರಡಿಸಿ ಘಾಟ್‌ಬಾರಾದ ಬುಡಕಟ್ಟು ಸಮುದಾಯಕ್ಕೆ ಅರಣ್ಯ ಹಕ್ಕುಗಳ ಕಾಯ್ದೆಯಡಿ ಸಿಕ್ಕಿದ್ದ ಭೂಮಿ ಹಕ್ಕುಗಳನ್ನು ರದ್ದುಗೊಳಿಸಿದೆ.


ಈ ರೀತಿಯಾಗಿ ಅರಣ್ಯ ಹಕ್ಕುಗಳ ಕಾಯ್ದೆಯಡಿ ವಿತರಣೆಯಾದ ಹಕ್ಕುಗಳನ್ನು ವಾಪಾಸು ಪಡೆದಿರುವುದು ದೇಶದಲ್ಲೆ ಪ್ರಥಮ ಬಾರಿಗೆ. ಸಮುದಾಯ ಅಥವಾ ವ್ಯಕ್ತಿಗಳಿಗೆ ಒಮ್ಮೆ ವಿತರಣೆಯಾದ ಭೂಹಕ್ಕುಗಳನ್ನು ಮರಳಿ ಪಡೆಯಲು ಸಾಧ್ಯವಿಲ್ಲವೆಂದು ಅರಣ್ಯ ಹಕ್ಕುಗಳ ಕಾಯ್ದೆ ಸ್ಪಷ್ಟವಾಗಿ ಹೇಳುತ್ತದೆ. ಅರಣ್ಯ ಹಕ್ಕುಗಳ ಕಾಯ್ದೆಯಡಿ ತಾವು ಸಾಂಪ್ರದಾಯಿಕವಾಗಿ ಅನುಭೋಗಿಸುತ್ತಿರುವ ಅರಣ್ಯ ಭೂಮಿಯ ಮೇಲಿನ ಸಾಮುದಾಯಿಕ ಮತ್ತು ವೈಯಕ್ತಿಕ ಹಕ್ಕು ತಮ್ಮದೆಂದು ಹೇಳಿಕೊಳ್ಳುವ ಅಧಿಕಾರ ಆದಿವಾಸಿಗಳಿಗೆ ಇದೆ. ಘಾಟ್‌ಬಾರಾ ಗ್ರಾಮಸಭೆಯೂ ಹೀಗೆ ಘೋಷಿಸಿಕೊಂಡ ನಂತರವೆ ರಾಜ್ಯ ಸರ್ಕಾರ 2013ರ ಸೆಪ್ಟಂಬರ್ 3ರಂದು ಆ ಭೂಮಿಯನ್ನು ಅವರಿಗೆ ಹಸ್ತಾಂತರಿಸಿದೆ. ಈ ಹಿಂದೆ ಸರ್ವೋಚ್ಚ ನ್ಯಾಯಾಲಯದ ಕೃಪೆಯಿಂದಾಗಿ ಗಣಿಗಾರಿಕೆ ರದ್ದುಗೊಂಡಿದ್ದರೂ ತಮ್ಮ ಭೂಮಿಯ ಮೇಲೆ ಸರ್ಕಾರದ ಹದ್ದಿನ ಕಣ್ಣು ಮತ್ತೆ ಬೀಳಬಹುದು ಎಂಬುದರ ಅರಿವು ಘಾಟ್‌ಬಾರಾ ಗ್ರಾಮಸಭೆಗೆ ಇತ್ತು. ಆದುದರಿಂದಲೆ 2014ರ ಅಕ್ಟೋಬರ್‌ನಲ್ಲಿ ಘಾಟ್‌ಬಾರಾ ಮತ್ತು ಇತರ 19 ಗ್ರಾಮಗಳ ಜನ ಒಟ್ಟಾಗಿ ತಮ್ಮ ಜಮೀನುಗಳಲ್ಲಿ ಗಣಿಗಾರಿಕೆ ವಿರೋಧಿಸುವ ಒಂದು ಠರಾವನ್ನು ಅಂಗೀಕರಿಸಿದ್ದರು.

ಒಂದು ಪಕ್ಷ ಸರ್ಕಾರಕ್ಕೆ ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳಿಗೆ ಬಳಸಬೇಕೆಂದಿದ್ದರೆ ಅದು ಮೊದಲು ಗ್ರಾಮಸಭೆ ಮತ್ತು ಬುಡಕಟ್ಟು ಸಮುದಾಯಗಳ ಪೂರ್ವಾನುಮತಿ ಪಡೆದುಕೊಳ್ಳಬೇಕಾಗುತ್ತದೆ. ಅರಣ್ಯ ಹಕ್ಕುಗಳ ಕಾಯ್ದೆಯಡಿ ಆದಿವಾಸಿಗಳ ಸಾಂಪ್ರದಾಯಿಕ ಭೂಹಕ್ಕುಗಳ ಭವಿಷ್ಯವನ್ನು ನಿರ್ಧರಿಸುವ ಅಧಿಕಾರ ಇರುವುದು ಗ್ರಾಮಸಭೆಗೆ ಮಾತ್ರ. ಅಡವಿಗಳಲ್ಲಿ ವಾಸಿಸುತ್ತಿರುವ ಬುಡಕಟ್ಟುಗಳು ಮತ್ತಿತರ ಜನರನ್ನು ಒಕ್ಕಲೆಬ್ಬಿಸುವ ಮುನ್ನ ಸರ್ಕಾರ ಅವರೆಲ್ಲರ ಹಕ್ಕು ಮತ್ತು ಬೇಡಿಕೆಗಳನ್ನು ಪರಸ್ಪರ ಸಮ್ಮತಿಯಿಂದ ಬಗೆಹರಿಸಬೇಕು ಎನ್ನುತ್ತದೆ ಕಾಯ್ದೆಯ ಸೆಕ್ಷನ್ 4(5) ಮತ್ತು ಇನ್ನಿತರ ನಿಯಮಗಳು. ಆದರೆ 2012ರಲ್ಲಿ ಅಂದಿನ ಯುಪಿಎ ಸರ್ಕಾರ ಇದ್ಯಾವುದಕ್ಕೂ ಕ್ಯಾರೆ ಅನ್ನದೆ ಭೂಮಿಯನ್ನು ಗಣಿಗಾರಿಕೆಗೆ ತೆರವು ಮಾಡುವ ಆದೇಶ ನೀಡಿತ್ತು. ಪರಿಸರ ಸಚಿವಾಲಯದಲ್ಲಿ ಇದಕ್ಕೆ ಸಂಬಂಧಿಸಿದಂತೆ ಎರಡು ಬಗೆಯ ಆದೇಶಗಳಿರುವುದನ್ನು ಗಮನಿಸಬಹುದು. ಒಂದರಲ್ಲಿ ಆದಿವಾಸಿಗಳು ಮತ್ತು ಇತರ ಜನರ ಹಕ್ಕುಗಳ ವಿಷಯವನ್ನು ಬಗೆಹರಿಸಿದ ನಂತರವೆ ಭೂಮಿಯನ್ನು ಇತರ ಉದ್ದೇಶಗಳಿಗೆ ಬಳಸಲಾಗುವುದು ಎಂದಿದೆ. ಆದರೆ ಎರಡನೆ ಹಂತದಲ್ಲಿ ಹಕ್ಕುಗಳ ವಿಷಯ ಇತ್ಯರ್ಥವಾಗಿದೆಯೆ ಎಂದು ಪರಿಶೀಲಿಸುವ ಗೋಜಿಗೆ ಹೋಗದೆ ಭೂಮಿಯನ್ನು ಸೀದಾ ಗಣಿಗಾರಿಕೆಗೆ ಬಿಟ್ಟುಕೊಡಲಾಗಿದೆ.

ಈಗ ಮೋದಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಘಾಟ್‌ಬಾರಾ ಬುಡಕಟ್ಟುಗಳ ಸಾಮುದಾಯಿಕ ಅರಣ್ಯ ಹಕ್ಕುಗಳನ್ನು ಪೂರ್ತಿ ರದ್ದುಪಡಿಸಿದೆ. ಛತ್ತೀಸ್‌ಗಡ ರಾಜ್ಯ ಸರ್ಕಾರದ ಜನವರಿ 8ರ ಆದೇಶದಲ್ಲಿ "ಪಾರ್ಸಾ ಈಸ್ಟ್ ಮತ್ತು ಕೆತೆ ಬೆಸನ್ ಕಲ್ಲಿದ್ದಲು ಬ್ಲಾಕುಗಳಿಗಾಗಿ ಅರಣ್ಯಭೂಮಿಯನ್ನು ನೀಡಲು ಹೊರಟ ಸಂದರ್ಭದಲ್ಲಿ ಗ್ರಾಮಸ್ಥರು ಕಲೆಕ್ಟರ್ ಕೊಟ್ಟಿರುವ ಭೂಮಿ ಹಕ್ಕುಗಳ ನೆಪವೊಡ್ಡಿ ಗಣಿಗಾರಿಕೆಯ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದಾರೆ, ಪ್ರತಿಭಟನೆ ನಡೆಸುತ್ತಿದ್ದಾರೆ" ಎಂದು ಬರೆಯಲಾಗಿದೆ. ಇದರ ತನಿಖೆ ನಡೆಸಿದ ಸರ್ಗುಜಾ ಅರಣ್ಯ ಸಂರಕ್ಷಣಾಧಿಕಾರಿ 'ಆದಿವಾಸಿಗಳಿಗೆ ಭೂಮಿ ಹಕ್ಕುಗಳನ್ನು ನೀಡಿರುವುದು 2013ರಲ್ಲಿ; ಆದರೆ ರಾಜಸ್ಥಾನ ವಿದ್ಯುತ್ ನಿಗಮಕ್ಕೆ 2012ರಲ್ಲೆ ಅರಣ್ಯ ತೆರವಿಗೆ ಅನುಮತಿ ನೀಡಲಾಗಿದೆ. ಆದುದರಿಂದ ಆದಿವಾಸಿಗಳ ಅರಣ್ಯ ಹಕ್ಕುಗಳನ್ನು ರದ್ದುಪಡಿಸಬಹುದು' ಎಂದು ಟಿಪ್ಪಣಿ ಬರೆಯುತ್ತಾರೆ. ಅರಣ್ಯ ಸಂರಕ್ಷಣಾಧಿಕಾರಿಯ ವರದಿಯನ್ನು ಆಧರಿಸಿ ಜಿಲ್ಲಾಡಳಿತ ಆದಿವಾಸಿಗಳ ಹಕ್ಕುಗಳನ್ನು ರದ್ದುಗೊಳಿಸುವ ಆದೇಶ ಹೊರಡಿಸುತ್ತದೆ. ಸದರಿ ಆದೇಶದಲ್ಲಿ 'ಆದಿವಾಸಿಗಳಿಗೆ 2013ರಲ್ಲಿ ನೀಡಲಾದ ಅರಣ್ಯ ಹಕ್ಕುಗಳು ಊರ್ಜಿತವಲ್ಲ; ಏಕೆಂದರೆ 2012ರಲ್ಲಿ ಭೂಮಿಯನ್ನು ರಾಜಸ್ಥಾನ ವಿದ್ಯುತ್ ನಿಗಮಕ್ಕೆ ನೀಡಲಾಗಿರುವುದರಿಂದ 2013ರಲ್ಲಿ ಅದು ಅರಣ್ಯ ಭೂಮಿ ಆಗಿರಲಿಲ್ಲ' ಎಂಬ ವಾದವನ್ನು ಮುಂದಿಡುತ್ತದೆ.

ಆದರೆ ಈ ಅರಣ್ಯ ತೆರವಿನ ಅನುಮತಿಯನ್ನು ರಾಷ್ಟ್ರೀಯ ಹಸಿರು ನ್ಯಾಯಾಲಯ 2014ರಷ್ಟು ಹಿಂದೆಯೆ ರದ್ದುಗೊಳಿಸಿದೆ. ಪರಿಸರ ಇಲಾಖೆ ಕಲ್ಲಿದ್ದಲು ಗಣಿಗಾರಿಕೆಯಿಂದ ಆನೆ ಮತ್ತಿತರ ಸಂರಕ್ಷಿತ ಪ್ರಾಣಿವರ್ಗಗಳು ಮತ್ತು ಅನ್ಯ ಜೀವಪ್ರಭೇದಗಳ ಮೇಲಾಗುವ ಪರಿಣಾಮಗಳ ಅಧ್ಯಯನ ನಡೆಸಿಲ್ಲವೆಂದು ಹೇಳಿದ ನ್ಯಾಯಾಲಯ ಇಡೀ ಪ್ರಕರಣವನ್ನು ಪುನರ್‌ಪರಿಶೀಲಿಸುವಂತೆ ಆದೇಶಿಸಿದೆ. ಇದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕಾಮಗಾರಿ ನಡೆಸುವುದರ ವಿರುದ್ಧ ನೀಡಲಾಗಿದ್ದ ತಡೆಯಾಜ್ಞೆ ತೆರವುಗೊಂಡಿದೆಯಾದರೂ ಪುನರ್‌ಪರಿಶೀಲನೆ ವಿರುದ್ಧ ಯಾವುದೇ ತಡೆಯಾಜ್ಞೆ ನೀಡದಿರುವುದು ಗಮನಾರ್ಹ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಪರಿಸರ ಇಲಾಖೆಯ ಆದೇಶದ ನಂತರವೆ ಗಣಿಗಾರಿಕೆಯನ್ನು ಆರಂಭಿಸಬಹುದಾಗಿದೆ. ಆದರೆ ಕಳೆದ ವರ್ಷ ಹಸದೇವ ಅರಂದ್ ಅರಣ್ಯದ ಮೂಲಕ ಹಾದುಹೋಗಲಿರುವ ಕಲ್ಲಿದ್ದಲು ಸಾಗಾಟದ ರೈಲು ಮಾರ್ಗಕ್ಕೆ ಸದ್ದಿಲ್ಲದೆ ಅನುಮತಿ ನೀಡಿರುವ ಪರಿಸರ ಇಲಾಖೆ ಪುನರ್‌ಪರಿಶೀಲನೆಯ ಬಗ್ಗೆ ಮೌನ ತಾಳಿರುವುದು ಏನನ್ನು ಸೂಚಿಸುತ್ತದೆ?

(ಆಧಾರ: Business Standard ನಲ್ಲಿ ನಿತಿನ್ ಸೇಠಿ; ಮತ್ತು Facebook ನಲ್ಲಿ ಕಾಂಚಿ ಕೊಹ್ಲಿ, ಅಲೋಕ್ ಶುಕ್ಲಾ ಇವರ ಲೇಖನಗಳು)




...ದ್ದಾರೆ ಎಂದು ತಿಳಿಸಿದರು. ಆ ಸಮ್ಮೇಳನದಲ್ಲಿ ...ಹಿಸಿದ್ದ ವಿವಿಧ ದೇಶಗಳ ಧರ್ಮಪಂಡಿತರು, ...ವಿಗಳು ಮತ್ತು ವಕೀಲರು ಮುಸ್ಲಿಂ ಕಾನೂನಿನಲ್ಲಿ ...ಣೆಯಾಗಬೇಕೆಂದು ಒತ್ತಾಯಿಸಿದ್ದಾರೆ. ...ಸಾಮಾಜಿಕ, ಆರ್ಥಿಕ ಬದಲಾವಣೆಗಳ ...ಯಲ್ಲಿ ಈ ಸುಧಾರಣೆ ಅವಶ್ಯವಾಗಿದೆ ... ಹೇಳಿದ್ದಾರೆ.

ಮಾನವೀಯತೆ

...ಮಾನವೀಯತೆಗಿಂತ ಯಾವುದೂ ...ಲ್ಲ, ನನ್ನ ಬಾಲ್ಯದ ಘಟನೆಯೊಂದು ...ಯುತ್ತಿದೆ. ಪೈಗಂಬರರ ಜನ್ಮದಿನವಾದ ...ಮಿಲಾದ್ ದಿನದಂದು ವಿಜಾಪುರದ ... ಮುಸ್ಲಿಮರು ಭೇದಭಾವವಿಲ್ಲದೆ ... ಮಹಲ್‌ಗೆ ಹೋಗುತ್ತಾರೆ. ಅದು ...ಗಳುಳ್ಳ ಇಮಾರತು ಮತ್ತು ಅನೇಕ ...ಣಿಗಳಿಂದ ಕೂಡಿದ ಆಕರ್ಷಣೀಯ ...ದೆ. ಎಲ್ಲಕ್ಕಿಂತ ಹೆಚ್ಚಾಗಿ ಅಲ್ಲಿ ಹಜರತ್ ...(ಪೈಗಂಬರರ ಗಡ್ಡದ ಕೂದಲು) ಇರುವುದರಿಂದ ...ಹಳ ಪವಿತ್ರ ಸ್ಥಳವಾಗಿದೆ. ...ಕಾಲದಲ್ಲಿ ಆ ಪುಷ್ಕರಣಿಗಳು ತುಂಬಿಕೊಂಡಿ...ವು. ಜನರು ಈದ್ ಮಿಲಾದ್ ದಿನದಂದು ಸಂಜೆ ...ಣ್ಣದ ಕಾಗದದ ಪುಟ್ಟ ಪುಟ್ಟ ಹಡಗುಗಳಲ್ಲಿ ಹಣತೆ ... ಪುಷ್ಕರಣಿಗಳಲ್ಲಿ ಬಿಡುತ್ತಿದ್ದರು. ಜನರು ...ರಿಂದ ತೂರದ ಅಂಥ ನೂರಾರು ಕಲಾತ್ಮಕ ಕಾಗದದ ...ಗಳು ಬೆಳಗುವ ಹಣತೆ ಹೊತ್ತು ಪುಷ್ಕರಣಿಗಳಲ್ಲಿ ...ಹುದಾಗ ನಕ್ಷತ್ರಗಳೆಲ್ಲ ಭೂಮಿಗಿಳಿದು ಬಂದಂತೆ ...ಗುತ್ತಿತ್ತು.

ಒಂದು ಸಲ ಈದ್ ಮಿಲಾದ್ ಸಂದರ್ಭದಲ್ಲಿ ಕುಂಭದ್ರೋಣ ಮಳೆ ಬೀಳತೊಡಗಿತು. ಪುರುಷರೆಲ್ಲ ಆಸಾರ ಮಹಲಿನೊಳಗೆ ಹೋದರು. ನಾವು ಬಾಲಕರು ರಭಸದಿಂದ



ಹೋಗಲು ಸಾಧ್ಯವಾಗದಿದ್ದರಿಂದ ಹೆಣ್ಣುಮಕ್ಕಳ ಜೊತೆ ಉಳಿದುಕೊಂಡೆವು. ಇಮಾರತದ ಮುಖ್ಯ ಬಾಗಿಲ ಬಳಿ ಮಹಿಳೆಯರು ಜಮಾಯಿಸಿದರು. ಒಳಗೆ ಪುರುಷರು ಬೆಚ್ಚಗೆ. ಹೊರಗೆ ಸಹಸ್ರಾರು ಮಹಿಳೆಯರು ಮಕ್ಕಳೊಂದಿಗೆ ತೊಯ್ದು ಗುಬ್ಬಿಗಳಂತೆ ನಿಂತಿದ್ದಾರೆ.

ಇಪ್ಪತ್ತು ಅಡಿ ಎತ್ತರದ ಆ ಮುಚ್ಚಿದ ಪುರಾತನ ಬಾಗಿಲ ಬಳಿ ನಿರಕ್ಷರಿ ದ್ವಾರಪಾಲಕ ನಿಂತಿದ್ದ. ಸಂಪ್ರದಾಯವನ್ನು ಒಪ್ಪಿಕೊಂಡಿದ್ದ ಹೆಣ್ಣುಮಕ್ಕಳು ಬಾಗಿಲು ತೆಗೆಯಲು ಒತ್ತಾಯಿಸಲಿಲ್ಲ, ಆದರೆ ಅವರು ತೊಯ್ಯುತ್ತಿರುವುದನ್ನು ಆ ದ್ವಾರಪಾಲಕನಿಗೆ ನೋಡಲಿಕ್ಕಾಗಲಿಲ್ಲ. ಅದಾದ ಧೈರ್ಯ ಬಂದಿತೊ ಗೊತ್ತಿಲ್ಲ. ಆತ ಒಮ್ಮೆಲೆ ಆ ಬೃಹತ್ ಬಾಗಿಲನ್ನು ತೆಗೆದು ಎಲ್ಲ ಮಹಿಳೆಯರಿಗೆ ಆಶ್ರಯ ದೊರೆಯುವಂತೆ ಮಾಡಿದ! ಅದೊಂದು ಐತಿಹಾಸಿಕ ಕ್ಷಣವಾಗಿ ನನ್ನ ಮನದಲ್ಲಿ ಉಳಿದಿದೆ. ಅಂಥ ಘಟನೆ ಹಿಂದೆ ನಡೆದಿರಲಿಕ್ಕಿಲ್ಲ. ಆ ದ್ವಾರಪಾಲಕನ ಅಂತಃಕರಣ ಸಾಮಾಜೀಕರಣಗೊಂಡರೆ ಮುಂದೆ ಕೂಡ ಘಟಿಸಬಹುದೆಂಬ ವಿಶ್ವಾಸವಿದೆ.

ಸ್ವಚ್ಛತೆಯ ವಿಚಾರ

"ಋತುಸ್ರಾವದ ಕುರಿತು ಅವರು ನಿಮ್ಮನ್ನು ಕೇಳುತ್ತಾರೆ. ಹೇಳಿರಿ ಅದೊಂದು ಮಾಲಿನ್ಯಾವಸ್ಥೆ. ಋತುಸ್ರಾವದ ಅವಸ್ಥೆಯಲ್ಲಿ ಸ್ತ್ರೀಯರಿಂದ ದೂರವಿರಿ (ಸಂಸರ್ಗ ನಡೆಸಬೇಡಿರಿ). ಅವರು ಶುದ್ಧರಾಗುವವರೆಗೆ ಅವರನ್ನು ಸಮೀಪಿಸಬೇಡಿರಿ. ಅವರು ಶುದ್ಧವಾದ ಬಳಿಕ ನಿಮಗೆ ಅಲ್ಲಾಹನು ವಿಧಿಸಿದ ಪ್ರಕಾರ ಅವರ ಬಳಿ ಹೋಗಿರಿ. ನಿಶ್ಚಯವಾಗಿಯೂ ಪಾಪಗಳಿಂದ ಪಶ್ಚಾತ್ತಾಪ ಪಡುವವರನ್ನೂ ಶುದ್ಧಾಚಾರವಿರುವವರನ್ನೂ ಅಲ್ಲಾಹ್ ಇಷ್ಟಪಡುತ್ತಾನೆ" ಎಂದು ಕುರ್‌ಆನಿನ ಎರಡನೇ ಅಧ್ಯಾಯ (ಸೂರಾ)ದ 222ನೇ ಸೂಕ್ತ (ಆಯತ್)ದಲ್ಲಿ ಹೇಳಲಾಗಿದೆ.


ಸ್ವಚ್ಛತೆಯ ವಿಚಾರ ಕುರಿತು ಕುರ್‌ಆನ್‌ನಲ್ಲಿ ಹೇಳಲಾಗಿದೆ ಹೊರತಾಗಿ ಮಹಿಳೆಯರು ಮಸೀದಿಗಳಿಗೆ ಮತ್ತು ದರ್ಗಾಗಳಿಗೆ ಹೋಗಬಾರದು ಎಂಬ ವಿಚಾರವಿಲ್ಲ.

ಶುಭಸೂಚನೆ

ಮುಂಬೈ, ಸಮುದ್ರದೊಳಗಿನ ಹಾಜಿ ಅಲಿ ದರ್ಗಾಕ್ಕೆ ಮುಸ್ಲಿಂ ಮಹಿಳೆಯರು ಪ್ರವೇಶ ಬಯಸಿ ಧ್ವನಿ ಎತ್ತುತ್ತಿರುವುದು ಶುಭ ಸೂಚನೆ. ದೇಹದೊಳಗೆ ಮಲಮೂತ್ರ ತುಂಬಿಕೊಂಡು ಪವಿತ್ರ ಸ್ಥಳಗಳಿಗೆ ಹೋಗುವ ಪುರುಷರು ಮಹಿಳೆಯರನ್ನು ಏಕೆ ತಡೆಯುತ್ತಾರೆ? ಪುರುಷ ಪ್ರಾಧಾನ್ಯ ವ್ಯವಸ್ಥೆಗೆ ಕೊನೆ ಇಲ್ಲವೆ? ಅನೇಕ ಮಹಿಳೆಯರು ಕೂಡ ಸೂಫಿ ಸಂತರಾಗಿ ಹೋಗಿದ್ದಾರೆ ಎಂಬುದನ್ನು ಇವರು ಅರಿಯಬೇಕು. ಮುಸ್ಲಿಂ ಮಹಿಳೆಯರು ಮಸೀದಿ ಪ್ರವೇಶ ಮಾಡುವುದು ಮತ್ತು ದರ್ಗಾದೊಳಗೆ ಹೋಗುವುದು ಅವರ ಹಕ್ಕು ಎಂಬುದನ್ನು ಪುರುಷರು ತಿಳಿಯಲೇ ಬೇಕು.

ದೇಶದ ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರಾರ್ಥನೆ ಸಲ್ಲಿಸುವುದಕ್ಕೆ ಅನುಮತಿ ನೀಡಲು ಆದೇಶಿಸಬೇಕು ಎಂದು ಮುಂಬೈನಲ್ಲಿ ಮುಸ್ಲಿಂ ಮಹಿಳೆಯರ ಒಂದು ಗುಂಪು ಜನವರಿ 31ರಂದು ಅರ್ಜಿ ಸಲ್ಲಿಸಿದೆ. ಮೆಕ್ಕಾದಲ್ಲಿನ 'ಮಸ್ಜಿದ್ ಅಲ್ ಹರಂ'ನಲ್ಲೇ ಮುಸ್ಲಿಂ ಮಹಿಳೆಯರು ನಮಾಜ್ ಮಾಡುವಾಗ ಬೇರೆ ಮಸೀದಿಗಳಲ್ಲಿ ಏಕೆ ಸಾಧ್ಯ ಇಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಪುರುಷ ಪ್ರಾಧಾನ್ಯ ಮನಸ್ಥಿತಿಯಿಂದಾಗಿ ಈ ಭೇದಭಾವ ಮೂಡಿದೆ ಹೊರತಾಗಿ ಧರ್ಮದ ಕಾರಣದಿಂದ ಅಲ್ಲ ಎಂದು ಭಾರತೀಯ ಮುಸ್ಲಿಂ ಮಹಿಳಾ ಆಂದೋಲನದ ಸಹಸಂಸ್ಥಾಪಕಿ ಜಾಕಿಯಾ ತಿಳಿಸಿದ್ದಾರೆ. ಮಹಿಳೆಯರು ಮಸೀದಿಗೆ ಬಂದು ನಮಾಜ್ ಮಾಡಲು ಇಸ್ಲಾಂ ಧರ್ಮದಲ್ಲಿ ಅವಕಾಶವಿದೆ ಎಂದು ದೆಹಲಿಯ ಜಾಮಾ ಮಸೀದಿಯ ಶಾಹಿ ಇಮಾಮ್ ಮೌಲಾನಾ ಅಹಮದ್ ಬುಖಾರಿ ತಿಳಿಸಿದ್ದಾರೆ.



■ ರಂಜಾನ್ ದರ್ಗಾ

ಅಗಲಿದ ಹಿರಿಯ ಸಂಗಾತಿ ಕೃಷ್ಣಶಾಸ್ತ್ರಿಗಳ ನೆನಪಿನಲ್ಲಿ

ಫೆಬ್ರವರಿ ಏಳರಂದು ಹಿರಿಯ ಚಿಂತಕ, ಪ್ರಗತಿಪರ ಶಿಕ್ಷಕ, ಲೇಖಕ ಸಿ.ಎಚ್.ಕೃಷ್ಣ ಶಾಸ್ತ್ರಿ ಬಾಳಿಲ ಅವರು ಬದುಕಿಗೆ ವಿದಾಯ ಹೇಳಿ ಹೊರಟರು. ಓರ್ವ ಶಾಲಾ ಶಿಕ್ಷಕನಾಗಿ ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆ ಅನನ್ಯ. ಸಾವಿರಾರು ಮಂದಿ ವೈಚಾರಿಕ ಪ್ರಜ್ಞೆಯ ವಿದ್ಯಾರ್ಥಿಗಳನ್ನು ಸೃಷ್ಟಿಸಿದ ಶಾಸ್ತ್ರಿಗಳ ಬದುಕು, ಬರಹ, ಹೋರಾಟಗಳ ಮೇಲೆ ಪಕ್ಷಿನೋಟ ಬೀರುವ ಒಂದು ಪ್ರಯತ್ನ ಇಲ್ಲಿದೆ


ಕರಾವಳಿ ಕರ್ನಾಟಕದ ಸಾಕ್ಷಿಪ್ರಜ್ಞೆಯಂತಿದ್ದ ವೈಚಾರಿಕ ಗುರು ಸಿ.ಎಚ್.ಕೃಷ್ಣಶಾಸ್ತ್ರಿ ಬಾಳಿಲ ಮೊನ್ನೆ ಏಕಾಏಕಿ ಬದುಕಿಗೆ ವಿದಾಯ ಹೇಳಿ ಎದ್ದುಹೋದರು. ಸಾಯುವುದಕ್ಕಿಂದ ಎಂಟು ದಿನಗಳ ಹಿಂದೆ ತನ್ನ ಸುತ್ತಮುತ್ತಲ ಆಗುಹೋಗುಗಳಿಗೆ ಪ್ರತಿಕ್ರಿಯಿಸಲಾಗದಂತಹ ಸ್ಥಿತಿಗೆ ತಲುಪಿದ್ದರು. ಸಮಾಜದಲ್ಲಿನ ಆಗುಹೋಗುಗಳನ್ನು ಸದಾ ಎಚ್ಚರದ ಕಣ್ಣಿನಿಂದ ನೋಡುತ್ತಾ ಪ್ರತಿಕ್ರಿಯಿಸುತ್ತಿದ್ದ ಶಾಸ್ತ್ರಿಗಳಂತಹ ಪ್ರಖರ ವೈಚಾರಿಕ ಚಿಂತಕರಿಗೆ ಪ್ರತಿಕ್ರಿಯಿಸಲು ಸಾಧ್ಯವಾಗದಿರುವುದಕ್ಕಿಂತ ದೊಡ್ಡ ಹಿಂಸೆ ಬೇರೊಂದಿರಲಾರದು.

ಬದುಕಿನುದ್ದಕ್ಕೂ ಜೀವವಿರೋಧಿಗಳ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವವರ, ಕೋಮುವಾದಿ ಶಕ್ತಿಗಳ ವಿರುದ್ಧ ನಿರಂತರ ಪ್ರತಿರೋಧದ ಬರಹ-ಭಾಷಣಗಳನ್ನು ಮಾಡುತ್ತಾ ಬಂದಿದ್ದ ಶಾಸ್ತ್ರಿಗಳಿಗೆ ಶಿಕ್ಷಣ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದ ಬಗ್ಗೆ ಹೆಚ್ಚಿನ ಒಲವಿತ್ತು. ಅವುಗಳು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ನಲುಗುವುದನ್ನು ಸಹಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ತನ್ನ ಪ್ರಖರ ವೈಚಾರಿಕ ಬರಹಗಳ ಮೂಲಕ ಅವರು ನಿರಂತರವಾಗಿ ತನ್ನ ಪ್ರತಿರೋಧಗಳನ್ನು ದಾಖಲಿಸುತ್ತಿದ್ದರು.

ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯದ ಬ್ರಾಹ್ಮಣೀಕರಣದ ವಿರುದ್ಧ ಶಾಸ್ತ್ರಿಗಳು ಬರೆದಷ್ಟು ಯಾವ ಕನ್ನಡಿಗನೂ ಬರೆದಿರಲಿಕ್ಕಿಲ್ಲ. ಪ್ರಸಿದ್ಧ ಚಕ್ರಕೋಡಿ ಪುರೋಹಿತರ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು ಪುರೋಹಿತಶಾಹಿತ್ವ ಮತ್ತು ವೈದಿಕೀಕರಣದ ವಿರುದ್ಧದ ತನ್ನ ಅಕ್ಷರ ಸಮರವನ್ನು ಜೀವಂತವಾಗಿಟ್ಟಿದ್ದರು. ಮೆದುಳಿಗೆ ತೂತು ಕೊರೆದು ತುಂಬಿಸಿದರೂ ಸಾಹಿತ್ಯದ 'ಅ' ಕಾರವನ್ನೂ ಅರಿಯದ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಾಹಿತ್ಯ ಸಮ್ಮೇಳನಗಳನ್ನು ದೇವಸ್ಥಾನಗಳ ಬ್ರಹ್ಮಕಲಶದ ಮಟ್ಟಕ್ಕೆ ಇಳಿಸಿದುದರ ಬಗ್ಗೆ ಅವರಿಗೆ ಅತೀವ ಸಿಟ್ಟಿತ್ತು. ಇದರ ವಿರುದ್ಧ ಶಾಸ್ತ್ರಿಗಳು ನಿರಂತರವಾಗಿ ಬರೆದರು ಮಾತ್ರವಲ್ಲ ನಮ್ಮಂತಹ ಯುವಬರಹಗಾರರು ಬಂಡೇಳುವಂತೆ ಪ್ರಚೋದಿಸುತ್ತಿದ್ದರು. ನನ್ನನ್ನೂ ಒಳಗೊಂಡಂತೆ ಕರಾವಳಿಯ ಅನೇಕ ಲೇಖಕರಿಂದ ಸಾಹಿತ್ಯ ಸಮ್ಮೇಳನದ ವೈದಿಕೀಕರಣದ ವಿರುದ್ಧ ಲೇಖನ ಬರೆಸಿದ್ದರು. ದೇವಸ್ಥಾನಗಳಲ್ಲಿ ಸಾಹಿತ್ಯ ಸಮ್ಮೇಳನ ಏರ್ಪಡಿಸುವುದರ ಅಪಾಯದ ಬಗ್ಗೆ ಅವರೆಷ್ಟೇ ಬರೆದರೂ ದಕ್ಷಿಣ ಕನ್ನಡದ "ಬುದ್ಧಿವಂತರಿ"ಗೆ ಅವರ ಆಶಯ ಅರ್ಥವಾಗದೇ ಇದ್ದುದು ವಿಷಾದನೀಯ. "ಕನ್ನಡ ಭುವನೇಶ್ವರಿ" ಎಂದು ಕನ್ನಡ ಸಾಹಿತ್ಯಕ್ಕೆ ಒಂದು ಧರ್ಮದ ಲೇಬಲ್ ಅಂಟಿಸುವುದನ್ನೂ ಅವರು ವಿರೋಧಿಸುತ್ತಿದ್ದರು.

ಕರ್ಮಠ ಹವ್ಯಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿಯೂ ಅವರು ಹವ್ಯಕರಲ್ಲೇ ಹಲವಾರು ವಿಚಾರವಾದಿಗಳನ್ನು ಸೃಷ್ಟಿಸುವಲ್ಲಿ ಯಶಸ್ಸು ಕಂಡದ್ದು ಅವರ ವೈಚಾರಿಕತೆಯ ಪ್ರಖರತೆಗೆ ಸಾಕ್ಷಿ. ಒಮ್ಮೆ ಅವರ ಮನೆಗೆ ನಾನು ಭೇಟಿ ನೀಡಿದಾಗ ಅವರು ಕೇವಲ ಲುಂಗಿ ತೊಟ್ಟುಕೊಂಡಿದ್ದರು. ಅವರ ಮೈಮೇಲೆ ಜನಿವಾರ ಇಲ್ಲದ್ದನ್ನು ಕಂಡು ನನಗೇನೂ ಆಶ್ಚರ್ಯವಾಗಲಿಲ್ಲ ಆದರೂ ಸುಮ್ಮನೆ ಅವರನ್ನು ಈ ವಿಚಾರದಲ್ಲಿ ಮಾತಿಗೆಳೆದೆ. ಅವರು ಹೀಗಂದರು: "ನೀವು ನನ್ನ ಮೈಮೇಲೆ ಜನಿವಾರ ಕಾಣದ್ದಕ್ಕೆ ಇಂತಹ ಪ್ರಶ್ನೆಗಳನ್ನು ಎತ್ತುತ್ತಿದ್ದೀರಿ ಎಂದು ನನಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಜನಿವಾರ ಧರಿಸಿದ ಮಾತ್ರಕ್ಕೆ ಒಬ್ಬ ಮನುಷ್ಯ ಗೊಡ್ಡು ಬ್ರಾಹ್ಮಣ ಎಂಬ ಅಂತಿಮ ತೀರ್ಮಾನಕ್ಕೆ ಬರಬೇಡಿ. ಅಂತೆಯೇ ಜನಿವಾರ ಕಳಚಿ ಎಸೆದ ಮಾತ್ರಕ್ಕೆ ಒಬ್ಬನನ್ನು ಮಹಾನ್ ಪ್ರಗತಿಪರ ಎಂದು ಬರೆಯುವುದೂ ಬೇಡ. ಹಾಗೆ ನೋಡಹೋದರೆ ಸಾವರ್ಕರ್‌ಗೆ ಯಾವುದೇ ಧಾರ್ಮಿಕ ವಿಶ್ವಾಸವಿರಲಿಲ್ಲ ಆತ ಏನಾಗಿದ್ದ....? ಗಾಂಧೀಜಿಗೆ ಎಲ್ಲಾ ವಿಧದ ಧಾರ್ಮಿಕ ವಿಶ್ವಾಸಗಳಿತ್ತು. ಅವರು ಏನಾಗಿದ್ದರು......? ನಾನು ಮನಸಾಕ್ಷಿಗೆ ಅನುಗುಣವಾಗಿ ಜನಿವಾರವನ್ನು ಕಳಚಿ ಎಸೆದಿರುವೆ. ಜನಿವಾರ ಯಾಕೋ ನನಗೆ ಉಚ್ಚತೆಯ ಪ್ರತೀಕ, ಮೇಲುಕೀಳಿನ ಸಂಕೇತ ಎಂದು ಕಿರಿಕಿರಿ ಉಂಟುಮಾಡುತ್ತಿತ್ತು. ಜನಿವಾರವನ್ನು ಕಳಚಿದಂದಿನಿಂದ ನನಗೆ ನನ್ನನ್ನು ಕಾಡುತ್ತಿದ್ದ ಅಪರಾಧಿ ಭಾವದಿಂದ ಮುಕ್ತಿ ದೊರೆಯಿತು."

ಶಾಸ್ತ್ರಿಗಳಲ್ಲಿದ್ದ ಒಂದು ಬಹಳ ವಿಶೇಷವಾದ ಗುಣವೇನೆಂದರೆ ಮಾತನಾಡುತ್ತಿರುವವ ಎಷ್ಟೇ ಕಿರಿಯನಾದರೂ ಆತನ ಮಾತುಗಳನ್ನು ಪೂರ್ಣವಾಗಿ ಆಲಿಸುತ್ತಿದ್ದರು. ಮುಂದಿರುವವನ ಮಾತುಗಳು ಮುಗಿಯದೇ ಅವರು ಅವಸರದ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. "ಎನಗಿಂತ ಕಿರಿಯನಿಲ್ಲ" ಎಂಬ ಮೇರುಭಾವದ ಶಾಸ್ತ್ರಿಗಳು, ಸಮಾಜದ ಕಟ್ಟ ಕಡೆಯ ಮನುಷ್ಯನಿಂದಲೂ ನಾವು ಕಲಿಯುವುದು ಬಹಳಷ್ಟಿದೆ ಎನ್ನುತ್ತಿದ್ದರು. "ನಮ್ಮಂತಹ ವಿದ್ಯಾವಂತರುಗಳಿಗಿರುವುದು ಗ್ರಂಥಗಳ ಜ್ಞಾನಗಳಾದರೆ



ತೋಟ ಹಮಾಲಿಗಳಂತವರಿಗೆ ಇರುವುದು ಬದುಕೆಂಬ ಘೋರ ವಿಶ್ವವಿದ್ಯಾನಿಲಯಗಳಿಂದ ಪಡೆದ ಜ್ಞಾನ" ಎನ್ನುತ್ತಿದ್ದರು. ಶಾಸ್ತ್ರಿಗಳು ಯಾವುದೇ ಸಂದರ್ಭದಲ್ಲೂ ತಾನು ನಂಬಿದ ತತ್ವಗಳೊಂದಿಗೆ ರಾಜಿ ಮಾಡಿಕೊಂಡವರಲ್ಲ. ಅತ್ಯಂತ ಸಹನಶೀಲ ಸ್ವಭಾವದವರಾಗಿದ್ದ ಶಾಸ್ತ್ರಿಗಳು ತಾನು ಬರೆಯುವ ಬರಹ ಮತ್ತು ತನ್ನ ಮಾತುಗಳಿಂದ ಯಾರಿಗಾದರೂ ನೋವಾಗಬಹುದೆಂದು ಯಾರಿಗೂ ಯಾವುದೇ ಕಾರಣಕ್ಕೂ ಮುಲಾಜು ತೋರಿಸಿದವರಲ್ಲ. ಅವರು ಅವರ ಆತ್ಮೀಯರ ಪಾಲಿನ ಅತ್ಯುತ್ತಮ ವಿಮರ್ಶಕರೂ ಆಗಿದ್ದರು. ಅವರಿಗೆ ಪತ್ರಿಕೆಯಲ್ಲಿ ಓದಿದ ಯಾವುದಾದರೊಂದು ಲೇಖನ, ಬರಹ, ಕತೆ ಇಷ್ಟವಾದರೆ ತಾನೊಬ್ಬನೇ ಓದಿ ಸುಮ್ಮನಾಗುತ್ತಿರಲಿಲ್ಲ. ತನ್ನ ಸ್ನೇಹಿತರ ಬೃಹತ್ ವೃಂದಕ್ಕೆ ದೂರವಾಣಿ ಕರೆಮಾಡಿ ಓದುವಂತೆ ಸೂಚಿಸುತ್ತಿದ್ದರು.

ಕಿತ್ತಳೆ ಹಣ್ಣು ಮಾರಿ ಶಾಲೆಕಟ್ಟಿದ ಅನಕ್ಷರಸ್ಥ ಅಕ್ಷರ ಸಂತ ಹರೇಕಳ ಹಾಜಬ್ಬರೆಂದರೆ ಶಾಸ್ತ್ರಿಗಳಿಗೆ ವಿಪರೀತ ಅಕ್ಕರೆ. ಹರೇಕಳ ಹಾಜಬ್ಬರ ಬದುಕು ಮತ್ತು ಹೋರಾಟ ಕುರಿತಂತೆ ನಾನು ಬರೆದ ಕೃತಿಯನ್ನು ನನಗಿಂತ ಹೆಚ್ಚು ಪ್ರಚಾರ ಮಾಡಿದವರು ಶಾಸ್ತ್ರಿಗಳು. ಅವರು ಸ್ವತಃ ದುಡ್ಡು ಕೊಟ್ಟು ಖರೀದಿಸಿ ಅನೇಕ ಪ್ರತಿಗಳನ್ನು ತನ್ನ ಆಪ್ತೇಷ್ಟರಿಗೆ ಕಳುಹಿಸಿದ್ದರು. ಅದರ ಇಂಗ್ಲಿಷ್ ಆವೃತ್ತಿ ಹೊರತರುವಂತೆ ಅವರು ನನ್ನ ಮೇಲೆ ಒತ್ತಡ ಹೇರಿದ್ದಲ್ಲದೇ ಅದಕ್ಕೆ ಅರ್ಥಪೂರ್ಣ ಬೆನ್ನುಡಿ ಬರೆದು ಕೊಟ್ಟಿದ್ದರು. ಅವರು ಯಾವುದೇ ಶಾಲೆಗಳ ಕಾರ್ಯಕ್ರಮಗಳಿಗೆ ಹೋಗುವಾಗೆಲ್ಲಾ ಅದರ ಪ್ರತಿಯೊಂದನ್ನು ಕೊಂಡುಹೋಗಿ ಗ್ರಂಥಾಲಯಗಳಿಗೆ ನೀಡಲು ಮರೆಯುತ್ತಿರಲಿಲ್ಲ. ಅವರ ಆಪ್ತೇಷ್ಟರು ಕೆಲಸ ಮಾಡುವ ಶಾಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಬರುವ ಅತಿಥಿಗಳಿಗೆ ಆ ಕೃತಿಯನ್ನು ನೆನಪಿನ ಕಾಣಿಕೆಯಾಗಿ ನೀಡಲು ಅವರು ಸಲಹೆ ನೀಡುತ್ತಿದ್ದರು.

ಶಾಸ್ತ್ರಿಗಳು ಕೋಮಾಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಮಲಗಿದ್ದಾಗ ನಾನು ಮತ್ತು ನನ್ನ ಸ್ನೇಹಿತೆ ವಿದ್ಯಾ ಕಾರ್ಕಳ ಅವರನ್ನು ನೋಡಲು ಹೋಗಿದ್ದೆವು. ವಿದ್ಯಾ ಅವರ ಹೆಂಡತಿಯನ್ನು ಮಾತನಾಡಿಸುವ ಸಲುವಾಗಿ ಆಸ್ಪತ್ರೆಯಿಂದ ಶಾಸ್ತ್ರಿಗಳ ಮನೆಗೆ ತೆರಳಿದ್ದರು. ಆಗ ಶಾಸ್ತ್ರಿಗಳ ಬರೆಯುವ ಮೇಜಿನ ಮೇಲೆ ಹಾಜಬ್ಬರ ಕುರಿತ ಕೃತಿಯ ಐದು ಪ್ರತಿಗಳು ಇತ್ತಂತೆ ಇದನ್ನು ನೆನೆದಾಗೆಲ್ಲಾ ನನಗರಿವಿಲ್ಲದೇ ಕಣ್ಣುಗಳಲ್ಲಿ ಹನಿಗೂಡುತ್ತವೆ.

"ಅಪರೂಪ ಸಮಾಜ ಸೇವಕ: ಹರೇಕಳ ಹಾಜಬ್ಬ" ಕೃತಿಯ ಮೂರನೇ ಆವೃತ್ತಿ ಬಿಡುಗಡೆ ಸಮಾರಂಭದಲ್ಲಿ ಕೃತಿಯ ಕುರಿತು ಮಾತನಾಡಲು ಶಾಸ್ತ್ರಿಗಳನ್ನು ಆಹ್ವಾನಿಸಿದ್ದೆ. ಸುಮಾರು ಮೂವತ್ತು ನಿಮಿಷಗಳ ಕಾಲ ಅವರ ಕೃತಿಯ ಕುರಿತಂತೆ ಮತ್ತು ಹಾಜಬ್ಬರ ಕುರಿತಂತೆ ಮಾತನಾಡಿದ್ದರು. ಅವರ ಇಡೀ ಭಾಷಣದಲ್ಲಿ ಕೇವಲ ಒಮ್ಮೆ ಮಾತ್ರ ನನ್ನ ಹೆಸರೆತ್ತಿದ್ದರು. ಪ್ರಚಾರದ ತೆವಲಿದ್ದ ನನಗೆ ಸಹಜವಾಗಿಯೇ ನಿರಾಶೆಯಾಗಿತ್ತು. ಇದನ್ನು ಯಾಕೆ ಉಲ್ಲೇಖಿಸಿದ್ದೇನೆಂದರೆ ಅವರು ವಸ್ತುನಿಷ್ಠ ವಿಮರ್ಶಕರಾಗಿದ್ದರೇ ಹೊರತು ವ್ಯಕ್ತಿನಿಷ್ಠ ವಿಮರ್ಶಕರಾಗಿರಲಿಲ್ಲ. ಮುಖಸ್ತುತಿಯೆಂಬ ಪದ ಅವರಿಗೆ ತಿಳಿದೇ ಇರಲಿಲ್ಲ.

ಶಿಕ್ಷಣವನ್ನು ವ್ಯಾಪಾರದ ಸರಕಾಗಿಸಿದವರ ಮೇಲೆ ಶಾಸ್ತ್ರಿಗಳಿಗೆ ಅಸಾಧ್ಯ ಸಿಟ್ಟಿತ್ತು. ಆಟದ ಮೈದಾನಗಳಿಲ್ಲದ ಶಾಲೆಗಳನ್ನು ಅವರು ಶಾಲೆ ಎನ್ನುತ್ತಿರಲಿಲ್ಲ ಬದಲಾಗಿ ಅಂಗಡಿ ಎನ್ನುತ್ತಿದ್ದರು. ಶಿಕ್ಷಣ ಶಿಕ್ಷೆಯಾಗಬಾರದು ಎಂದು ವಾದಿಸುತ್ತಿದ್ದ ಶಾಸ್ತ್ರಿಗಳು ರ್‍ಯಾಂಕ್ ಪದ್ಧತಿಯ ಕಟುವಿರೋಧಿಯಾಗಿದ್ದರು. ಶಾಲೆಗಳಲ್ಲಿ ಮಕ್ಕಳ ಹುಟ್ಟುಹಬ್ಬ ಆಚರಿಸಿ ಸಿಹಿತಿಂಡಿ ನೀಡುವುದನ್ನು ಶಾಸ್ತ್ರಿಗಳು ಕಠಿಣವಾಗಿ ವಿರೋಧಿಸುತ್ತಿದ್ದರು. ಅವರು ಈ ಕುರಿತಂತೆ ಒಂದೆಡೆ ಹೀಗೆ ಬರೆದಿದ್ದರು: "ನೂರು ಕೋಟಿಗೂ ಮಿಕ್ಕಿದ ಜನಸಂಖ್ಯೆಯಿರುವ ಬಡ ಅನಕ್ಷರಸ್ಥರೇ ಹೆಚ್ಚಾಗಿರುವ ಈ ದೇಶದಲ್ಲಿ ಕೋಟ್ಯಾಂತರ ಮಕ್ಕಳಿಗೆ ತಮ್ಮ ಹುಟ್ಟಿದ ದಿನಾಂಕ ಬಿಡಿ, ವರ್ಷವೇ ಗೊತ್ತಿರುವುದಿಲ್ಲ. ಬಡತನದ ಬೇಗೆಯಿಂದಾಗಿ ಗೊತ್ತಿರಲು ಸಾಧ್ಯವೂ ಇಲ್ಲ. ಅದರ ಅವಶ್ಯಕತೆಯೂ ಅವರಿಗಿಲ್ಲ. ಆದ್ದರಿಂದ ಉಳ್ಳವರ ಮಕ್ಕಳಿಗಷ್ಟೇ ಸೀಮಿತಗೊಳ್ಳುವ ಈ ಬರ್ತ್‌ಡೇ ಆಚರಣೆ ಸದ್ಯದ ಸಾಮಾಜಿಕ ಸನ್ನಿವೇಶದಲ್ಲಿ ಎಷ್ಟು ಪ್ರಸ್ತುತ? ಬಡಮಕ್ಕಳ ದೃಷ್ಟಿಯಿಂದ ಇದೊಂದು ಕ್ರೂರ ವ್ಯಂಗ್ಯ ಅನಿಸುವುದಿಲ್ಲವೇ......?"

ಒಬ್ಬ ಶ್ರೇಷ್ಠ ಅಧ್ಯಾಪಕರಾಗಿದ್ದ ಶಾಸ್ತ್ರಿಗಳು ಸಹಜವಾಗಿಯೇ ಒಬ್ಬ ಉತ್ತಮ ಚೈಲ್ಡ್ ಸೈಕಾಲಜಿಸ್ಟ್ ಆಗಿದ್ದರು. "ವಿಶೇಷ ಪ್ರತಿಭೆಯ ಮಕ್ಕಳೆಂದೋ, ಕಂಪ್ಯೂಟರ್ ಶಿಶು ಎಂದೋ ಬಿಂಬಿಸಲಾಗುವ ಮಕ್ಕಳ ಮೇಲೆ ಬೀಳುವ ಒತ್ತಡದ ಕುರಿತಂತೆ ಇತ್ತೀಚೆಗಷ್ಟೇ 'ವಾರ್ತಾ ಭಾರತಿಯ' ಸುದ್ದಿ ಸಂಪಾದಕ ಬಿ.ಎಂ ಬಶೀರ್ ನನ್ನೊಂದಿಗೆ ಮಾತನಾಡಿದ್ದರು. ಈ ವಿಷಯದಲ್ಲಿ ಶಾಸ್ತ್ರಿಗಳ ಅಭಿಪ್ರಾಯ ಕೇಳೋಣವೆಂದು ಅವರಿಗೆ ಫೋನಾಯಿಸಿದ್ದೆ. "ಕೆಲವು ಮಕ್ಕಳಲ್ಲಿ ವಯಸ್ಸಿಗೆ ಮೀರಿದ ಪ್ರತಿಭೆ ಇರುವುದು ನಿಜವಾದರೂ ಆ ಮಕ್ಕಳನ್ನು ಯಾವುದೇ ಕಾರಣಕ್ಕೂ ಪ್ರದರ್ಶನಕ್ಕಿಡಬಾರದು" ಎಂದು ಅವರು ಖಡಾಖಂಡಿತವಾಗಿ ಹೇಳಿದ್ದರು. ಅದು ಮಕ್ಕಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಒಮ್ಮೆ ಅಂತಹ ಮಕ್ಕಳನ್ನು ಪ್ರದರ್ಶನಕ್ಕಿಟ್ಟರೆ ಆ ಮಕ್ಕಳ ಮೇಲೆ ಸದಾ ಅಸಾಧ್ಯ ಒತ್ತಡ ಬೀಳುತ್ತದೆ. ಅಂತಹ ಮಕ್ಕಳಲ್ಲಿ ತಾನು ಯಾವಾಗಲೂ ವಿಶೇಷವಾದುದನ್ನೇ ಮಾಡಬೇಕೆಂಬ ಮಾನಸಿಕ ಒತ್ತಡ ಸಹಜವಾಗಿಯೇ ಇರುತ್ತದೆ. ಅಂತಹ ಒತ್ತಡ ಅವರನ್ನು ಬಹಳಷ್ಟು ಕುಗ್ಗಿಸುತ್ತದೆ. ಅವರ ಆತ್ಮವಿಶ್ವಾಸವನ್ನು ಕೆಡಿಸುತ್ತದೆ. ಕೆಲವೊಮ್ಮೆ ಅಂತಹ ಮಕ್ಕಳಲ್ಲಿ ಮಾನಸಿಕ ಖಿನ್ನತೆಯಂತಹ ಕಾಯಿಲೆಗಳೂ ಕಾಣಿಸಬಹುದು. ಮಕ್ಕಳನ್ನು ಸಹಜವಾಗಿ ಬೆಳೆಯಲು ಬಿಡಿ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆ ಸಾಂದರ್ಭಿಕವಾಗಿ ತಾನಾಗಿಯೇ ಹೊರಬರುತ್ತಿರುತ್ತದೆ. ನಮ್ಮ ಒತ್ತಡ ಮುಂದೆ ಅವರ ಬೌದ್ಧಿಕ ಬೆಳವಣಿಗೆಗೆ ಅಡ್ಡಿಯಾಗಲೂಬಹುದು ಎಂಬುದು ಶಾಸ್ತ್ರಿಗಳ ವಾದ. ಪರೀಕ್ಷೆಯ ಮುಂಚಿನ ದಿನವೇ ಆಗಿರಲಿ ಸಂಜೆಯ ಹೊತ್ತು ಮಕ್ಕಳನ್ನು ಮನೆಯೊಳಗೆ ಕೂಡಿಹಾಕಿ ಪಾಠವನ್ನು ಓದಿಸಬಾರದು, ಹೋಂ ಟ್ಯೂಶನ್ ನೀಡಬಾರದು ಎನ್ನುತ್ತಿದ್ದ ಶಾಸ್ತ್ರಿಗಳು ಮಕ್ಕಳ ಮನಸ್ಸು ಪ್ರಫುಲ್ಲವಾಗಿರಬೇಕಾದರೆ ಸಂಜೆ ಹೊತ್ತು ಮಕ್ಕಳು ಹೊರಾಂಗಣದ ಆಟವಾಡಬೇಕು ಎಂದು ವಾದಿಸುತ್ತಿದ್ದರು.

ಮಾತೃಭಾಷಾ ಶಿಕ್ಷಣದ ಪ್ರಬಲ ಪ್ರತಿಪಾದಕರಾಗಿದ್ದ ಶಾಸ್ತ್ರಿಗಳು ಐದನೇ ತರಗತಿಯಿಂದ ಮಕ್ಕಳಿಗೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಬೇಕು ಎನ್ನುತ್ತಿದ್ದರು. ಅಸಮಾನ ಶಾಲೆಗಳ ಕಡುವಿರೋಧಿಯಾಗಿದ್ದ ಅವರು ಇಂಗ್ಲಿಷ್ ಭಾಷೆಯನ್ನು ಕಲಿಸುವಾಗ ಪ್ರಾಕ್ಟಿಕಲ್ ಮೆಥಡ್‌ಗಳನ್ನು ಬಳಸಬೇಕು. ಎಳೆವಯಸ್ಸಲ್ಲಿಯೇ ವ್ಯಾಕರಣಬದ್ಧವಾಗಿ ಮತ್ತು ಉಚ್ಚಾರ ದೋಷವಿಲ್ಲದೇ ಮಾತನಾಡುವುದನ್ನು ಯಾವುದೇ ಭಾಷೆಯಲ್ಲಾದರೂ ಕಲಿಸಬೇಕು ಎನ್ನುತ್ತಿದ್ದರು.

ಓರ್ವ ಒಳ್ಳೆಯ ಶಿಕ್ಷಕನಿಗಿರಬೇಕಾದ ಮೂಲಭೂತ ಗುಣಗಳಲ್ಲಿ ಅತ್ಯಂತ ಪ್ರಧಾನವಾದುದು ಸಮಯಪ್ರಜ್ಞೆ. ಶಾಸ್ತ್ರಿಗಳನ್ನು ಯಾವುದೇ ಕಾರ್ಯಕ್ರಮಕ್ಕೆ ಆಹ್ವಾನಿಸಿದರೆ ನಿಗದಿತ ಸಮಯಕ್ಕಿಂತ ತುಸು ಮುಂಚಿತವಾಗಿಯೇ ತಲುಪುತ್ತಿದ್ದರು. ಕಾರ್ಯಕ್ರಮಗಳು ನಿಗದಿತ ಸಮಯಕ್ಕೆ ಪ್ರಾರಂಭವಾಗದಿದ್ದರೆ ಅವರು ಸಿಟ್ಟಿಗೇಳುತ್ತಿದ್ದರು. ಅತಿಥಿಯೊಬ್ಬನಿಗೆ ಕಾಯುವುದು ಎಂದರೆ ಆಯೋಜಕರು ಆತನ ಗುಲಾಮರಾಗುವುದಕ್ಕೆ ಸಮ. ಶಾಲೆಗಳ ಕಾರ್ಯಕ್ರಮಗಳಿಗೆ ರಾಜಕಾರಣಿಗಳನ್ನು ಅತಿಥಿಯಾಗಿ ಕರೆಯುವುದಕ್ಕೆ ಅವರ ವಿರೋಧವಿತ್ತು. ರಾಜಕಾರಣಿಗ[...] ತಡವಾಗಿ ಬಂದು ಬೇಗನೇ ತೆರಳುವುದು ಶಾಸ್ತ್ರಿಗ[...] ಕಂಡರಾಗುತ್ತಿರಲಿಲ್ಲ. ಒಂದು ವೇಳೆ ಆ ಬಳಿಕ ಶಾಸ್ತ್ರಿ[...] ಭಾಷಣವಿದ್ದರೆ ಅವರು ಅದನ್ನು ಟೀಕಿಸದೇ ಬಿಡುತ್ತಿರ[...] ಸಮಯಪ್ರಜ್ಞೆಯೇ ಇಲ್ಲದ ರಾಜಕಾರಣಿಗಳ ವರ್ತನೆಯ[...] ಪುಟಾಣಿ ಮಕ್ಕಳೂ ಅದನ್ನು ಕಲಿಯಬಹುದು ಎ[...] ಆತಂಕ ಶಾಸ್ತ್ರಿಗಳಿಗಿತ್ತು.

ಶಾಲೆಗಳಲ್ಲಿ ನಿರ್ದಿಷ್ಟ ಧರ್ಮದ ಧಾರ್ಮಿ[...] ಕಾರ್ಯಕ್ರಮಗಳ ಬದ್ಧ ವಿರೋಧಿಯಾಗಿದ್ದ ಶಾಸ್ತ್ರಿಗ[...] ಶಾಲೆಗಿಂತ ಮಿಗಿಲಾದ ದೇಗುಲ ಇನ್ನೊಂದಿಲ್ಲ ಎನ್ನುತ್ತಿದ್ದ[...] ಅಂತೆಯೇ ಶಾಲೆಗಳಲ್ಲಿ ಕಲಿಸುವ ಮೌಲ್ಯಯುತ ಶಿಕ್ಷ[...] ಸಹಬಾಳ್ವೆ, ಸಾಮರಸ್ಯಕ್ಕಿಂತ ಮಿಗಿಲಾದ ಪೂಜೆ ಪುರಸ್ಕಾರ[...] ಇನ್ನೊಂದಿಲ್ಲ ಎನ್ನುತ್ತಿದ್ದರು. ಕರ್ನಾಟಕ ಕೋಮು ಸೌಹಾರ್ದ[...] ವೇದಿಕೆಯ 'ಪಠ್ಯಪುಸ್ತಕಗಳ ಕೇಸರೀಕರಣ ವಿರೋ[...] ಹೋರಾಟ ಸಮಿತಿ'ಯಲ್ಲಿ ಶಾಸ್ತ್ರಿಗಳು ಕ್ರಿಯಾಶೀಲರಾ[...] ಕೆಲಸ ಮಾಡುತ್ತಿದ್ದರು. ಪಠ್ಯಪುಸ್ತಕಗಳಲ್ಲಿನ ಕೋಮು ಭಾವ[...] ಕೆರಳಿಸುವ ಪಠ್ಯಗಳ ರದ್ಧತಿಗೆ ಅವರು ಸಂಬಂಧಪಟ್ಟವರ[...] ಆಗಾಗ ಪತ್ರ ಬರೆಯುತ್ತಿದ್ದರು. ಸಮಾಜ ವಿಜ್ಞಾ[...] ಪಠ್ಯಪುಸ್ತಕಗಳ ಕೆಲವೊಂದು ಪಾಠಗಳು ಮಕ್ಕಳ ಮೆದುಳ[...] ಕೆಡಿಸಬಹುದೆಂದು ಅವರು ಬಹಳ ಚಿಂತಿತರಾಗಿದ್ದರು.

ಒಮ್ಮೆ ರಾಜ್ಯ ಸರಕಾರವು ಶಾಸ್ತ್ರಿಗಳನ್ನು ಪಠ್ಯಪುಸ್ತ[...] ರಚನಾ ಸಮಿತಿಗೆ ನೇಮಕ ಮಾಡಿತ್ತು. ಆಗ ಅದ[...] ಪ್ರಾಥಮಿಕ ಅರ್ಜಿ ನಮೂನೆಯಲ್ಲಿದ್ದ ಜಾತಿ ಮತ್ತು ಧರ್ಮ[...] ಹೆಸರಿನ ಕಾಲಂ ಭರ್ತಿ ಮಾಡಬೇಕು ಎನ್ನು[...] ನಿರ್ದೇಶನವಿತ್ತು. ಅವರು ಆ ಕಾಲಂ ಅನ್ನು ಭರ್ತಿ ಮಾಡಲು[...] ನಿರಾಕರಿಸಿದ್ದರಿಂದ ಅವರಿಗೆ ಒದಗಿದ ಅವಕಾಶ ಕೈತಪ್ಪಿತು[...] ತಾನು ನಂಬಿದ ಸೆಕ್ಯುಲರ್ ಮೌಲ್ಯಗಳೊಂದಿಗೆ ಅವರ[...] ಯಾವತ್ತೂ ರಾಜಿಮಾಡಿಕೊಂಡವರಲ್ಲ.

ಓರ್ವ ಅತ್ಯುತ್ತಮ ಕಾರ್ಯಕ್ರಮ ನಿರೂಪಕರಾಗಿ[...] ಶಾಸ್ತ್ರಿಗಳು ನಿರೂಪಕರ ಅತಿಮಾತುಗಾರಿಕೆಯನ್ನು[...] ವಿರೋಧಿಸುತ್ತಿದ್ದರು. ನಿರೂಪಕನಿಗೆ ಮೊಟ್ಟ ಮೊದಲ[...] ಇರಬೇಕಾದ ಪ್ರಜ್ಞೆ ತಾನು ಭಾಷಣಕಾರನಲ್ಲ ಎನ್ನುವುದು[...] ನಿರೂಪಕ ತನ್ನ ಕೆಲಸದ ಪರಿಧಿಯ ಹೊರಗ[...] ಹೋಗುವುದನ್ನು ಶಾಸ್ತ್ರಿಗಳು ವಿರೋಧಿಸುತ್ತಿದ್ದರು. ಭಾಷಣ[...] ಮಾಡುವಾತ ಎಷ್ಟೇ ಪ್ರಭಾವಿಯಾದರೂ ಆತನಿಗೆ ನೀಡಿದ[...] ಸಮಯ ಮೀರದಂತೆ ನೋಡಿಕೊಳ್ಳುವುದು ಒಳ್ಳೆಯ[...] ನಿರೂಪಕನ ಲಕ್ಷಣ. ನಿರೂಪಕ ಭಾಷಣಕಾರನ ಮಾತಿನ[...] ಸಾರಾಂಶವನ್ನು ಹೇಳುವುದು ಕೇಳುಗರ ಸಾಮರ್ಥ್ಯವನ್ನು[...] ಕೀಳಂದಾಜಿಸುವುದಕ್ಕೆ ಸಮ ಎನ್ನುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಕೋಮು ಸೌಹಾರ್ದ[...] ವೇದಿಕೆಯ ಚಳವಳಿಗಳೊಂದಿಗೂ ಅವರು ತಮ್ಮನ್ನು[...] ಗುರುತಿಸಿಕೊಂಡಿದ್ದರು. 2015 ರ ಜನವರಿ 30 ರಂದು (ಗಾಂಧಿ ಹುತಾತ್ಮರಾದ ದಿನ) ವೇದಿಕೆ ಹಮ್ಮಿಕೊಂಡಿದ್ದ ಸಹಬಾಳ್ವೆ ಸಾಗರ ಕಾರ್ಯಕ್ರಮಕ್ಕೆ ಒಂದು ಉತ್ತಮ ಧ್ಯೇಯಗೀತೆಯನ್ನೂ ಬರೆದುಕೊಟ್ಟಿದ್ದರು. ಅಂದು ಅವರು ವೇದಿಕೆಯು ಹೊರಡಿಸಿದ್ದ ಸೌಹಾರ್ದ ರಥವನ್ನು ಉದ್ಘಾಟಿ[...]ದ್ದಲ್ಲದೇ ತನ್ನ ಇಳಿವಯಸ್ಸು ಮತ್ತು ಅನಾರೋಗ್ಯವನ್ನು ಲೆಕ್ಕಿಸದೇ ಮಂಗಳೂರು ನಗರದ ವಿವಿಧೆಡೆಗೆ ನಮ್ಮ[...] ರಥದೊಂದಿಗೆ ಆಗಮಿಸಿ ಯುವ ಕಾರ್ಯಕರ್ತರನ್ನೇ[...] ನಾಚಿಸುವ ರೀತಿಯಲ್ಲಿ ಘೋಷಣೆಗಳನ್ನು ಕೂಗಿ ನಮ್ಮನ್ನು[...] ಹುರಿದುಂಬಿಸಿದ್ದರು.

ಜನವರಿ 30 ರಂದು ಮಂಗಳೂರಿನಲ್ಲಿ ನಡೆದ[...] ಕೋಮು ಸೌಹಾರ್ದ ವೇದಿಕೆಯ ಸಹಬಾಳ್ವೆಯ ಸಾಗ[...] ಸಮಾವೇಶದಲ್ಲಿ ಭಾಗವಹಿಸಿ ಅಲ್ಲಿ ಸೇರಿದ್ದ ಜನಸ್ತೋಮವನ್ನು[...] ಕಂಡು ಶಾಸ್ತ್ರಿಗಳು ಬಹಳ ಉಲ್ಲಸಿತರಾಗಿದ್ದರು. ದಿನವಿಡೀ[...] ಸಭಾಂಗಣದ ಮೊದಲ ಸಾಲಿನಲ್ಲಿ ಆಸೀನರಾಗಿ[...] ಸಹಜವಾಗಿಯೇ ನಮ್ಮಿಂದ ಏನಾದರೂ ಪ್ರಮಾದಗಳು[...] ಸಂಭವಿಸಿದಾಗೆಲ್ಲಾ ನನ್ನನ್ನು ಕರೆದು ಎಚ್ಚರಿಸುತ್ತಿದ್ದರು. ಅವರು[...] ಅಂದು ನನ್ನಲ್ಲಿ ಹೇಳಿದ ಮಾತುಗಳು ಈಗಲೂ ನನ್ನ[...] ಕಿವಿಯಲ್ಲಿ ಹುಂಯ್‌ಗುಡುತ್ತಿದೆ: "ನಾವೆಲ್ಲಾ ಅಷ್ಟೊಂದು[...] ನಿರಾಶರಾಗಬೇಕಿಲ್ಲ. ಸೆಕ್ಯುಲರ್ ಸಮಾಜದ ನಿರ್ಮಾಣ[...] ಕನಸುವವರು ನಮ್ಮಂತೆಯೇ ಬಹಳಷ್ಟು ಮಂದಿಯಿದ್ದಾರೆ[...] ಎನ್ನುವುದಕ್ಕೆ ಇಲ್ಲಿ ಸೇರಿದ ಜನಸ್ತೋಮವೇ ಸಾಕ್ಷಿ. ನಾವೀ[...] ತುರ್ತಾಗಿ ಮಾಡಬೇಕಾಗಿರುವುದು ಅಲ್ಲಲ್ಲಿ ವಿವಿಧ[...] ಗುಂಪುಗಳಲ್ಲಿ ಚದುರಿಹೋಗಿರುವ ಸೆಕ್ಯುಲರ್ ಮನಸ್ಸುಗಳನ್ನು[...] ಒಂದೇ ಸೂರಿನಡಿಗೆ ತರಬೇಕಾಗಿರುವುದು. ಒಳ್ಳೆಯ ದಿನಗಳು[...] ಬಂದೇ ಬರುತ್ತೆ."

ಅಗಲಿದ ಹಿರಿಯ ಚೇತನ ಶಾಸ್ತ್ರಿಗಳ ಆಶಾವಾ[...] ಸುಳ್ಳಾಗದಿರಲಿ.

■ ಇಸ್ಮತ್ ಫಜೀರ್



ಯೋಗೇಶ್ ಮಾಸ್ಟರ್

ಸುಂಗಾಣದ ಹೂರಣ

ಮಗುವಿನಂತಹ ಮನುಷ್ಯರು

ಯೇಸು ಮಕ್ಕಳನ್ನು ರೂಪಕವಾಗಿ ತೆಗೆದುಕೊಂಡಿದ್ದು ...ಕ ಮತ್ತು ಅನುದ್ದೇಶಿತವಲ್ಲ. ಆಧ್ಯಾತ್ಮದ ವಿಷಯವನ್ನು ...ಗೆ ಮುಟ್ಟಿಸಲು ಅವನಿಗೆ ಮಕ್ಕಳಿಗಿಂತ ಮಿಗಿಲಾದ ...ಕವು ಸಿಗಲಿಲ್ಲವೆಂದೇ ಭಾವಿಸುತ್ತೇನೆ. ಸತ್ಯವೆಂಬುದನ್ನು ...ಸುವುದರಲ್ಲಿ ಯಾವುದೇ ಪೂರ್ವಾಗ್ರಹದ ನೆಲೆಗಟ್ಟು ...ದೇ ಇರಬೇಕಾಗಿರುವುದರ ಅಗತ್ಯತೆ ಕಂಡುಕೊಂಡ ...ಸುವಿಗೆ ಕಂಡ ಜೀವಂತ ಉದಾಹರಣೆ ಮಕ್ಕಳು ...ತ್ತು ಅವರ ಮನಸ್ಥಿತಿ.

ಈಗಿನಂತೆ ಆಗಲೂ, ಅಂದರೆ ಯೇಸುವಿನ ...ಘಟ್ಟದಲ್ಲಿ ಮಗುವೆಂದರೆ ತಮ್ಮ ವಂಶವನ್ನು ಅಥವಾ ...ಗೆಯನ್ನು ಮುಂದುವರಿಸುವ ನಿರ್ಬಲ ಮೊಳಕೆಗಳಾಗಿ ...ಯೇ ಹೊರತು ಇನ್ನು ಬೆಳೆದುನಿಂತ ಪ್ರಬುದ್ಧರಿಗೆ ...ಾಹರಣೆಯಾಗುವಂತದ್ದೇನೂ ಅಪ್ಪಿರಲಿಲ್ಲ.

ಆದರೆ, ಮಕ್ಕಳ ಮೇಲೆ ಅಧಿಕಾರ ಚಲಾಯಿಸದಿರಲು ...ತನರಲ್ಲಿ ಮತ್ತು ಈಗಿನವರಲ್ಲಿಯೂ ಕೂಡ ಅವರು ...ರ ವರ ಎಂಬ ಧೋರಣೆಯನ್ನು ಹೊಂದುವುದಿದೆ. ...ಯೇ ಮಕ್ಕಳು ದೇವರ ಸ್ವರೂಪ ಎಂದೂ ಕರೆಯುವ ...ವೇ ಅವರಿಂದ ನಮಸ್ಕಾರವನ್ನಾಗಲಿ ಅಥವಾ ಹಿರಿಯ ...ಕಾಣಬೇಕಾದ ನಡವಳಿಕೆಯ ರೀತಿರಿವಾಜುಗಳನ್ನಾಗಲಿ ...ಕ್ಷಿಸುವುದಿಲ್ಲ. ದೇವರ ನೆಪ ತೆಗೆದುಕೊಳ್ಳುವುದು ...ರವರ ಶ್ರದ್ಧೆ ನಂಬುಗೆಗಳಿಗೆ ಬಿಟ್ಟದ್ದು. ಆದರೆ ಮಕ್ಕಳನ್ನು ...ತಿಕವಾಗಿ, ವೈಚಾರಿಕ ಮತ್ತು ವೈಜ್ಞಾನಿಕವಾಗಿ ಪರಿಗಣಿಸು ...ರಲ್ಲಿಯೂ ಧೋರಣೆ ಅದೇ ಇರಬೇಕಾದ್ದು ಸರಿ ...ು ತೋರುತ್ತದೆ. ಹಾಗಾದರೂ ಮಕ್ಕಳ ಮೇಲೆ ಹಕ್ಕು ...ಸುವುದು, ಅಧಿಕಾರ ಸ್ಥಾಪಿಸುವುದು ಇಲ್ಲವಾಗು ...ೇನೋ ಎಂಬ ಆಶಾಭಾವನೆ.

ಬೈಬಲ್ಲಿನ ಹಳೆಯ ಒಡಂಬಡಿಕೆಯ ಕೀರ್ತನೆ ...ಂದರಲ್ಲಿ (127) ಮಕ್ಕಳು ದೇವರ ಸಂತತಿಯೇ ...ುವರು. ಮಗುವು (ಕರುಳ ಕುಡಿಯು) ಆತನು ನಮಗೆ ...ುವ ಬಹುಮಾನವಾಗಿದೆ ಎಂದು ಸಂತಸಿಸುವರು.

ಮಗುವಿನ ಉತ್ಥಾನಕ್ಕಾಗಿ ಕೆಲವೊಮ್ಮೆ ಕಠಿಣ ...ರ್ಗಗಳನ್ನು ಅನುಸರಿಸಿದರೂ ತಪ್ಪೇನಿಲ್ಲ ಎಂದೂ ...ನವರು ಅಭಿಪ್ರಾಯ ತಳೆದಿದ್ದರು ಎಂದು ಸ್ಪಷ್ಟವಾಗಿ ...ರುತ್ತದೆ. ಅದೇ ಹಳೇ ಒಡಂಬಡಿಕೆಯ ಜ್ಞಾನೋಕ್ತಿಗಳಲ್ಲಿ ...ವರ್ಬ್ಸ್) ಮಕ್ಕಳನ್ನು ಶಿಕ್ಷಿಸಿ ತಪ್ಪೇನಿಲ್ಲ ಎಂದೂ ...ಸುತ್ತಾರೆ. ಹೌದು, ಮೊಂಡಾಟ ಮಾಡುವ ಮಕ್ಕಳು ...ವಾಗಲೂ, ಎಲ್ಲಾ ಕಾಲಗಳಲ್ಲೂ ಮತ್ತು ಎಲ್ಲಾ ...ಗಳಲ್ಲೂ ಇರುತ್ತಾರೆ. ಆದರೆ ಅವರನ್ನು ಶತಾಯಗತಾಯ ...ಲೇಬೇಕು, ಸರಿದಾರಿಗೆ ತರಲೇಬೇಕು ಎಂಬುದು ಆ ...ಯರ ಅಂಬೋಣ.

"ತಿದ್ದಿಕೊಳ್ಳುವನು ಎಂಬ ನಂಬಿಕೆ ಇರುವಾಗಲೇ ...ನನ್ನು ಶಿಕ್ಷಿಸು, ಇಲ್ಲವಾದರೆ ಅವನ ಅಳಿವಿಗೆ ನೀನೇ ...ಣನಾಗುವೆ." (19:18) "ಬಾಲ್ಯದಲ್ಲಿಯೇ ಮಕ್ಕಳನ್ನು ...ದಾರಿಯಲ್ಲಿ ಪಳಗಿಸು, ಮುಪ್ಪಿನಲ್ಲಿಯೂ ಅವರು ಆ ...ತ್ತಿ ಮೀರಿ ನಡೆಯದಿರಲಿ." (22:6) ಮೂರರ ಬುದ್ಧಿ ...ರ ತನಕ ಎಂಬ ಮಾತನ್ನು ಇಲ್ಲಿ ಅವರು ಧ್ವನಿಸುತ್ತಿದ್ದಾರೆ. ...ವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬ ಕನ್ನಡದ ...ಯ ಮಾತುಗಳನ್ನೇ ಅವರೂ ಎತ್ತಿ ಹಿಡಿಯುತ್ತಿದ್ದಾರೆ. ...ಾಗಿಯೇ ತೀರಾ ಮುದ್ದು ಮುಚ್ಚಟೆಯಿಂದ ಮಗುವಿನ ... ತಪ್ಪಿಸಬೇಡ ಎಂದು ಹೇಳುತ್ತಾ ಅವರು ಮಗುವಿನ ...ಲಿನ ವ್ಯಾಮೋಹವನ್ನು ಬಿಟ್ಟು ಶಿಕ್ಷೆ ಕೊಡುವುದಕ್ಕೆ ...ಜರಿಯಬೇಡ ಎಂದು ಪೋಷಕರಿಗೆ ಎಚ್ಚರಿಸುತ್ತಾರೆ.

"ಮಕ್ಕಳನ್ನು ದಂಡಿಸಿ ತಿದ್ದಲು ಹಿಂಜರಿಯಬೇಕಾಗಿಲ್ಲ. ...ದ ಏಟಿಗೆ ಅವರು ಸತ್ತು ಹೋಗುವುದಿಲ್ಲ, ಬೆತ್ತದಿಂದ ...ಾದರೆ ಹೊಡೆ. ಅವರು ಪಾತಾಳಕ್ಕೆ ಬೀಳದಂತೆ ತಡೆ." ...:12) "ಬೆತ್ತ ಬೆದರಿಕೆಗಳು ಜ್ಞಾನ ತರುತ್ತವೆ. ಶಿಕ್ಷಿಸದೇ ... ಮಗನು ತಾಯಿಗೆ ತರುತ್ತಾನೆ ಅಪಕೀರ್ತಿ." (29:15)

ಇಲ್ಲಿ ಅವರು ಮುಖ್ಯವಾಗಿ ಗಮನ ಹರಿಸುವ ...ಟ್ಟಿಯೆಂದರೆ, ಇನ್ನು ನಾವು ಮಕ್ಕಳನ್ನು ಶಿಕ್ಷಿಸಿ ಸರಿದಾರಿಗೆ ...ದಿದ್ದರೆ, ಬೇರೆಯವರು ನೀಡುವ ಶಿಕ್ಷೆಗೆ ಒಳಗಾಗಿ ...ಕ್ಕಳು ತಮಗೆ ನೋವನ್ನು ತರುತ್ತಾರೆ ಎಂದು.

ದಂಡಂ ದಶಗುಣಂ

ಸಿರಾಖ ಕಾಂಡದಲ್ಲಂತೂ (30:8,11) "ಪಳಗಿಸದ ...ುದೆ ಚಂಡಿಯಾಗುವುದು, ಮನಬಂದಂತೆ ನಡೆಯಲು ... ಮಗ ಹಠಮಾರಿಯಾಗುವನು. ಚಿಕ್ಕವನಾಗಿರುವಾಗ ...ಾಗೆ ಸ್ವಾತಂತ್ರ್ಯ ಕೊಡಬೇಡ. ಅವನ ಮೂರ್ಖತನವನ್ನು ...ೇದಿ ಅಲಕ್ಷ್ಯ ಮಾಡಬೇಡ" ಎಂದು ಇಡೀ ಮಕ್ಕಳ ...ಲ್ಲಿ ಶಿಕ್ಷೆ ಮತ್ತು ಶಿಕ್ಷಣ ಎಂಬುದನ್ನೇ ಪ್ರಧಾನವಾಗಿ ... ಹಿಡಿಯುತ್ತಾರೆ.


ದಂಡಂ ದಶಗುಣಂ ಎಂಬ ಮಾತನ್ನು ಕೊನೆಯ

ಹಂತಕ್ಕೆ ಎಂದು ಸಾಂಪ್ರದಾಯಕವಾಗಿ ಪರಿಗಣಿಸುವುದು. ಆದರೆ ಅದನ್ನು ಮೊದಲೇ ಪ್ರಯೋಗಿಸಿಬಿಡುವ ಆತುರ ಪೋಷಕರಿಗೆ. ಶಾಲಾಉಪಾಧ್ಯಾಯನಾಗಿದ್ದ ನನ್ನ ಬಳಿ ತಮ್ಮ ಮಕ್ಕಳ ಬಗ್ಗೆ ದೂರು ತರುತ್ತಿದ್ದ ಬಹುಪಾಲು ಪೋಷಕರು ಮೊಟ್ಟ ಮೊದಲು ಹೇಳುತ್ತಿದ್ದ ಘೋಷ ವಾಕ್ಯವೆಂದರೆ "ಹೇಳಿದ ಮಾತು ಕೇಳಲಿಲ್ಲವೆಂದರೆ ಎರಡು ಬಿಡಿ" ಎಂದು. ಸರಿಯಾಗಿ ಬಾರಿಸಿ, ಚೆತ್ತ ತಗೊಳ್ಳಿ, ಮಗು ಅಂತ ಮುಲಾಜು ನೋಡಬೇಡಿ; ಇವೆಲ್ಲಾ ಅವರ ಷಾರ್ಟ್ ಕಟ್ ಆಕಾಂಕ್ಷೆಯ ಶಬ್ದಗಳು. ಸಾಮಧಾನದಿಂದ ಕ್ರಮವನ್ನು ಅನುಸರಿಸಿ ಕೊನೆಯ ದಂಡಕ್ಕೆ ಬರುವುದಕ್ಕೆ ಅವರಿಗೇ ಸಾವಧಾನವಿರುವುದಿಲ್ಲ. ಕೊನೆಯ ಅಸ್ತ್ರಕ್ಕೇ ಬಂದು ಬಿಡೋಣ ಎಂಬ ಧೋರಣೆ.

ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ ದೊಣ್ಣೆ ಪೆಟ್ಟು ಎಂಬುದೂ ಇದನ್ನು ಸಮರ್ಥಿಸುತ್ತದೆ. ಅಂದರೆ ಮಗುವನ್ನು ಜಾಣನಲ್ಲವೆಂದು, ಅಸಮರ್ಥನೆಂದು ಅನುಮಾನಿಸುವ ಮತ್ತು ಅಪಮಾನಿಸುವ ಧೋರಣೆ ಈ ಪೋಷಕರದು ಎಂದು ನೇರವಾಗಿ ಸ್ಪಷ್ಟವಾಗುತ್ತದೆ. ಇದರಿಂದ ತಿಳಿಯುವುದು ಏನೆಂದರೆ, ಪೋಷಕರು ಮತ್ತು ಶಿಕ್ಷಕರು ಜಾಣರಲ್ಲ ಎಂಬುದು, ಕಲಿಸುವಲ್ಲಿ ವ್ಯವಧಾನವಿಲ್ಲ ಎಂಬುದು, ಕಲಿಕೆಯ ಪದ್ಧತಿಗಳನ್ನು ಹೊಸದಾಗಿ ಕಂಡು ಹಿಡಿಯುವಷ್ಟು ಸೃಜನಶೀಲರಾಗಿಲ್ಲ ಎಂಬುದು.

ಈಗ ಮಕ್ಕಳನ್ನು ದೈಹಿಕ ಶಿಕ್ಷೆಗೆ ಒಳಪಡಿಸುವುದು ಕಾನೂನುರೀತ್ಯಾ ಅಪರಾಧವಾಗಿದ್ದರೂ ಮನೆಗಳಲ್ಲಿ, ಹಲವಾರು ಶಾಲೆಗಳಲ್ಲಿ ಅದು ಎಂದಿಗೂ ಸುಧಾರಣೆಯೇ ಆಗಿಲ್ಲ. ಹೊಡಿಲಿಲ್ಲ ಅಂದರೆ ಅವರಿಗೆ ಬುದ್ಧಿ ಬರಲ್ಲ ಎಂಬ ಅನಾದಿಕಾಲದ ಅಸುಧಾರಿತ ಕ್ರಮದಲ್ಲಿಯೇ ಚಿಂತನೆಗಳನ್ನು ಇಟ್ಟುಕೊಂಡಿರುವುದು ವಿಕಾಸವಾದಕ್ಕೇ ಅಪಮಾನ.


"ಬಂಜೆಯಾದವಳನು ಮಕ್ಕಳ ತಾಯಾಗಿಸುವನು, ಆನಂದದಿಂದವಳು ಬೆಳಗಿಸುವಳಾ ಮನೆಯನು" (ಕೀರ್ತನೆ 113:9) ಹೀಗೆ ಮಕ್ಕಳ ಬಗೆಗಿನ ಗೌರವ ಮತ್ತು ಮೌಲ್ಯಗಳು ಯಾವುದೇ ಕಾಲದಿಂದ ಒಂದೇ ಆಗಿದ್ದರೂ, ಬೆಳೆಸುವ ರೀತಿಯಲ್ಲಿ ಬಹಳಷ್ಟು ವ್ಯತ್ಯಾಸಗಳಾಗುತ್ತಾ ಹೋಗುತ್ತವೆ. ಆಯಾ ಸಂಸ್ಕೃತಿಯ, ಭೌಗೋಳಿಕ ಹಿನ್ನೆಲೆ ಮತ್ತು ಸಾಮಾಜಿಕ



ಅದೆಂದರೆ, ಸಿರಾಖ (37:27) ದಲ್ಲಿ "ಮಗನೇ, ಜೀವನದಲ್ಲಿ ನಿನ್ನನ್ನು ನೀನೇ ಪರೀಕ್ಷಿಸಿಕೋ. ಕೆಟ್ಟದ್ದೇನೆಂದು ತಿಳಿದು, ಅದಕ್ಕೆ ಎಡೆಕೊಡದಂತೆ ನೋಡಿಕೋ" ಎಂದು ಬುದ್ಧಿವಾದ ಹೇಳುತ್ತಾರೆ. ಇಲ್ಲಿ ತಾವು ದಂಡಿಸುವುದಕ್ಕಿಂತ ಸ್ವವಿಮರ್ಶೆ (ಇಂಟರಾಸ್ಪೆಕ್ಷನ್) ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತಾರೆ.

ಅಲ್ಲಿಂದ ಮುಂದೆ ಮಕ್ಕಳನ್ನು ತಿದ್ದುವ ರೀತಿಯ ಧೋರಣೆಗಳಲ್ಲಿ ಬಹಳಷ್ಟು ಸುಧಾರಣೆಗಳು ಕಂಡುಬರುತ್ತಾ ಯೇಸು ಕ್ರಿಸ್ತನ ಕಾಲಾನಂತರ ಇನ್ನಷ್ಟು ತಿದ್ದುಪಡಿಗಳಾದವು. ಕ್ರಿಸ್ತನ ಮರಣಾನಂತರದ ಬೈಬಲ್ಲಿನ ಮುಂದಿನ ದಾಖಲೆಗಳಲ್ಲಿ ಹೇಳುವುದನ್ನು ಗಮನಿಸಿ, "ತಂದೆತಾಯಿಗಳೇ, ನಿಮ್ಮ ಮಕ್ಕಳನ್ನು ಕೆಣಕಿ ಕೆರಳಿಸಬೇಡಿ. ಪ್ರತಿಯಾಗಿ ಪ್ರಭುವಿಗೆ ಮೆಚ್ಚುಗೆಯಾಗುವ ರೀತಿಯಲ್ಲಿ ಅವರಿಗೆ ಶಿಕ್ಷಣವನ್ನು ಕೊಟ್ಟು ಶಿಸ್ತಿನಿಂದ ಸಾಕಿ ಸಲುಹಿರಿ" (ಎಫೆಸಿಯರಿಗೆ 6:4)

ಯೇಸುಕ್ರಿಸ್ತನ ಕಾಲದಲ್ಲಿಯೇ ಮಕ್ಕಳ ಬಗ್ಗೆ ಧೋರಣೆಗಳನ್ನು ಬದಲಾಯಿಸುವ ಕ್ರಮ ಕಾಣುತ್ತೇವೆ.



ಪದ್ಧತಿಯ ಅನುಗುಣವಾಗಿ ಭಿನ್ನತೆಗಳು ಕಂಡುಬರುತ್ತವೆ. ನಗರದ ಮನೆಯ ಮಗುವಿನ ಬೆಳೆಸುವ ರೀತಿಯಲ್ಲಿ, ಗ್ರಾಮದಲ್ಲಿ ಕೃಷಿಕರ ಮಗುವು ಅಥವಾ ಬುಡಕಟ್ಟು ಮೂಲದ ಅರಣ್ಯನಿವಾಸಿಗಳ ಮಗುವಿಗೆ ನೀಡುವ ತಿಳಿವಳಿಕೆಗಳಲ್ಲಿ, ಶಿಕ್ಷಣದಲ್ಲಿ ಮತ್ತು ಜೀವನ ಪದ್ಧತಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ತಮ್ಮ ತಮ್ಮ ಜೀವನದ ಅಗತ್ಯಗಳಿಗೆ ತಕ್ಕಂತೆ ಕಲಿಯುತ್ತಾ ಹೋಗುತ್ತಾರೆ. ಆದರೆ, ಆ ಮಕ್ಕಳಿಗಿರುವ ಮೌಲ್ಯ ಮತ್ತು ಅವರೊಂದಿಗಿರುವ ಸಂಬಂಧ ಮಾತ್ರ ದೇಶ, ಸಮಾಜ ಮತ್ತು ಕಾಲಗಳನ್ನು ಮೀರಿ ಒಂದೇ ಆಗಿರುತ್ತದೆ.

ಬದಲಾಗುವ ತಿದ್ದುವ ಕ್ರಮಗಳು

ಮಕ್ಕಳು ತಮ್ಮ ಪ್ರತಿನಿಧಿಗಳಂತೆ ನೋಡುವ ಪೋಷಕರು ಮತ್ತು ಶಿಕ್ಷಕರು ಮಾತ್ರ ಅವರು ತಪ್ಪುದಾರಿಗೆ ಇಳಿದಾಗ ದಂಡಿಸಬೇಕೆಂದಿಲ್ಲ, ಯಾವುದೇ ಮಗುವು ತನಗೆ ಅರಿವಿಲ್ಲದೇ ಮಾಡುವ ತಪ್ಪನ್ನು ಗುರುತಿಸುವ ಮತ್ತು ತಿದ್ದುವ ಕೆಲಸದ ಹೊಣೆ ಎಲ್ಲರದ್ದು. ಆದರೆ ಇಲ್ಲಿ ಇರುವ ದೊಡ್ಡ ಸಮಸ್ಯೆ ಎಂದರೆ ಅದು ತಪ್ಪು ಎಂದು ಹಿರಿಯರಿಂದ ಗುರುತಿಸಲ್ಪಡುವ ತಪ್ಪು ಯಥಾರ್ಥವಾಗಿ ತಪ್ಪೇ ಆಗಿರುತ್ತದೆಯೇ? ತಪ್ಪು ಎನ್ನುವುದೇ ತಪ್ಪು ತಿಳಿವಳಿಕೆಯಿಂದ ಕೂಡಿದ್ದರೆ? ಹೀಗಾಗಿ ಸರಿ ತಪ್ಪುಗಳ ಗೊಂದಲಗಳಿಂದಾಗಿಯೇ 'ಮಾಡು ಮತ್ತು ಕೂಡದು' ತಿಕ್ಕಾಟದಲ್ಲಿ ಮಕ್ಕಳೂ ಮತ್ತು ಹಿರಿಯರೂ ಹೈರಾಣಾಗಿಬಿಟ್ಟಿದ್ದಾರೆ.

ಹಳೆಯ ಒಡಂಬಡಿಕೆಯಲ್ಲಿಯೇ ಮಕ್ಕಳಿಗೆ ತಿಳಿ ಹೇಳುವ ಕ್ರಮದಲ್ಲಿ ಕೊಂಚ ಸುಧಾರಣೆ ಆದಂತೆ ಕಾಣುತ್ತದೆ.

ಆದರೆ ಇಸ್ಲಾಂನ ಉದಯವಾದ ಮೇಲೆ ಮಕ್ಕಳ ಮೌಲ್ಯವು, ಅವರನ್ನು ಸತ್ಕರಿಸುವುದರಲ್ಲಿ ಆಗಿರುವ ಸುಧಾರಣೆಯು ಹೆಚ್ಚಿರುವುದನ್ನು ಗಮನಿಸಬಹುದಾಗಿದೆ.

ಮಗುತನವ ಮತ್ತೆ ಪಡೆಯಿರಿ.

ಮಗುವೆಂಬ ಸಾಧನ

ಸ್ವರ್ಗಕ್ಕೆ ಒಂದು ತಾಂತ್ರಿಕ ಸಾಧನವಾಗಿ ಮಗುವೊಂದು ಬೇಕು ಎನ್ನುವ ಸಮಾಜಕ್ಕೆ ಒಂದು ಧ್ವನಿ ಕೇಳಿಸಬೇಕು. ಅದೇ, "ನೀವು ಮತ್ತೆ ಮಗುವಾಗದೇ ಹೋದರೆ ನಿಮಗೆ ಸ್ವರ್ಗ ಎಂಬುವುದಿಲ್ಲ" ಎಂಬುದು. ಮಗುವನ್ನಷ್ಟೇ ಅಲ್ಲ ನೀವು ಪಡೆಯಬೇಕಾಗಿರುವುದು, ಮಗುತನವನ್ನೂ ಕೂಡ ಎಂಬ ಧ್ವನಿಯೂ ಕೂಡ.

ಜೆರೂಸಲೇಮಿನ ಹನ್ನೆರಡು ವರ್ಷದ ಒಂದು ಮಗು ಪಾಸ್ಕ ಹಬ್ಬದ ಜಾತ್ರೆಯಲ್ಲಿ ಕಳೆದುಹೋಯಿತು. ತಂದೆ ಮತ್ತು ತಾಯಿ ಎಲ್ಲೆಡೆ ಹುಡುಕಿದರು. ಮಗು ಕಾಣಲಿಲ್ಲ. ಮೂರುದಿನಗಳ ಬಳಿಕ ಆ ಮಗು ದೇವಾಲಯವೊಂದರಲ್ಲಿ ಬೋಧಕರ, ಪ್ರವಚಕರ ನಡುವೆ ಕುಳಿತುಕೊಂಡು, ಅವರು ಆಡುತ್ತಿದ್ದ ಮಾತುಗಳನ್ನು ಕೇಳಿಕೊಂಡು, ತನಗೆ ತೋರಿದ ಪ್ರಶ್ನೆಗಳನ್ನು ಕೇಳುತ್ತಿದ್ದ. ತಂದೆ ತಾಯಿಗಳಿಗೆ ತಮ್ಮ ಮಗುವನ್ನು ಆ ರೀತಿ ನೋಡಿ ಆಶ್ಚರ್ಯವಾಯಿತು. ಆ ಮಗು ತನ್ನ ಆಸಕ್ತಿಯ ವಿಷಯಗಳನ್ನು ಗ್ರಹಿಸುತ್ತಾ, ತನ್ನ ಸುತ್ತಲೂ ನಡೆಯುತ್ತಿದ್ದ ವಿದ್ಯಮಾನಗಳನ್ನು ಕುತೂಹಲದಿಂದ ಗಮನಿಸುತ್ತಾ, ತನ್ನ ಆಸಕ್ತಿಯ ಹಾಗೂ ತನ್ನ ಉದರದ ಪೋಷಣೆಯನ್ನು ಆ ಮೂರುದಿನಗಳೂ ಮಾಡಿಕೊಳ್ಳುವಷ್ಟು ಸ್ವತಂತ್ರನಾಗಿದ್ದ, ಸಹಜವಾಗಿ ತನಗೆ (ಹೊಟ್ಟೆಗೂ ಮತ್ತು ಕುತೂಹಲಕ್ಕೂ) ಬೇಕಾಗಿರುವುದನ್ನು ಪಡೆಯುವಷ್ಟು ಕೌಶಲ್ಯವಿತ್ತು, ಆ ಹುಡುಗ ಯೇಸು.

ಅದೇನೇ ಇರಲಿ, ಮಕ್ಕಳು (ದೊಡ್ಡವರ ಅತಿಕ್ರಮ ಪ್ರವೇಶವಿರದಿದ್ದರೆ) ಸಹಜವಾಗಿಯೇ ಕೆಲವು ಬಗೆಯ ಜೀವನ ನಿರ್ವಹಣೆಯ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಅವರು ಪ್ರಕೃತಿಯೊಡನೆ ಪ್ರತಿಕ್ರಿಯಿಸುತ್ತಾರೆ. ನಾವಿರುವಂತಹ ಸಂಕೀರ್ಣವಾಗಿರುವ ಸಮಾಜದಲ್ಲಿ ಅದು ಆಗದು ನಿಜ, ಆದರೆ ಅವರ ಮೌಲ್ಯವನ್ನು ಅರಿಯದು ನಾವು ಅವರಂತೆಯೇ ಸಹಜ ಮುಗ್ಧತೆಯನ್ನು ಗಮನಿಸುವಷ್ಟಾದರೂ ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳುವುದು ಅಗತ್ಯವೆನಿಸುತ್ತದೆ. ಸಮಾಜ ಮತ್ತು ವ್ಯವಸ್ಥೆಯ ಸಂಕೀರ್ಣತೆಯಲ್ಲಿಯೂ ಅದರ ಸೋಂಕಿಲ್ಲದ ಮಕ್ಕಳ ಸರಳತೆಯನ್ನು ಕಾಪಾಡಿಕೊಳ್ಳುವಲ್ಲಿ ನಾವು ನೆರವಾಗಲು ಅಥವಾ ಒಳದೃಷ್ಟಿಯನ್ನು ಪಡೆಯಲು ಯೇಸು ವಿಶೇಷವಾಗಿ ಮಕ್ಕಳ ಕಡೆಗೆ ಗಮನ ಹರಿಸುತ್ತಾರೆ.

ಸಣ್ಣ ಮಕ್ಕಳನ್ನು ಯೇಸುವಿನ ಬಳಿಗೆ ಕರೆತಂದಾಗ, ಅವರ ಶಿಷ್ಯರು ಗದರಿಸಿ ದೂರ ಕಳುಹಿಸಲು ಯತ್ನಿಸುವರು. ಆಗ ಯೇಸು, "ಅವರನ್ನು ನನ್ನ ಬಳಿಗೆ ಬರಲು ಬಿಡಿ. ಅವರನ್ನು ತಡೆಯಬೇಡಿ. ಸ್ವರ್ಗಸಾಮ್ರಾಜ್ಯ ಇವರದೇ" ಎಂದು ಅದಕ್ಕೆ ಆಧ್ಯಾತ್ಮಿಕ ಸ್ಪರ್ಶ ಕೊಟ್ಟರೂ, ನಿಜವಾಗಿ ಮಕ್ಕಳ ಮುಗ್ಧತೆ ಮತ್ತು ಮುಕ್ತತೆಯ ಮನೋರಂಗ ಮತ್ತು ಅದರ ಪ್ರಾಮುಖ್ಯತೆಯನ್ನು ಧ್ವನಿಸುವರು.

ಮತ್ತೊಮ್ಮೆ ಕೊರಾಜ್ಜಿನ್ ಪಟ್ಟಣದ ಜನರು ಯೇಸು ಯಾವುದನ್ನು ಯಥಾರ್ಥ ಎಂದು ನಂಬಿದ್ದರೋ ಮತ್ತು ಬೋಧಿಸಲು ಯತ್ನಿಸಿದರೋ ಅದನ್ನು ತಿಳಿದುಕೊಳ್ಳದೇ ಹುಂಬರಂತೆ ವರ್ತಿಸುವಾಗ ಅವರನ್ನು ಖಂಡಿಸುತ್ತಾ "ಪಿತನೇ (ದೇವರೇ), ಜ್ಞಾನಿಗಳಿಗೂ ಮೇಧಾವಿಗಳಿಗೂ ಈ ವಿಷಯಗಳನ್ನು ಮರೆಮಾಡಿ ಮಕ್ಕಳಂತಹವರಿಗೆ ನೀವು ಶ್ರುತಪಡಿಸಿದ್ದೀರಿ" ಎಂದು ಹೇಳುತ್ತಾರೆ. ಪಾಂಡಿತ್ಯಕ್ಕೆ ನಿಲುಕಲಾರದಂತಹ ಮುಗ್ಧ ಮುಕ್ತ ಮತ್ತು ಪ್ರಾಕೃತಿಕ ಜ್ಞಾನವು ಮಕ್ಕಳಲ್ಲಿರುತ್ತದೆ ಎಂದು ಯೇಸು ತಿಳಿಸುತ್ತಾರೆ.

ಮಗುವಿಗಿಂತ ಹಿರಿಯರು ಯಾರು?


ಯೇಸುವಿನ ಬಳಿ ಬೋಧನೆಗಳಿಗೆ, ಪವಾಡಗಳಿಗೆ ಹಾತೊರೆಯುವಂತಹ ಮತ್ತು ಸ್ವರ್ಗ ಎಂಬುವುದನ್ನು ಅನೇಕ ಶಿಷ್ಟಾಚಾರ ಹಾಗೂ ಸಂಪ್ರದಾಯಗಳ ಮೂಲಕ ಪಡೆಯಬೇಕೆಂದುಕೊಂಡಿರುವಂತಹ ಶಿಷ್ಯರು, "ಸ್ವರ್ಗ ಸಾಮ್ರಾಜ್ಯದಲ್ಲಿ ಎಲ್ಲರಿಗಿಂತಲೂ ದೊಡ್ಡವನು ಯಾರು?" ಎಂದು ಕೇಳುವರು. ಆಗ ಯೇಸು ಒಂದು ಚಿಕ್ಕ ಮಗುವನ್ನು ಕರೆದು, ಅದನ್ನು ತಮ್ಮ ಶಿಷ್ಯರ ನಡುವೆ ನಿಲ್ಲಿಸಿಕೊಂಡು ಹೇಳುತ್ತಾರೆ, "ನೀವು ಪರಿವರ್ತನೆ ಹೊಂದಿ ಮಕ್ಕಳಂತೆ ಆಗದಿದ್ದರೆ ಸ್ವರ್ಗಸಾಮ್ರಾಜ್ಯವನ್ನು ಸೇರಲಾರಿರಿ ಎಂದು ನಿಶ್ಚಯವಾಗಿ ಹೇಳುತ್ತೇನೆ" ಎನ್ನುವ ಮಾತಿನಲ್ಲಿ ಪಾಂಡಿತ್ಯ ಮತ್ತು ಮೇಧಾವಂತಿಕೆಗಳಿಂದ ಮುಗ್ಧತೆ ಮತ್ತು ಮುಕ್ತತೆಯ ಮಗುತನವನ್ನು ಪ್ರತಿಪಾದಿಸುವುದಲ್ಲದೇ, ಸ್ವರ್ಗವೆನ್ನುವುದು ಯಾವುದೋ ಎಲ್ಲಿಯೋ ಇರುವಂತಹ ಭೌಗೋಳಿಕ ಅಸ್ತಿತ್ವವಲ್ಲ, ಅದು ಬರಿದೇ ಮನೋರಂಗ ಎಂದು ಧ್ವನಿಸುತ್ತಾರೆ. ಮತ್ತು ಎಚ್ಚರಿಸುತ್ತಾರೆ, "ಚಿಕ್ಕ ಮಕ್ಕಳನ್ನು ಎಂದಿಗೂ ತೃಣೀಕರಿಸಬೇಡಿ" ಎಂದು.

ಯೇಸು ಮಕ್ಕಳ ಬಗ್ಗೆ ಪದೇ ಪದೇ ಉಲ್ಲೇಖಿಸುತ್ತಲೇ ಇರುತ್ತಾರೆ. ಒಮ್ಮೆ ಅವರ ಶಿಷ್ಯರ ನಡುವೆ ತಮ್ಮ ಪ್ರಾಮುಖ್ಯತೆಯ ಬಗ್ಗೆ ಜಗಳವೆದ್ದಿತು. ಆಗ ಯೇಸು ಒಂದು ಚಿಕ್ಕ ಮಗುವನ್ನು ತಮ್ಮ ಬಳಿಯಲ್ಲಿ ನಿಲ್ಲಿಸಿಕೊಂಡು, ಯಾರು ಈ ಮಗುವನ್ನು (ಗುಣ ಮತ್ತು ಮೌಲ್ಯವನ್ನು) ಸ್ವೀಕರಿಸುತ್ತಾರೋ ಅವನೇ ಅತ್ಯುತ್ತಮನಾದವನು ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಮಕ್ಕಳ ಕೆರಳಿಸದಿರಿ

ಜ್ಞಾನೋದಯ ಎಂಬುದಕ್ಕೆ ಯೇಸುವಿನಿಂದ ಮಗುತನದ ಅನ್ವಯವನ್ನು ನೀಡುತ್ತಾರೆ. ನೀನು ಮತ್ತೆ ಮಗುವಾಗಿ ಹುಟ್ಟಬೇಕು ಎಂದು ಹೇಳುವುದರಲ್ಲಿ ಮಗುತನದ ಮೌಲ್ಯವನ್ನು ಅವರು ಸದಾ ಎತ್ತಿ ಹಿಡಿಯುತ್ತಾರೆ. ಹಾಗಾಗಿಯೇ ಅವರ ತತ್ವ ಪ್ರಚಾರ ಮಾಡುವವರು ಮುಂದೆ ಹಳೆಯ ಸಾಂಪ್ರದಾಯಕವಾದ "ಮಕ್ಕಳು ದೊಡ್ಡವರಿಗೆ ವಿಧೇಯರಾಗಿ, ಅವರನ್ನು ಚೆನ್ನಾಗಿ ನೋಡಿಕೊಳ್ಳಿ" ಎಂದು ಹೇಳುವುದರ ಜೊತೆ ಜೊತೆಗೆ, "ತಾಯಿತಂದೆಯರೇ, ನಿಮ್ಮ ಮಕ್ಕಳನ್ನು ಕೆರಳಿಸಿ ಅವರ ಮನಸ್ಸನ್ನು ಕುಗ್ಗಿಸದಿರಿ" ಎಂದು ಎಚ್ಚರಿಕೆಯನ್ನು ನೀಡುತ್ತಾರೆ. (ಕೊಲೊಸ್ಸೆಯರಿಗೆ 3:21)

ಮಕ್ಕಳೆಂದರೆ ಏನೂ ಅರಿಯದವರು, ಅವರಿಗೆ ನಾವೇ ಎಲ್ಲವನ್ನೂ ತಿಳಿಸಿಕೊಡಬೇಕು. ಅವರಿಗೆ ತಿಳಿವಳಿಕೆ ಬರದಿದ್ದರೆ ಹೊಡೆದು ಬಡಿದಾದರೂ ಬುದ್ಧಿ ಕಲಿಸಬೇಕು ಎನ್ನುವ ದೇಶ ಮತ್ತು ಕಾಲದ ಮುಂದುವರಿಕೆಯಾಗಿಯೇ ಬಂದ ಯೇಸು, ಮಕ್ಕಳ ಬಗ್ಗೆ ಇರುವ ದೃಷ್ಟಿಕೋನವನ್ನೇ ಬದಲಿಸಲು ಯತ್ನಿಸುತ್ತಾರೆ. ನಮ್ಮಂತೆ ಮಕ್ಕಳನ್ನು ಮಾಡುವುದು ಬೇಡ, ಮಕ್ಕಳಂತೆ ನಾವು ಆಗೋಣ ಎನ್ನುವ ಮಕ್ಕಳ ಮನೋಭೂಮಿಕೆಯನ್ನು, ಅದರ ವ್ಯಾಪ್ತಿ ಮತ್ತು ಮಹತ್ವವನ್ನು ಹಾಗೂ ಆ ಮನುಷ್ಯತ್ವವನ್ನು ಗೌರವಿಸುತ್ತಾರೆ. ■



ಗೊಡ್ಡು ಚೆಡ್ಡಿಗಳ ಅಸಲೀ ದೇಶದ್ರೋಹ

ದುಡಿದುಣ್ಣದೇ ಬದುಕುವ, ಸ್ವಾರ್ಥಕ್ಕಾಗಿ ಸಮಾಜದಲ್ಲಿ ಎಂದಿಗೂ ಸೌಹಾರ್ದವನ್ನು ಬಯಸದ ವೈದಿಕಶಾಹಿ ಗುಂಪು ಹಾಗು ಆ ಗುಂಪು ದಯಪಾಲಿಸಿದ ಚೆಡ್ಡಿ ತೊಟ್ಟು ತಮ್ಮ ಮೆದುಳಿನ ನಿಯಂತ್ರಣವನ್ನೇ ಅವರಿಗೆ ವಹಿಸಿಕೊಟ್ಟು ಮತಿಗೆಟ್ಟಂತೆ ವರ್ತಿಸುವ ವಿದ್ಯಾವಂತ ಶೂದ್ರ ವರ್ಗಗಳು ಆಗಾಗ ದೇಶಪ್ರೇಮದ ಸೋಗು ಹಾಕಿಕೊಂಡು ಇತರರನ್ನು ದೇಶದ್ರೋಹಿಗಳೆಂದು ಸಾಧಿಸಿ ತೋರಿಸಲು ಪಡುತ್ತಿರುವ ಸಂಕಷ್ಟಗಳನ್ನು ನೋಡಿದರೆ ಎಂಥವರ ಕರುಳಾದರೂ ಚುರುಗುಟ್ಟದೇ ಇರದು.

ಬರೆಯಲಾದ ದೊಡ್ಡ ಗೆರೆಯೊಂದನ್ನು ಅದರಷ್ಟಕ್ಕೇ ಚಿಕ್ಕದು ಮಾಡಲು ಸಾಧ್ಯವಿಲ್ಲದಿದ್ದರೂ ಇದನ್ನು ಸಾಧ್ಯವಾಗಿಸುವ ಅಡ್ಡದಾರಿಯೊಂದಿದೆ. ಅದೆಂದರೆ ಆ ಗೆರೆಯ ಪಕ್ಕ ಇನ್ನೊಂದು ಚೂರೇ ಚೂರು ದೊಡ್ಡದಾದ ಮತ್ತೊಂದು ಗೆರೆಯನ್ನು ಬರೆದು ಬಿಡುವುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಂಚಕರು, ಮಾಹಿತಿದಾರರು, ದೋಖಾಬಾಜಿಗಳು, ಇನಾಮ್‌ದಾರಿ(ವೈರಿಯನ್ನು ಹಿಡಿಯಲು ಸಹಕರಿಸಿದ್ದಕ್ಕೆ ಬ್ರಿಟಿಷರಿಂದ ಇನಾಮ್ ಪಡೆದಂತವರು)ಗಳ ಪಾತ್ರವನ್ನಷ್ಟೇ ಮಾಡಿರುವ ಚೆಡ್ಡಿಪಡೆಗೆ ಉಳಿದವರನ್ನು ನೇರವಾಗಿ ಎದುರಿಸುವ ನೈತಿಕತೆಯಿಲ್ಲದೇ ಮೇಲಿನ ಅಡ್ಡದಾರಿಯ ತಂತ್ರವನ್ನೇ ಯಾವಾಗಲೂ ಬಳಸುವುದುಂಟು. ಆರೆಸ್ಸೆಸ್ ವಲ್ಲಭಭಾಯಿಯೊಂದಿಗೆ, ನೇತಾಜಿ ಭೋಸರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿಲ್ಲದಿದ್ದರೇನಂತೆ ನೆಹರೂ ಮತ್ತು ಗಾಂಧೀಜಿ ವಲ್ಲಭಭಾಯಿಗೆ ಮೋಸ ಮಾಡಿದರು ಎಂದು ಬೊಬ್ಬೆ ಹೊಡೆಯುತ್ತಾ ತಮ್ಮ ವಿರೋಧಿ ನೆಹರೂವನ್ನು ವಿಲನ್ ಎಂಬಂತೆ ಬಿಂಬಿಸುವಲ್ಲಿ ಯಶಸ್ವಿಯಾಗುತ್ತಾರೆ. ಅದೇ ರೀತಿ ಮೊನ್ನೆ ಮೊನ್ನೆವರೆಗೆ ನೇತಾಜಿ ಭೋಸರ ವಿಚಾರದಲ್ಲಿ ದೇಶದ ಮೊದಲ ಪ್ರಧಾನಿ ನೆಹರೂ ವಿರುದ್ಧ ಮಾತಾಡುತ್ತಾ ದೇಶದ ಜನತೆಗೆ ಕಾಂಗ್ರೆಸ್ಸಿನ ಮೇಲೆ ಮತ್ತಷ್ಟು ದ್ವೇಷ ಹುಟ್ಟುವಂತೆ ಮಾಡಲಾಯಿತು.

ಸುಭಾಷ್ ಚಂದ್ರ ಭೋಸ್, ವಲ್ಲಭಭಾಯ್ ಪಟೇಲರ ಬಗ್ಗೆ ಮಾತನಾಡಲು ನೈತಿಕ ಹಕ್ಕೇ ಇರದ ಇವರಿಗೆ ಇಂತಹ ಕುಯುಕ್ತಿಯ (ಸ್ವತಂತ್ರ ಸಂಗ್ರಾಮದಲ್ಲಿ ತಮ್ಮ ಸಾಧನೆ ತೋರಿಸಲು ಏನೇನೂ ಇಲ್ಲದಿದ್ದಾಗ ವಿರೋಧಿಗಳ ಋಣಾತ್ಮಕ ಗುಣವನ್ನು ಹೆಕ್ಕಿ ಹೆಕ್ಕಿ ಪ್ರಚಾರ ಮಾಡಿದರೆ ಅದೇ ತಮ್ಮ ಪರೋಕ್ಷ ಲಾಭಕ್ಕೆ ದಾರಿ ಎಂಬಂತಹ) ತಂತ್ರಗಳು ಕರತಲಾಮಲಕ. ಅದರದ್ದೇ ಭಾಗವಾಗಿ ಜನಪರ ಚಿಂತನೆಯನ್ನು ಬೆಳೆಸಿಕೊಳ್ಳುತ್ತಿರುವ ವಿದ್ಯಾರ್ಥಿಗಳಿರುವ ಚೆನ್ನೈನ ಐಐಟಿಯ ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್ ರಾದ್ಧಾಂತ, ಹೈದರಬಾದಿನಲ್ಲಿ ರೋಹಿತ್ ವೇಮುಲಾ ಪ್ರಕರಣ ಹಾಗು ಮೊನ್ನೆ ಜೆಎನ್‌ಯುನಲ್ಲಿ ಮತ್ತದೇ ಯಾವುದೋ ವಿಚಾರದ ನೆಪದಲ್ಲಿ ಅಲ್ಲಿನ ವಿದ್ಯಾರ್ಥಿಗಳನ್ನು ದೇಶದ್ರೋಹಿಗಳೆಂದು ಕೂಗೆಬ್ಬಿಸಿದ್ದಲ್ಲದೇ ಇದನ್ನು ಮತ್ತಷ್ಟು ಗಟ್ಟಿಯಾಗಿಸಲು ಪಾಕ್ ಉಗ್ರನ ಹೆಸರಲ್ಲಿ ನಕಲಿ ಟ್ವೀಟ್ ಖಾತೆ ತೆಗೆದು ಜೆಎನ್‌ಯು ಬೆಂಬಲಿಸಿ ದೇಶ ಒಡೆಯುವಂತಹ ಕೆಲಸ ಮಾಡಿದರು. ತಮ್ಮ ಕಾರ್ಯಸಾಧನೆಗೆ ಎಂತಹ ಹೀನ ಮಟ್ಟಕ್ಕೂ ಇಳಿಯಲು ಹೇಸದ ಇವರು ಸಿಂದಗಿಯಲ್ಲಿ ಪಾಕ್ ಧ್ವಜ ಹಾರಿಸಿದ್ದು ಮತ್ತು ಸಾಕ್ಷಿ ಹೇಳಬಲ್ಲ ದಲಿತ ಜಂಬಗಿಯ ಕೊಲೆ ಪ್ರಕರಣದಲ್ಲಿ ಭಾಗಿಯಾದದ್ದು ಎಲ್ಲರಿಗೂ ಗೊತ್ತು. ಈ ಚೆಡ್ಡಿ ಪಡೆಯೇ ಅಸಲಿ ದೇಶ ದ್ರೋಹಿಗಳು. ಇವರು ಈ ದೇಶದಲ್ಲಿರಲು ನಿಜಕ್ಕೂ ಯೋಗ್ಯರಲ್ಲವೇ ಅಲ್ಲ.

ಉತ್ತರ ಕರಾವಳಿಯಲ್ಲೊಂದು ಗಾದೆ ಮಾತಿದೆ- ನೆರೆಮನೆ ಹಾಳಾದ್ರೆ ದನಕರು ಕಟ್ಟುವ ಜಾಗ ಆಯ್ತು ಎಂದು. ತಮ್ಮ ಸ್ವಾರ್ಥದ ಬೇಳೆ ಬೇಯಲು ಉಳಿದವರ ನಾಶವನ್ನೇ ಬಯಸುವ ಈ ದರಿದ್ರ ಮನುಷ್ಯರು ಯಾರದ್ದೋ ನೋವನ್ನು ತಮಗೆ ಲಾಭವಾಗಿಸುವುದಕ್ಕೆ, ಲಾಭವನ್ನಾಗಿಸುವಲ್ಲಿ ಸದಾ ರಣಹದ್ದಿನಂತೆ ಹೊಂಚುಹಾಕುವಂತವರು. ಮಲ್ಲಿಕಾರ್ಜುನ ಬಂಡೆ, ಡಿ.ಕೆ.ರವಿ ತರಹದವರು ಕಾಂಗ್ರೆಸ್ ಸರಕಾರವಿರುವಾಗ ಸತ್ತಿದ್ದರಿಂದ ಹೊರಬಿದ್ದ ಇವರ ಇನ್ನಿಲ್ಲದ ಕಳಕಳಿ-ದೇಶಪ್ರೇಮಗಳ ನಾಟಕ ಹೇಮಂತ್ ಕರ್ಕರೆ ಮರಣಹೊಂದಿದಾಗ ವ್ಯಕ್ತಗೊಂಡಿರಲೇ ಇಲ್ಲ. ಜೆಎನ್‌ಯು ಪ್ರಕರಣಕ್ಕೂ ಹಿಮದಲ್ಲಿ ಹುದುಗಿ ಸತ್ತ ಧೀರ ಯೋಧ ಕನ್ನಡಿಗ ಹನುಮಂತಪ್ಪನವರ ಸಾವಿಗೂ "ಅಲ್ಲಿ ದೇಶಪ್ರೇಮ - ಇಲ್ಲಿ ದೇಶದ್ರೋಹ" ಎಂದು ಲಿಂಕ್ ಕಲ್ಪಿಸಿ ಯೋಧನ ಸಾವಲ್ಲೂ ಏನಾದರೂ ಗಿಟ್ಟಬಹುದೇ ಎಂದು ನೋಡಿದರು.



ವಾಜಪೇಯಿಯ ಬಿಜೆಪಿ ಸರಕಾರ ಲಾಹೋರ್‌ಗೆ ಬಸ್ ಬಿಟ್ಟ ಬಳಿಕ ಪಾಕ್ ಭಾರತದ ಮೇಲೆ ಮುಲಾಜಿಲ್ಲದೇ ದಾಳಿ ಮಾಡಿದ್ದು (ಪಾಕ್‌ನ ಬದಲಾಗದ ವಿರೋಧಿ ಮನಸ್ಥಿತಿ) ತಿಳಿದೂ ಚಪ್ಪನ್ನೈವತ್ತಾರು ಇಂಚು ಎದೆಯ ಮೋದಿ ಅಧಿಕಾರಕ್ಕೆ ಬಂದರೆ ಪಾಕ್ ಬಾಲ ಮುದುರುತ್ತದೆಂದು ನಂಬಿ ಓಟ್ ಮಾಡಿದ ಜನರೆದುರು ಈ ಮೋದಿ ಮಹಾಶಯ ಮಹಾ ಮುತ್ಸದ್ದಿಯ ಪೋಸ್ ನೀಡಿ (ಈಚೆಗೆ ಶೌರ್ಯ- ಧೈರ್ಯವೂ ಇಲ್ಲ ಆಚೆಗೆ ಮುತ್ಸದ್ದಿತನವೂ ಇರದ ಬಾಯಿ ಬಡಾಯಿಯಷ್ಟೇ ಈತನ 'ಭಂಡ'ವಾಳವೆಂಬುದು ಯಾವತ್ತೋ ಸಾಬೀತಾದ ಅಂಶ ತಾನೆ?). ದಿಢೀರ್ ಪಾಕ್‌ಗೆ ಭೇಟಿ ಕೊಟ್ಟು ಪಠಾಣ್‌ಕೋಟ್‌ನಲ್ಲಿ ಮೂತಿಗೆ ಇಕ್ಕಿಸಿಕೊಂಡಾಗ ಪಾಕ್‌ನಿಂದ ಸತ್ತ ಸೈನಿಕರ ಬಗ್ಗೆ ಅವರ ಕಷ್ಟಗಳ ಬಗ್ಗೆ ಮಾತಾಡುವ ಸೂಲಿಬೆಲೆಯಂತವರ ಬಾಯಿಗೇ ಪಾಪ ಲಕ್ವ ಹೊಡೆದಿತ್ತು. ಇದೇ ವಿಚಾರ ಕಾಂಗ್ರೆಸ್‌ನ ಅವಧಿಯಲ್ಲಿ ಘಟಿಸಿದ್ದರೆ ಸೂಲಿಬೆಲೆಯಂತವರ ಕರುಣಾಮಯ ಸ್ಕ್ರಿಪ್ಟ್‌ಗಳು ಒಂದೊಂದಾಗಿ ಹೊರಬರುತ್ತಿದ್ದವು. ಇಂತಹ ಮೋದಿ ಹಾಗು ಆತನ ಗೊಡ್ಡು ದೇಶ ಭಕ್ತರು ಯಾವ ದೇಶ ಪ್ರೇಮ ಅಥವ ಶೌರ್ಯಕ್ಕೆ ಮಾದರಿಯಾದಾರು?

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಕರಿ-ಬಿಳಿ ದಾಡಿಗಳ ಹುಸಿ ಎನ್‌ಕೌಂಟರ್‌ಗಳು

ಬೂಸಿ ಬಸ್ಯ ಅಂಕಣದಲ್ಲಿ ಹೇಳಿರುವಂತೆ ಗುಜರಾತಿನ ಕರಿ-ಬಿಳಿ ದಾಡಿದ್ವಯರು ಅಮೇರಿಕಾದಲ್ಲಿ ಕುಳಿತಿರುವ ಪಾಕಿ ಉಗ್ರ-ಕವರ್-ಸಿಐಎ ಏಜಂಟ್ ಡೇವಿಡ್ ಹೆಡ್ಲಿಯಿಂದಲೇ ವಿಡಿಯೋ ಕಾನ್ಫರೆನ್ಸಿನಲ್ಲಿ ಸುಳ್ಳು ಹೇಳಿಸಲು ಶಕ್ತರಾಗಿದ್ದಾರೆ ಎಂದರೆ, 13 ವರ್ಷ ಗುಜರಾತಿನಲ್ಲಿ ಅಧಿಕಾರದಲ್ಲಿ ಇದ್ದಾಗ ತಮ್ಮ ಅಧೀನ ಪೊಲೀಸ್ ಅಧಿಕಾರಿಗಳ ಮೂಲಕ ಎಷ್ಟೆಲ್ಲಾ ದುಷ್ಟ ಕೆಲಸಗಳನ್ನು ಮಾಡಿಸಿದ್ದಿರಬಹುದು? ಎಷ್ಟು ನೈಜ ಸಾಕ್ಷಿಗಳನ್ನು ಅಳಿಸಿ ಹಾಕಿ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ತನಿಖಾ ಸಂಸ್ಥೆ ಮತ್ತು ಕೋರ್ಟುಗಳ ಹಾದಿ ತಪ್ಪಿಸಿರಬಹುದು? ಹೆಡ್ಲಿಯ ಬಾಯಿಂದ ಇಶ್ರತ್ ಜಹಾನ್ ಆತ್ಮಹತ್ಯಾ ಬಾಂಬರ್ ಆಗಿದ್ದಳು ಎಂದು ಸುಳ್ಳು ಹೇಳಿಸುವುದು ಕರಿ-ಬಿಳಿ ಗಡ್ಡದ ಕರಟಕ ದಮನಕರಿಗೆ ನೀರು ಕುಡಿದಷ್ಟು ಸುಲಭವಾಗಿರಬಹುದು. ಇಶ್ರತ್ ಜಹಾನ್ ಉಗ್ರವಾದಿ ಆಗಿರಲೂ ಬಹುದು ಅಥವಾ ಇಲ್ಲದಿರಲೂ ಬಹುದು. ಆದರೆ ಅವಳನ್ನು ಕೊಂದಿದ್ದು ನಕಲಿ ಎನ್‌ಕೌಂಟರಿನಲ್ಲಿಯೋ ಅಥವಾ ಅಸಲಿ ಎನ್‌ಕೌಂಟರಿನಲ್ಲಿಯೋ ಎಂಬುದು ಜಗತ್ತು ಕೇಳುತ್ತಿರುವ ಮೂಲ ಪ್ರಶ್ನೆ. ಎನ್‌ಕೌಂಟರ್ ಅಸಲಿಯಾಗಿದ್ದರೆ ಬಂಧನಕ್ಕೆ ಒಳಗಾಗುವಾಗ ಪೊಲೀಸ್ ಆಯುಕ್ತ ಜೆ.ಎಲ್.ಸಿಂಘಾಲ್ ಬಾಯಲ್ಲಿ "ನಿರಪರಾಧಿಗಳನ್ನು ಕೊಂದದ್ದಕ್ಕಾಗಿ ಇದು ನನಗೆ ದೇವರೇ ಕೊಟ್ಟ ಶಿಕ್ಷೆ" ಎಂಬ ಪಶ್ಚಾತಾಪದ ಮಾತು ತನ್ನಿಂದ ತಾನೇ ಬಂದಿದ್ದು ಹೇಗೆ? ನಕಲಿ ಎನ್‌ಕೌಂಟರಿನಲ್ಲಿ ಶಾಮೀಲಾಗಿದ್ದ ಎಲ್ಲಾ ಪೊಲೀಸ್ ಅಧಿಕಾರಿಗಳ ಫೋನ್ ಕಾಲ್‌ಗಳ ಟ್ರಾನ್ಸ್‌ಕ್ರಿಪ್ಷನ್ ತೆಗೆದಿದ್ದರೆ ಬಹುಶಃ ಗುಜರಾತ್ ಪೊಲೀಸರು ತಮ್ಮ ಕೋಡ್ ಭಾಷೆಯಲ್ಲಿ ಕರಿ-ದಾಡಿ ಬಿಳಿ-ದಾಡಿ ಎಂದದ್ದು ಯಾರಿಗೆ ಎಂಬ ಪಕ್ಕಾ ಸಬೂತು ಸಿಗುತ್ತಿತ್ತು. ಇಶ್ರತ್ ಜಹಾನಳದ್ದು ನಕಲಿ ಎನ್‌ಕೌಂಟರ್ ಎಂದು ಸಿಬಿಐ ತನ್ನ ಚಾರ್ಜ್‌ಶೀಟಿನಲ್ಲಿ ಸಹಾ ಸ್ಪಷ್ಟವಾಗಿ ಹೇಳಿದೆ. ಜತೆಗೆ ಸುಪ್ರೀಂ ಕೋರ್ಟ್ ಸಂಘಟಿತ ಎಸ್‌ಐಟಿ ಇದನ್ನೇ ಹೇಳಿದೆ. ಇಷ್ಟಿದ್ದರೂ ಡೇವಿಡ್ ಹೆಡ್ಲಿಯಂತಹಾ ಡ್ರಗ್ ಮಾಫಿಯಾದ ವಂಚಕ ಸದಸ್ಯ ಇಶ್ರತ್ ಜಹಾನ್ ಆತ್ಮಹತ್ಯಾ ಬಾಂಬರ್ ಆಗಿದ್ದಳು ಎಂದು ಊಹಾತ್ಮಕವಾಗಿ ಹೇಳಿದಕ್ಕೆ ಪ್ರಾಮುಖ್ಯತೆ ಕೊಟ್ಟು ನಕಲಿ ಎನ್‌ಕೌಂಟರನ್ನು ಗೌಣವಾಗಿಸುವ ಷಡ್ಯಂತ್ರ



ನಡೆದಿರುವುದು ಸ್ಪಷ್ಟ.

ಮೇಲಾಗಿ ಈಗಿನ ಕೇಂದ್ರ ಸರಕಾರ ಹಾಗೂ ಅ ಪರವಾಗಿರುವ ಕೇಸರಿ ಮೀಡಿಯಾ ಉದ್ದೇಶಪೂರ್ವಕವಾ ಎರಡು ಪ್ರತ್ಯೇಕ ವಿಷಯಗಳನ್ನು ಒಂದರಲ್ಲಿಯೇ ಮಿ ಮಾಡಿ ಜನರ ಹಾದಿ ತಪ್ಪಿಸುವ ಕುತ್ಸಿತ ಆಟ ಆಡುತ್ತಿ ಇಶ್ರತ್ ಜಹಾನ್ ಮತ್ತು ಇತರ ಮೂರು ಗಂಡಸ ಉಗ್ರವಾದಿಗಳಾಗಿದ್ದರು ಎಂಬದು ಒಂದು ಪ್ರತ್ಯೇ ವಿಷಯವಾದರೆ ಪೊಲೀಸರು ಅವರ ಕೈಕಾಲು ಕ ಗುಂಡಿಟ್ಟು ಹತ್ಯೆ ಮಾಡಿರುವುದು ಮತ್ತೊಂದು ಪ್ರತ್ಯೇ ವಿಷಯ. ಇಶ್ರತ್ ಉಗ್ರವಾದಿಯಾಗಿದ್ದಳು ಎಂದು ಹೆ ಹೇಳಿದ್ದಾನೆಯೇ ಹೊರತು ಅವಳನ್ನು ಪೊಲೀಸರು ನೈ ಎನ್‌ಕೌಂಟರಿನಲ್ಲಿ ಕೊಂದರು ಎಂಬ ಮಾಹಿತಿ ತನ ಸಿಕ್ಕಿತ್ತು ಎಂದು ಎಲ್ಲೂ ಹೇಳಿಲ್ಲ. -

ಗುಜರಾತಿನಲ್ಲಿ ಇಷ್ಟೆಲ್ಲಾ ಘೋರ ನಾಟಕ ಆಡಿ ಕರಿ-ಬಿಳಿ ದಾಡಿಗಳು ಈಗ ದಿಲ್ಲಿಯಲ್ಲಿ ಅಂತಹದ್ದೇ ನಕ ವಿಡಿಯೋ ಹಾಗೂ ದಾಖಲೆಗಳನ್ನು ಸೃಷ್ಟಿಸಿ ಜೆಎನ್‌ಯು ವಿದ್ಯಾರ್ಥಿಗಳನ್ನೂ ದೇಶದ್ರೋಹದ ಆಪಾದನೆಯ ಸಿಕ್ಕಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಗುಜರಾತಿನಲ್ಲಿ ನಕ ಸಾಕ್ಷಿಗಳನ್ನು ಹಾಗೂ ನಕಲಿ ದಾಖಲೆಗಳನ್ನು ಸೃಷ್ಟಿಸುವುದರ ಇವರಿಬ್ಬರಿಗೂ 13 ವರ್ಷಗಳ ಭಾರಿ ಅನುಭವವಿದ ಈ ಇಬ್ಬರು ದಾಡಿವಾಲಾಗಳೂ ತಮ್ಮ ನೀಚ ಉದ್ದೇ ಈಡೇರಿಸಿಕೊಳ್ಳಲು ಎಂತಹ ಹೀನ ಮಟ್ಟಕ್ಕೂ ಇಳಿಯ ಬಲ್ಲರು. ಇತ್ತೀಚೆಗೆ ಜೀ ನ್ಯೂಸ್ ಚಾನೆಲ್ಲಿಗೆ ರಾಜೀನಾಮ ಕೊಟ್ಟು ಹೊರಬಂದ ಸುದ್ದಿ ಸಂಪಾದಕ ವಿಶ್ವ ದೀಪ ಬಹಿರಂಗ ಪಡಿಸಿರುವಂತೆ ನಮ್ಮ ದೇಶದ ಎಲ್ಲಾ ಪತ್ರಿಕೆಗ ಹಾಗೂ ಸುದ್ದಿ ಚಾನೆಲ್ಲುಗಳ ಸಂಪಾದಕರ ಕೋಣ ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಗುಹೆಗಳಾಗಿರುವುದು ಈ ಕರಿ ಬಿಳಿ ದಾಡಿಗಳಿಗೆ ತುಂಬಾ ಅನುಕೂಲವಾಗಿದ

-ಅಭಿಷೇಕ್ ಪಡಿವಾಳ್, ಮಂಗಳೂರ

ಬಾಲಸನ್ಯಾಸ ನಿಷೇಧ ಕಾಯಿದೆ ಬರಬೇಕು

ಪೇಜಾವರರು ಮೊನ್ನೆ ತಮ್ಮ ಮಠದ ಒಳಗೆಯೇ ನಡೆದ ಒಂದು ಸಭೆಯಲ್ಲಿ "ರಾಮನು ಶುದ್ಧ ಸಸ್ಯಾಹಾರಿಯಾಗಿದ್ದ. ಆದರೆ ಅವೈದಿಕರ (ಶೂದ್ರರ) ಕುತಂತ್ರದಿಂದಾಗಿ ರಾಮ ಮಾಂಸಾಹಾರಿಯಾಗಿದ್ದ ಎನ್ನುವ ತಪ್ಪು ಭಾವನ ಜನರಲ್ಲಿ ಮೂಡಿದೆ" ಎಂಬ ತಮ್ಮ ಭಯಂಕರ ಸಂಶೋಧನೆಯನ್ನು ಬಯಲುಪಡಿಸಿದ್ದಾರೆ. ಆದರೆ ರಾಮ ಮಾಂಸಾಹಾರಿಯಾಗಿರದಿದ್ದರೆ ಸೀತೆ ಅವನಿಗೆ ಬಂಗಾರದ ಜಿಂಕೆ ಕೊಂದು ತರಲು ಯಾಕೆ ಹೇಳಿದ್ದು ಎಂಬ ಪ್ರಶ್ನೆಗ ಅವರು ಉತ್ತರಿಸಿಲ್ಲ. ಮೇಲಾಗಿ ವನವಾಸದಲ್ಲಿದ್ದಷ್ಟೂ ದಿನ ಲಕ್ಷ್ಮಣನು ಮೊಲ, ಜಿಂಕೆ, ಕಾಡುಹಂದಿ ಕೊಂದು ತಂದು ಸೀತೆಗೆ ಅಡುಗೆ ಮಾಡಲು ಕೊಡುತ್ತಿದ್ದನು ಎಂದು ಮೂಲ ವಾಲ್ಮೀಕಿ ರಾಮಾಯಣ ದಲ್ಲಿಯೇ ಬರೆದಿರು

ಅಪರಾಧಿ ಪ್ರಜ್ಞೆ

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮಾಹಿತಿಗಳನ್ನು ಬ್ರಿಟಿಷ್ ಏಜಂಟರುಗಳಿಗೆ ಒದಗಿಸಿ ದೇಶದ್ರೋಹದ ಕೆಲಸ ಮಾಡಿದವರಲ್ಲಿ ಆರ್‌ಎಸ್‌ಎಸ್‌ನವರೇ ಹೆಚ್ಚು. ಬ್ರಿಟೀಷರಿಗೆ ಪೂಸಿ ಹೊಡೆದು ಅತೀ ಹೆಚ್ಚು ಸರಕಾರಿ ನೌಕರಿಗಳನ್ನು ಹಾಗೂ ಸರಕಾರಿ ಕಾಂಟ್ರ್ಯಾಕ್ಟುಗಳನ್ನು ಪಡೆದುಕೊಂಡವರಲ್ಲಿ ಬ್ರಾಹ್ಮಣ, ಬನಿಯಾ, ಜೈನ, ಕಾಯಸ್ಥ ಮುಂತಾದ ಮೇಲ್ಜಾತಿಯವರೇ ಹೆಚ್ಚು. ಈಗ ನೋಡಿದರೆ ಜೆಎನ್‌ಯು ವಿಷಯದಲ್ಲಿ ದೇಶದ್ರೋಹಿಗಳನ್ನು ಚಚ್ಚಿ ಕೊಲ್ಲಬೇಕೆಂದು ಜಿಗಿದಾಡುವವರಲ್ಲಿ ಬ್ರಿಟೀಷರ ಚೇಲಾಗಳಾಗಿದ್ದ ಈ ಮೇಲ್ಜಾತಿಯವರೇ ಹೆಚ್ಚು. ಇದು ಅವರ ಮನಸ್ಸಿನಲ್ಲಿ ಹಿಂದಿನ ತಲೆಮಾರಿನಿಂದ ಬಳುವಳಿಯಾಗಿ ಬಂದ ದೇಶದ್ರೋಹದ ಪ್ರಜ್ಞಾಫಲ. ಉದಾಹರಣೆಗೆ ಮಹಾರಾಷ್ಟ್ರದಿಂದ ವಲಸೆ ಬಂದು ಉತ್ತರ ಕರ್ನಾಟಕ ಹಾಗೂ ಕರಾವಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ನೆಲೆಸಿರುವ ಮರಾಠಿ ಚಿತ್ಪಾವನ್ ಬ್ರಾಹ್ಮಣರು ಗಾಂಧೀಜಿಯವರ ಹತ್ಯೆಯಾದ ನಂತರ ತಮ್ಮ ಜಾತಿಯನ್ನು ಕೊಂಕಣಿ ಬ್ರಾಹ್ಮಣ ಅಥವಾ ದೇಶಸ್ಥ ಬ್ರಾಹ್ಮಣ ಎಂದು ಸುಳ್ಳು ಹೇಳುತ್ತಿದ್ದರು. ಇದಕ್ಕೆ ಕಾರಣ ಗಾಂಧೀಜಿಯನ್ನು ಕೊಂದ ನಾಥೂರಾಮ್ ಗೋಡ್ಸೆ ಹಾಗೂ ಈ ಷಡ್ಯಂತ್ರದಲ್ಲಿ ಭಾಗಿಯಾಗಿದ್ದ ನಾರಾಯಣ್ ಆಪ್ಟೆ ಮತ್ತು ಸಾವರ್ಕರ್ ಮೂವರೂ ಚಿತ್ಪಾವನ್ ಬ್ರಾಹ್ಮಣರಾಗಿದ್ದದ್ದು. ಇದರಿಂದಾಗಿ ಒಂದು ರೀತಿಯ ಅಪರಾಧಿಪ್ರಜ್ಞೆ ಕಾಡುತ್ತಿದ್ದುದರಿಂದಲೋ ಏನೋ ಅವರು ತಮ್ಮ ನಿಜ ಜಾತಿಯನ್ನೂ ಮುಚ್ಚಿಡುತ್ತಿದ್ದರು. ಆದರೆ ಇತ್ತೀಚಿನ ಎರಡು ವರ್ಷದಿಂದ ಸಂಘ ಪರಿವಾರದೊಳಗೆ ಗೋಡ್ಸೆಯ ವೈಭವೀಕರಣ ಶುರುವಾದ ಮೇಲೆ ಅತೀ ಹೆಚ್ಚು ದೇಶಭಕ್ತಿಯ ನಾಟಕ ಆಡುತ್ತಿರುವುದು ಇದೇ ಚಿತ್ಪಾವನರೇ. ಹೀಗೆಯೇ ಬ್ರಿಟಿಷರ ಕಾಲದಲ್ಲಿ ತಮ್ಮ ಸ್ವಾರ್ಥಕ್ಕಾಗಿ ಬ್ರಿಟಿಷರಿಗೆ ಸಹಾಯ ಮಾಡಿ ದೇಶದ್ರೋಹದ ಪಾಪಪ್ರಜ್ಞೆಯಿಂದ ಬಳಲುತ್ತಿದ್ದ ಎಲ್ಲಾ ಸಮುದಾಯದವರು ಈಗ ಒಮ್ಮೆಲೇ ದೇಶಭಕ್ತರಾಗಿ ಬದಲಾಗಿ ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದ ಅಪರಾಧಿಪ್ರಜ್ಞೆಯನ್ನು ತೊಡೆದುಹಾಕಲು ಪ್ರಯತ್ನಿಸುತ್ತಿದ್ದಾರೆ ಅಷ್ಟೆ. ಈ ನಕಲಿ ದೇಶಭಕ್ತರ ಮಕ್ಕಳೆಲ್ಲಾ ಇಂಗ್ಲೀಷ್ ಮಾಧ್ಯಮದಲ್ಲಿಯೇ ಕಲಿತು ಈಗ ವಿದೇಶದಲ್ಲಿ ಉತ್ತಮ ನೌಕರಿ ಹೊಂದಿ ಅಲ್ಲಿಯೇ ನೆಲೆಸಿ ತಮ್ಮ ದೇಶವನ್ನೇ ಮರೆತಿದ್ದಾರೆ. ಇದಕ್ಕೇ ಹೇಳುವುದು ಕಳ್ಳನೇ ತಾನು ಸಭ್ಯ ಎಂಬಂತೆ ಹೆಚ್ಚು ಓವರ್-ಆಕ್ಟಿಂಗ್ ಮಾಡುವುದು.

ಜೆಎನ್‌ಯುನಲ್ಲಿ ಕನ್ಹಯ್ಯ ಕುಮಾರ್ ಅವರ ವಿದ್ಯಾರ್ಥಿಗಳ ಗುಂಪು ದೇಶದ್ರೋಹದ ಭಾಷಣ ಅಥವಾ ಘೋಷಣೆ ಮಾಡಿಲ್ಲ ಎಂದು ಈಗಾಗಲೇ ಸಾಬೀತಾಗಿದೆ. ಆದರೂ ಕೇವಲ ವಾದಕ್ಕಾಗಿ ಒಂದು ಕ್ಷಣ ಅವರು ದೇಶದ್ರೋಹದ ಭಾಷಣ ಮಾಡಿದ್ದರು ಎಂದೇ ಇಟ್ಟುಕೊಳ್ಳೋಣ. ಇಂಥಾ ದೇಶದ್ರೋಹಿಗಳನ್ನು ಅಭಿನಂದಿಸಿ ಪಾಕಿಸ್ತಾನದ ಉಗ್ರವಾದಿ ಹಫೀಜ್ ಸಯೀದನ ಹೆಸರಲ್ಲಿ ಭಾರತದವರೇ ನಕಲಿ ಟ್ವೀಟ್ ಮಾಡಿದ್ದು ದೇಶದ್ರೋಹಕ್ಕೆ ಬೆಂಬಲ ಹಾಗೂ ಕುಮ್ಮಕ್ಕು ಕೊಟ್ಟಂತೆ ಆಗುವುದಿಲ್ಲವೇ? ನೇರ ಅಥವಾ ಪರೋಕ್ಷವಾಗಿ ದೇಶದ್ರೋಹಿಗಳಿಗೆ ಇನ್ನೂ ಹೆಚ್ಚಿನ ದೇಶದ್ರೋಹ ಮಾಡಲು ಪ್ರಚೋದನೆ ಕೊಡುವುದು ಸಹ ಘೋರ ದೇಶದ್ರೋಹವೇ ಆಗಿದೆ. ಈಗಿನ ಉನ್ನತ ತಂತ್ರಜ್ಞಾನದ ಕಾಲದಲ್ಲಿ ಆ ಟ್ವೀಟರ್‌ನ ಮೂಲ ಕಂಡು ಹಿಡಿದು ಟ್ವೀಟರ್ ಕಳುಹಿಸಿದ ಭಾರತೀಯನ ಮೇಲೆ ತಕ್ಷಣ ದೇಶದ್ರೋಹದ ಪ್ರಕರಣವನ್ನು ದೆಹಲಿ ಪೊಲೀಸರು ಯಾಕೆ ದಾಖಸಲಿಲ್ಲ? ಯಾಕೆಂದರೆ ಇದರ ಮೂಲ ತನಿಖೆಯಾದರೆ ಅದು ಸೀದಾ ಹೋಗಿ ಮುಟ್ಟುವುದು ಆರ್‌ಎಸ್‌ಎಸ್‌ನವರ ಬುಡಕ್ಕೇನೇ. ಹಾಗಾಗಿ ಈ ನಕಲಿ ಟ್ವೀಟರ್ ಖಾತೆ ಬಗ್ಗೆ ತನಿಖೆ ಆಗಲೇ ಇಲ್ಲ.

ಚಂಡೀಗಡದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೇಶಭಕ್ತ ಶಹೀದ್ ಭಗತ್ ಸಿಂಗರ ಹೆಸರು ಇಡಬೇಕೆಂದು 2009 ರಲ್ಲಿಯೇ ನಿರ್ಧಾರವಾಗಿತ್ತು. ಆದರೆ ಇತ್ತೀಚೆಗೆ ಹರಿಯಾಣ ಬಿಜೆಪಿ ಸರಕಾರದ ಮುಖ್ಯಮಂತ್ರಿ ಮನೋಹರ್ ಖಟ್ಟರ್ ತನ್ನದೇ ಬ್ರಾಹ್ಮಣ ಜಾತಿಯ ಆರ್‌ಎಸ್‌ಎಸ್ ಪ್ರಚಾರಕ ದಿವಂಗತ ಮಂಗಲ್ ಸೈನ್ ಎಂಬಾತನ ಹೆಸರನ್ನೇ ಚಂಡೀಗಡ್ ವಿಮಾನ ನಿಲ್ದಾಣಕ್ಕೆ ಇಡಬೇಕೆಂದು ಕೇಂದ್ರ ಸರಕಾರಕ್ಕೆ ಒಂದು ಅಧಿಕೃತ ಪತ್ರವನ್ನೇ ಬರೆದು ಭಾರತದ ಸ್ವಾತಂತ್ರ್ಯಕ್ಕಾಗಿ ಜೀವತೆತ್ತ ಭಗತ್ ಸಿಂಗರಂತಹ ಅಪ್ಪಟ ದೇಶಭಕ್ತನಿಗೇ ಘೋರ ಅವಮಾನ ಮಾಡಿದ್ದಾರೆ. ಸಂಘಪರಿವಾರದ ನಕಲಿ ದೇಶಭಕ್ತರಿಗೆ ಮತ್ತು ಬಿಜೆಪಿ ಪಕ್ಷದವರಿಗೆ ಈ ಬಗ್ಗೆ ಸ್ವಲ್ಪವೂ ನಾಚಿಕೆ ಅಥವಾ ಪಶ್ಚಾತಾಪವಿಲ್ಲ. ಹೀಗಿದೆ ಕೇಸರಿ ಪಡೆಗಳ ನಕಲಿ ದೇಶಭಕ್ತಿಯ ಅಸಲಿ ರೂಪ. ಗೋರಕ್ಷೆ/ಬೀಫ್ ರಾಜಕೀಯವು ಬಿಹಾರ ಮತ್ತು ಇತರ ರಾಜ್ಯಗಳ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿಗೆ ಏನೂ ಲಾಭ ತಂದು ಕೊಡಲಿಲ್ಲ ಎಂಬ ಕಾರಣಕ್ಕೆ ಈಗ ದೇಶಭಕ್ತಿಯನ್ನು ಬಂಡವಾಳ ಮಾಡಿಕೊಂಡು ಮುಂದಿನ ಚುನಾವಣೆಗಳಲ್ಲಿ ಮತದಾರರ ಮನಸ್ಸು ಗೆಲ್ಲುವ ದೂರಗಾಮಿ ಯೋಜನೆ ಬಿಜೆಪಿಯ ರಣನೀತಿಜ್ಞರು ಹೆಣೆದಿರುವಂತಿದೆ.

-ಜೆ. ರವಿಕಿರಣ, ಮೈಸೂರು



ದನ್ನು ಪೇಜಾವರರು ಈ ವಯಸ್ಸಿನಲ್ಲೂ ಓದಿಲ್ಲವೆಂಬುದು ಶ್ಚರ್ಯ.

ಕೃಷ್ಣನು ಅರ್ಜುನನೊಟ್ಟಿಗೆ ಬೇಟೆಗೆ ಹೋದಾಗ ರ್ಜುನ ಕಾಡುಹಂದಿ ಬೇಟೆಯಾಡಿ ತಂದು ಅಡುಗೆ ಾಡಲು ಕೃಷ್ಣನಿಗೆ ಕೊಡುವಾಗ ಬೇಡನ ರೂಪ ಧರಿಸಿದ್ದ ವನೊಟ್ಟಿಗೆ ಆ ಹಂದಿಗಾಗಿ ಯುದ್ಧವಾಗಿ ಅರ್ಜುನ ೋತದ್ದು "ಶ್ರೀಶೈಲ ಮಹಾತ್ಮೆ" ಕಥೆಯಲ್ಲಿ ಲ್ಲೇಖಿಸಲಾಗಿದೆ. ಇದಾವುದನ್ನೂ ಓದದೇ ಪೇಜಾವರರು ಾಮ, ಕೃಷ್ಣ ಅಥವಾ ವೈದಿಕರು ಪುರಾಣ ಕಾಲದಲ್ಲಿ ಾಂಸಾಹಾರ ಸೇವಿಸುತ್ತಿರಲಿಲ್ಲ ಎಂದು ಸಾಬೀತು ಾಡುವುದಾಗಿ ಮತ್ತೆ ಎಂದಿನಂತೆ ಹೈಸ್ಕೂಲು ಪೋರನ ೀತಿ ಚಾಲೆಂಜ್ ಮಾಡಿದ್ದಾರೆ.

ಆದರೆ ಯೋಗಾಯೋಗ ಎಂಬಂತೆ ಅದೇ ದಿನ 9-2-2016) ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಕನ್ನಡದ ರಿಯ ಸಾಹಿತಿ ಹಾಗೂ ಹಿಂದೂತ್ವವಾದಿಗಳ ಮುದ್ದಿನ ಂಶೋಧಕರಾದ ಎಸ್.ಎಲ್.ಭೈರಪ್ಪನವರ ಸಂದರ್ಶನ ಕಟವಾಗಿದ್ದು, ಅದರಲ್ಲಿ ಅವರು ಹಿಂದಿನ ಕಾಲದಲ್ಲಿ ೖದಿಕರೂ ಮಾಂಸ ಸೇವಿಸುತ್ತಿದ್ದರು ಹಾಗೂ ಜೈನ ಧರ್ಮದ ಭಾವದಿಂದ ಕ್ರಮೇಣ ವೈದಿಕರು ಸಸ್ಯಾಹಾರಿಗಳಾದರು ಂದು ಸ್ಪಷ್ಟವಾಗಿ ಹೇಳಿದ್ದಾರೆ. ಕೊನೆಗೂ ಹಿಂದೂತ್ವವಾದಿ ಳು ಅತ್ಯಂತ ಹೆಚ್ಚು ಗೌರವಿಸುವ ಬ್ರಾಹ್ಮಣ ಸಾಹಿತಿ ೖರಪ್ಪನವರೆ ವೈದಿಕರು ಮೂಲತಃ ಮಾಂಸಾಹಾರಿಗ ಾಗಿದ್ದರು ಎಂದು ಹೇಳಿದ ಮೇಲೆ ಅದನ್ನು ನಿರಾಕರಿಸಲು ಾವ ಬ್ರಾಹ್ಮಣನಿಗೂ ಸಾಧ್ಯವಿಲ್ಲ. ಇನ್ನು ಮುಂದಾದರೂ ೇಜಾವರ ಶ್ರೀ ಸಹಿತ ಎಲ್ಲಾ ವೈದಿಕರು ತಮ್ಮ ಪೂರ್ವ ರು ಮಾಂಸಾಹಾರಿಗಳಾಗಿರಲಿಲ್ಲ ಎಂಬ ವಿತಂಡವಾದ ಾಡುವುದನ್ನು ನಿಲ್ಲಿಸುತ್ತಾರೆ ಎಂದು ಭಾವಿಸೋಣವೇ?

. ಅದೇ ಸಭೆಯಲ್ಲಿ ಯಾರೋ ಒಬ್ಬ ಅರೆಪಂಡಿತ ಸ್ಕೃತದಲ್ಲಿ ಮಾಂಸ ಎಂದರೆ ಹಣ್ಣು-ಹಂಪಲೆಂಬ ಅರ್ಥವೂ ದೆ, ರಾಮ-ಕೃಷ್ಣ ಮಾಂಸ ತಿಂದರು ಎಂದರೆ ಅವರು ಣ್ಣು ಹಂಪಲ ತಿಂದರು ಎಂಬ ಅರ್ಥವೂ ಆಗುತ್ತದೆ ಂದು ತನ್ನ ಭಯಂಕರ ಸಂಸ್ಕೃತ ಜ್ಞಾನ ಪ್ರದರ್ಶಿಸಿದ್ದಾನೆ. ಂತಹಾ ಕುಜ್ಞಾನ ಮತ್ತು ಶಬ್ದಗಳ ಸರ್ಕಸ್ ಪ್ರದರ್ಶಿಸಿಯೇ ೂದ್ರರನ್ನು ಈ ವೈದಿಕರು ಶತಮಾನಗಳಿಂದ ಪೆದ್ದರನ್ನಾಗಿ ಾಡಿರುವುದು.

ಬಹುಶಃ ಅನುಕರಿಸಿರಲೂಬಹುದು. ಇದನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಸತ್ಯ ನುಡಿದದ್ದು ಮಾತ್ರ ಅಲ್ಲಿದ್ದ ಅಷ್ಟ ಮಠಾಧೀಶರಿಗೆ ಮತ್ತು ಶಿಷ್ಯೋತ್ತಮರಿಗೆ ಪಥ್ಯವಾಗಲಿಲ್ಲವಂತೆ.

ನಮ್ಮ ಪ್ರಚಂಡ ಸಂಶೋಧಕ ಪೇಜಾವರರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕರಿಸಿದ್ದರು. ಸನ್ಯಾಸ ಮತ್ತು ಸಂಸಾರ ಎರಡರ ಅರ್ಥವೂ ಗೊತ್ತಿಲ್ಲದ ಎಳೇ ಹುಡುಗು ಪ್ರಾಯವದು. ಅವರು ಬೆಳೆದು ಪ್ರಾಯಕ್ಕೆ ಬಂದಾಗ ಖಾವಿಯ ಶರಪಂಜರದಲ್ಲಿ ಸಿಕ್ಕಿ ಬಿದ್ದಾಗಿತ್ತು. ತಾರುಣ್ಯದಲ್ಲಿ ಈ ಶರಪಂಜರದಿಂದ ಹೊರಬರುವ ಮನಸ್ಸಿದ್ದರೂ ಸಮಾಜ ಅದನ್ನು ಒಪ್ಪುತ್ತಿರಲಿಲ್ಲವಾದುದರಿಂದ ಎಲ್ಲಾ ಬಾಲಬ್ರಹ್ಮಚಾರಿ ಸನ್ಯಾಸಿಗಳು ತಾರುಣ್ಯಕ್ಕೆ ಬಂದಾಗ ಮನಸ್ಸು ಎಷ್ಟೇ ಚಂಚಲವಾದರೂ ನಿಸ್ಸಹಾಯಕರಾಗಿ ಚಿನ್ನದ ಪಂಜರದಲ್ಲಿಯೇ ಮುಂದುವರಿಯುವುದು ಅನಿವಾರ್ಯವಾಗುತ್ತದೆ. ಕೇವಲ ಸಂಗೀತಗಾರ ವಿದ್ಯಾಭೂಷಣರಂತಹ ಪ್ರಚಂಡ ಮನೋಬಲ ಹಾಗೂ ಭಾರಿ ಇಚ್ಛಾಶಕ್ತಿ ಇದ್ದವರು ಮಾತ್ರ ಇಂತಹ ಚಿನ್ನದ ಪಂಜರ ಮುರಿದು ಹೊರಬಂದು ಸಮಾಜವನ್ನು ಧೈರ್ಯದಿಂದ ಎದುರಿಸಲು ಸಾಧ್ಯ. ಹೀಗೆ ಒಮ್ಮೆ ವೈದಿಕ ಮಠದ ಆಳ ಪಂಜರದಲ್ಲಿ ಬಂಧಿಯಾದವರು ನಂತರ ಅಲ್ಲಿಯ ರೀತಿ ನೀತಿಗಳನ್ನು ಅರಗಿಸಿಕೊಂಡು, ಹಿರಿಯ ಯತಿಗಳು ಕಲಿಸಿದಷ್ಟೇ ಆಧ್ಯಾತ್ಮ ಹಾಗೂ ಇತರ ಧಾರ್ಮಿಕ ವಿಷಯಗಳ ಸೀಮಿತ ಜ್ಞಾನ ಪಡೆದು ಅದನ್ನೇ ಜೀವನವಿಡೀ ಎಲ್ಲಾ ಸಭೆಯಲ್ಲಿ ಒಪ್ಪಿಸುತ್ತಾ ಇರಬೇಕಾಗುತ್ತದೆ. ಈ ಪೃಥ್ವಿ ಈಗಲೂ ಏಳು ಹೆಡೆಯ ಆದಿಶೇಷನ ತಲೆಯ ಮೇಲೆಯೇ ನಿಂತಿದೆ ಎಂದು ಪೇಜಾವರರು ಮೊನ್ನೆ ಹೇಳಲು ಇದೇ ಅವೈಜ್ಞಾನಿಕ ಮನಸ್ಥಿತಿ ಕಾರಣ. ಕನ್ನಡ ಬಿಟ್ಟು ಬೇರೆ ಯಾವುದೇ ಭಾಷೆ ಗೊತ್ತಿಲ್ಲದ ಹಾಗೂ ಟಿವಿ ನೋಡದ, ಧಾರ್ಮಿಕ ಪುಸ್ತಕಗಳನ್ನು ಬಿಟ್ಟು ಬೇರೆ ಸಾಮಾನ್ಯ ನಿಯತಕಾಲಿಕೆಗಳನ್ನೂ ಓದದ ವೈದಿಕ ಮಠಾಧೀಶರಿಗೆ ಯಾವ ಸಾಮಾನ್ಯ ಜ್ಞಾನವೂ ಇರುವುದಿಲ್ಲ. ಬಹುಶಃ ಅದಕ್ಕೇ ಇರಬೇಕು, ಯಾರೋ ಆಂಧ್ರದ ರೆಡ್ಡಿ ಆರುನೂರು ಕೋಟಿ ರೂಪಾಯಿ ಮಠಕ್ಕೆ ದಾನ ಕೊಡುತ್ತೇನೆ ಎಂದು ಬೂಸಿ ಬಿಟ್ಟಾಗ ಸ್ವಾಮಿಗಳು ಎಂಜಲು ಸುರಿಸಿದ್ದು ಹಾಗೂ ನೀರಾ ರಾಡಿಯಾಳಂತಹ ಪವರ್ ಬ್ರೋಕರಳನ್ನು ಸಂತ



ಮೀರಾಬಾಯಿ ಎಂದು ಬಿರುದು ಕೊಟ್ಟು ಸನ್ಮಾನಿಸಿದ್ದು!

ಆದರೆ ಈ ಕಂಪ್ಯೂಟರ್ ಯುಗದಲ್ಲಿ ಎಲ್ಲರನ್ನು ಲ್ಲಾ ಕಾಲಕ್ಕೂ ಪೆದ್ದು ಮಾಡುವುದು ಸಾಧ್ಯವಿಲ್ಲ. ಕಾರಣ ೀಗ ಎಲ್ಲಾ ತರಹದ ಜ್ಞಾನ ಇಂಟರ್ನೆಟ್ಟಿನಲ್ಲಿ ಲಭ್ಯವಿದೆ. ಟಿಷ್ ಶಿಕ್ಷಣ ತಜ್ಞ ಮೆಕಾಲೆ ಶೂದ್ರರಿಗೆ ಅಕ್ಷರ ಜ್ಞಾನದ ಾಗಿಲು ತೆರೆದ ಎಂಬ ಒಂದೇ ಕಾರಣಕ್ಕೆ ವೈದಿಕರು ಕಾಲೆಯನ್ನು ದ್ವೇಷಿಸಿದಂತೆ ಇನ್ನು ಇಂಟರ್ನೆಟ್ ಕಂಡು ಡಿದವನನ್ನೂ ವೈದಿಕರು ದ್ವೇಷಿಸಬಹುದು. ಕಾರಣ ಇಂಟರ್ನೆಟ್ ನಿಜವಾದ ಜ್ಞಾನವನ್ನು (ಕೆಲವೊಮ್ಮೆ ೖದಿಕ ವೆಬ್‌ಸೈಟುಗಳ ಮುಖಾಂತರ ಕುಜ್ಞಾನವನ್ನೂ) ೂದ್ರ ಮುಂಡೇವುಗಳಿಗೆ ನೀಡಿ ವೈದಿಕರ ಹುಳುಕನ್ನೆಲ್ಲಾ ೂದ್ರರ ಎದುರು ಕ್ಷಣ ಮಾತ್ರದಲ್ಲಿ ತೆರೆದಿಡುತ್ತಿದೆ. ಪುರಾಣ ಒಗಟನ್ನು ಹಾಗೂ ಸಂಕೇತಗಳ ಗುಟ್ಟನ್ನು ರಟ್ಟು ಾಡುತ್ತಿರುವ ಇಂಟರ್ನೆಟ್ ಸಹಾ ಕ್ರೈಸ್ತ ಮಿಷಿನರಿಗಳ ತ್ಯಂತ್ರದ ಒಂದು ಸಾಧನ ಎಂದು ವೈದಿಕರು ದೂಷಿಸುವ ನ ದೂರವಿಲ್ಲ.

ನಂತರದಲ್ಲಿ ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಗ್ರಿ ಘವೇಂದ್ರ ಭಟ್ ಮಾತನಾಡಿ ರಾಮನು ಕ್ಷತ್ರಿಯನಾಗಿ ುಟ್ಟಿದ್ದರಿಂದ ಆಗಿನ ಕಾಲದ ಸಮಾಜದ ರೀತಿ ನೀತಿಗೆ ನುಗುಣವಾಗಿಯೇ ಮಾಂಸಾಹಾರ- ಸುರಾಪಾನ-


ಉಡುಪಿ ಮಠದ ಪರ್ಯಾಯ ಅವಧಿಯಲ್ಲಿ ಪೇಜಾವರರು ಮಠದಿಂದ ಹೊರಗೆ ಬರುವ ಹಾಗಿಲ್ಲವಾದು ದರಿಂದ ಅವರ ಅಸಂಬದ್ಧ ಸಂಶೋಧನೆ ಮತ್ತು ಪ್ರಚಂಡ ಕುಜ್ಞಾನಗಳ ಪ್ರದರ್ಶನದ ಶಿಕ್ಷೆಯಿಂದ ಹಾಗೂ ಬಾಲಿಶ ಚಾಲೆಂಜುಗಳಿಂದ ನಮ್ಮಂತಹ ಪಾಪಿಗಳು ಪಾರಾದರು ಎಂದು ನಾವು ಖುಷಿಯಾಗಿದ್ದೆವು. ಆದರೆ ಈಗ ನೋಡಿದರೆ ಪತ್ರಕರ್ತರನ್ನೇ ಮಠಕ್ಕೆ ಕರೆಸಿ ತಮ್ಮ ಅದ್ಭುತ ಸಂಶೋಧನೆಗಳನ್ನು ಮತ್ತು ಭೀಷಣ ಜ್ಞಾನವನ್ನು ಪೇಜಾವರರು ಹಂಚತೊಡಗಿರುವುದು ಹೋದೆಯಾ ಆಚೆಯೆಂದರೆ ಬಂದೆ ಈಚೆ ಗವಾಕ್ಷಿಯೊಳಗೆ ಎಂಬಂತಾಗಿದೆ.

ಮಕ್ಕಳ ಹಕ್ಕು ಹಾಗೂ ಬಾಲನ್ಯಾಯ ಕಾಯ್ದೆಯಡಿ ಎಳೆಯ ಮಕ್ಕಳನ್ನು ಬಾಲ ಸನ್ಯಾಸಿ ಮಾಡಿ ಯಾವುದೇ ಮಠದ ಉತ್ತರಾಧಿಕಾರಿ ಮಾಡುವುದನ್ನು ನಿಷೇಧಿಸ ಬಹುದೋ ಎಂಬುದನ್ನೂ ಅಖಿಲ ಭಾರತ ಬಾಲನ್ಯಾಯ ಸಮಿತಿ ಪರಿಶೀಲಿಸಬೇಕು. ಇಪ್ಪತ್ತೈದು ವರ್ಷ ದಾಟಿದವರು ಅಥವಾ ಸ್ವಂತ ವಿವೇಚನಾ ಶಕ್ತಿ ಬೆಳೆಸಿಕೊಂಡು ಸನ್ಯಾಸ ಮತ್ತು ಸಂಸಾರದ ಇತಿಮಿತಿಗಳನ್ನು ಅರ್ಥ ಮಾಡಿಕೊಳ್ಳಬಲ್ಲ ವಯಸ್ಸಿನವರು ಮಾತ್ರ ಸನ್ಯಾಸ ಸ್ವೀಕರಿಸಿ ಮಠಾಧೀಶರಾ ಗಬಹುದು ಎಂಬ ನಿಯಮ ಬರಬೇಕು. ಮಠದಲ್ಲಿ ಭಕ್ತರು ಚಾಕ್ಲೇಟು ಸಿಹಿ ತಿಂಡಿ ಕೊಡಬಹುದು ಎಂಬ ಆಸೆಯಿಂದ ಸನ್ಯಾಸ ಸ್ವೀಕರಿಸುವ ಏಳೆಂಟು ವರ್ಷ ಪ್ರಾಯದ ಬಡಮಕ್ಕಳಿಗೆ ಸನ್ಯಾಸ ದೀಕ್ಷೆ ಕೊಡುವುದನ್ನು ನಿಷೇಧಿಸಬೇಕು.

- ಆರ್. ಬಿ. ಶೇಣವ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

ಕಾಗೆ ಬಂಗಾರಕ್ಕೆ ಹೊಳಪು ನೀಡುತ್ತಿರುವ ಸೂರಿ



ಕಮರ್ಷಿಯಲ್ ಸಿನಿಮಾಗಳ ಜತೆ ಜತೆಗೆ ಕಲಾತ್ಮಕ ಚಿತ್ರಗಳಿಗೂ ಆ್ಯಕ್ಷನ್ ಕಟ್ ಹೇಳುವ ಕಲೆ ನಿರ್ದೇಶಕ ದುನಿಯಾ ಸೂರಿಗಿದೆ. ಹೀಗಾಗಿಯೇ ಅವರ 'ಕೆಂಡಸಂಪಿಗೆ'ಯಂತಹ ಸಿನಿಮಾ ಕೂಡ ಶತದಿನ ಕಾಣುತ್ತದೆ.

ಕಲಾತ್ಮಕ ಸಿನಿಮಾ ನಿರ್ದೇಶಕರು ಅಪ್ಪಿತಪ್ಪಿಯೂ ಕಮರ್ಷಿಯಲ್ ಸಿನಿಮಾಗಳತ್ತ ಮುಖ ಮಾಡುವುದಿಲ್ಲ. ಕಲಾತ್ಮಕ ಸಿನಿಮಾಗಳೆಂದರೆ ಕೆಲವರಿಗೆ ಅಸಡ್ಡೆ. ಇವೆರಡೂ ರೀತಿಯ ಸಿನಿಮಾ ಮಾಡಿ ಗೆದ್ದವರು ನಿರ್ದೇಶಕ ದುನಿಯಾ ಸೂರಿ. ಇಂತಹ ನಿರ್ದೇಶಕರು ಕನ್ನಡದಲ್ಲಿ ಅಪರೂಪ. ಇವರ ನಿರ್ದೇಶನದ 'ಕೆಂಡಸಂಪಿಗೆ' ಚಿತ್ರವು ಮೊನ್ನೆಯಷ್ಟೇ ಶತದಿನ ಪೂರೈಸಿದೆ. ಜತೆಗೆ ಪುನೀತ್‌ಗಾಗಿ ಮತ್ತೊಂದು ಸಿನಿಮಾ ಮಾಡುತ್ತಿದ್ದಾರೆ ಸೂರಿ. ಅಲ್ಲದೇ ಹೊಸಬರ ಜೊತೆ ಇನ್ನೊಂದು ಸಿನಿಮಾದ ತಯಾರಿ ಕೂಡ ನಡೆಸಿದ್ದಾರೆ. ಈ ಎಲ್ಲದರ ಕುರಿತು ಅವರು ಮಾತಾಡಿದ್ದಾರೆ.

** 'ಕೆಂಡಸಂಪಿಗೆ' ಸಿನಿಮಾ ಶತದಿನ ಕಂಡಿದೆ. ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದೆಯಾ?*

ಬಾಕ್ಸ್ ಆಫೀಸ್ ಒಂದೇ ಗೆಲುವಿನ ಮಾನದಂಡವಲ್ಲ. ಹಾಗಂತ ನನ್ನ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೋತಿದೆ ಅಂತ ನಾನು ಹೇಳಲ್ಲ. ನೂರು ದಿನ ಕಂಡಿದೆ ಅಂದರೆ, ಅದು ಹಣದಲ್ಲೂ ಗೆದ್ದಿದೆ ಅಂತಾನೇ ಅರ್ಥ. ಈ ಸಿನಿಮಾದಿಂದ ನನಗೆ ದುಡ್ಡು ಬಂದಿದೆ, ಖುಷಿಯೂ ಸಿಕ್ಕಿದೆ. ಹೊಸ ರೀತಿಯ ಸಿನಿಮಾಗಳನ್ನು ಪ್ರೇಕ್ಷಕರು ಮತ್ತು ಇಂಡಸ್ಟ್ರಿ ಚೆನ್ನಾಗಿಯೇ ತಗೆದುಕೊಂಡಾಗ ಖಂಡಿತಾ ಸಂಭ್ರಮ ಆಗುತ್ತದೆ. ಈ ಸಿನಿಮಾ ಅಂಥದ್ದನ್ನು ನನಗೆ ಕೊಟ್ಟಿದೆ.

** 'ಕೆಂಡಸಂಪಿಗೆ' ಸಿನಿಮಾಗಿಂತ ಮೊದಲೇ 'ದೊಡ್ಮನೆ ಹುಡುಗ' ಚಿತ್ರ ರಿಲೀಸ್ ಆಗಬೇಕಿತ್ತು. ತಡವಾಗಿದ್ದು ಯಾಕೆ?*

ಹಲವು ಕಾರಣಗಳಿಂದಾಗಿ ತಡವಾಗಿದ್ದು ನಿಜ. ಇನ್ನೂ ಎರಡು ಹಾಡುಗಳ ಶೂಟಿಂಗ್ ಮಾಡಬೇಕು. ಆನಂತರವೇ 'ದೊಡ್ಮನೆ ಹುಡುಗ' ಸಿನಿಮಾ ರಿಲೀಸ್ ಆಗುತ್ತಿದೆ. ಅದಕ್ಕಿಂತ ಮುಂಚೆ ಪುನೀತ್ ಅವರ ಮತ್ತೊಂದು ಚಿತ್ರ 'ಚಕ್ರವ್ಯೂಹ' ಬಿಡುಗಡೆಯಾಗುತ್ತದೆ. ಸಿನಿಮಾ ಮಾಡುವಾಗ ಒಂದಿಷ್ಟು ಹೆಚ್ಚು ಕಡಿಮೆ ಆಗುತ್ತದೆ. ಅದಕ್ಕೆ ನಾವೆಲ್ಲರೂ ಅನುಸರಿಸಿಕೊಂಡು ಹೋಗಬೇಕು.

** 'ದೊಡ್ಮನೆ ಹುಡುಗ' ಯಾವ ರೀತಿಯ ಸಿನಿಮಾ? ಪುನೀತ್ ಪಾತ್ರ ಎಂಥದ್ದು?*

ನಾನು ಈವರೆಗೂ ಫ್ಯಾಮಿಲಿ ವಿಷಯದ ಮೇಲೆ ಸಿನಿಮಾ ಮಾಡಿರಲಿಲ್ಲ. ಇದೇ ಮೊದಲ ಬಾರಿಗೆ ಇಂಥದ್ದೊಂದು ಕತೆಯನ್ನು ಎತ್ತಿಕೊಂಡಿದ್ದೇನೆ. ಹೀಗಾಗಿ ಎಲ್ಲಾ ಪಾತ್ರಗಳನ್ನೂ ನಾಜೂಕಾಗಿಯೇ ಕಟ್ಟಿದ್ದೇನೆ. ಇದು ಪಕ್ಕಾ ಎಂಟರ್‌ಟೈನ್‌ಮೆಂಟ್ ಸಿನಿಮಾ ಆಗಿದ್ದರಿಂದ ಕತೆಗಾಗಿ ಸಾಕಷ್ಟು ತಲೆ ಕೆಡಿಸಿಕೊಂಡೆ. ಪುನೀತ್ ವಿಶೇಷ ಪಾತ್ರ ಮಾಡಿದ್ದಾರೆ. ನನ್ನ ಸಿನಿಮಾದಲ್ಲಿ ಬಂದ ಈವರೆಗಿನ ನಾಯಕರ ಪಾತ್ರಗಳಿಗಿಂತ ಇದು ವಿಭಿನ್ನವಾಗಿದೆ. ಪುನೀತ್ ಮತ್ತು ರಾಧಿಕಾ ನಡುವಿನ ಪ್ರೀತಿಯ ಸನ್ನಿವೇಶಗಳು ತುಂಬಾ ಮುದ್ದಾಗಿವೆ.

** ಸಾಮಾನ್ಯವಾಗಿ ಪ್ರಯೋಗಾತ್ಮಕ ಸಿನಿಮಾಗಳನ್ನು ಮಾಡುವಾಗ ನೀವು ಜನಪ್ರಿಯತೆಯ ಹಿಂದೆ ಹೋಗುವುದಿಲ್ಲ; ಆದರೆ, ಬಿಗ್‌ಬಾಸ್ ಶೋ ಮುಗಿಸಿ ಬಂದಿರುವ ಚಂದನ್‌ಗಾಗಿ ಕಾಯುತ್ತಿದ್ದೀರಿ ಅನ್ನುವ ಮಾತಿದೆ?*

ಚಂದನ್ ಬಗ್ಗೆ ಏನೋ ಕಂಡುಕೊಂಡೆ. ಅವರಲ್ಲಿ ಒಂದು ಫಯರ್ ಇದೆ. ನಾನು ನನ್ನ ಕತೆಗೆ ಎಂತಹ ಹೀರೋ ಬೇಕು ಅಂದುಕೊಳ್ಳುತ್ತಿದ್ದೇನೋ ಅದೇ ರೀತಿಯಲ್ಲೇ ಇದ್ದಾರೆ ಚಂದನ್. ಹೀಗಾಗಿ ಅವರಿಗಾಗಿ ಒಂದು ಸಿನಿಮಾ ಮಾಡಬೇಕು ಅಂತ ಅನಿಸಿತು. ಇನ್ನೂ ಯಾವುದೂ ನಿರ್ಧಾರ ಆಗಿಲ್ಲ, ಮಾತುಕತೆ ಹಂತದಲ್ಲಿದೆ. ನಾನೊಂದು ಮಾಸ್ ಕತೆ ಮಾಡಿಕೊಂಡಿದ್ದೇನೆ. ಈ ಕತೆಯ ನಾಯಕನ ಪಾತ್ರಕ್ಕೆ ಚಂದನ್ ಹೋಲುತ್ತಾರೆ ಅನಿಸಿತು. ಅಲ್ಲದೇ ನಿರ್ಮಾಪಕರು ಕೂಡ ಒಪ್ಪಿದ್ದಾರೆ.

** ಮಾಸ್ ಸಿನಿಮಾ ಅಂದರೆ ಹೇಗಿರುತ್ತದೆ? ಪಕ್ಕಾ ರೌಡಿಸಂ ಹಿನ್ನೆಲೆಯ ಕತೆಯಾ?*


ರೌಡಿಸಂ ಅಂತಲ್ಲ, ಇದು ಪಕ್ಕಾ ಲವ್ ಸ್ಟೋರಿ. ಅದರಲ್ಲಿ ಸಾಕಷ್ಟು ಮಾಸ್ ಅಂಶಗಳು ಇರುತ್ತವೆ. ಮಾಸ್ ಅನ್ನುವುದಕ್ಕೂ ಹಲವು ಅರ್ಥಗಳಿವೆ. ಈ ಕುರಿತು ಸದ್ಯ ಏನೂ ಹೇಳಲಾರೆ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಆಗ ಖಂಡಿತಾ ಹೇಳುತ್ತೇನೆ.

** ಸದ್ಯ ನೀವು 'ಕಾಗೆ ಬಂಗಾರ' ಸಿನಿಮಾದ ಕೆಲಸದಲ್ಲಿ ತೊಡಗಿದ್ದೀರಿ. ಈ ಸಿನಿಮಾದ ಕತೆ ಏನು?*

'ಕೆಂಡಸಂಪಿಗೆ' ಸಿನಿಮಾದಲ್ಲಿ ಗಿಣಿಮರಿ ಕತೆ ನೋಡಿದ್ದೀರಿ. 'ಕಾಗೆ ಬಂಗಾರ'ದಲ್ಲಿ ಅದರ ಪ್ಯಾರಲಲ್ ಆಗಿ ಏನು ನಡೀತು ಅನ್ನುವುದನ್ನು ಹೇಳುತ್ತಿದ್ದೇನೆ. ಈ ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ 'ಕೆಂಡಸಂಪಿಗೆ'ಯ ಹೀರೊ ಮತು ಹೀರೊಯಿನ್ ಈ ಕತೆಯಲ್ಲೂ ಕಾಣಿಸಿಕೊಳ್ಳುತ್ತಾರೆ. ಅದು ಹೇಗೆ ಅನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಈ ಸಿನಿಮಾದಲ್ಲಿ ಸಿದ್ದಿ ಪಾತ್ರ ಮುಖ್ಯ ಪಾತ್ರವಾಗಲಿದೆ. ಹೀರೋ ಅಂತೇನೂ ಇಲ್ಲಿ ಯಾರೂ ಇಲ್ಲ, ನಾಲ್ಕೈದು ಪ್ರಮುಖ ಪಾತ್ರಗಳಿವೆ.

** ಕಮರ್ಷಿಯಲ್ ಸಿನಿಮಾ ಇಷ್ಟವಾಗುತ್ತಾ ಅಥವಾ ಕಲಾತ್ಮಕ ಸಿನಿಮಾ ನಿಮಗೆ ಇಷ್ಟನಾ?*

ಹೊಟ್ಟೆನೂ ತುಂಬಬೇಕು, ಮನಸ್ಸಿಗೆ ಖುಷಿಯೂ ಆಗಬೇಕು. ಯಾವ ಸಿನಿಮಾದಲ್ಲಿ ಏನು ಸಿಗುತ್ತದೆ ಅನ್ನುವುದನ್ನು ನಾನು ಯೋಚಿಸುತ್ತೇನೆ. ಹಾಗಾಗಿ ಆಯಾ ಟೈಮ್‌ಗೆ ಅಂತಹ ಕತೆಗಳನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಸಿನಿಮಾ ಜರ್ನಿಯ ಜತೆ ಬದುಕಿನ ಪಯಣವೂ ಸಾಗಬೇಕು ಅಲ್ಲವೇ? ■



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 09-03-2016


ಹರಿಪ್ರಿಯಾ

ಡಿಂಪಲ್ ಚೆಲುವೆಯರ ಸಂಗಮ

'ರನ್ನ' ಸಿನಿಮಾದಲ್ಲಿ ಹರಿಪ್ರಿಯಾ ಮತ್ತು ರಚಿತಾ ರಾಮ್ ಒಂದಾಗಿದ್ದರು. ಈ ಇಬ್ಬರ ಕೆನ್ನೆಗುಳಿ ನಗು ಪ್ರೇಕ್ಷಕರನ್ನು ಸಖತ್ ಮೋಡಿ ಮಾಡಿತ್ತು. ಹೀಗಾಗಿ ಧ್ರುವ ಸರ್ಜಾ ನಟನೆಯ 'ಭರ್ಜರಿ' ಸಿನಿಮಾದಲ್ಲೂ ಈ ಜೋಡಿ ಒಂದಾಗಿದೆ. ಅದಕ್ಕೆ ಕಾರಣ ಮತ್ತದೇ ಡಿಂಪಲ್ ಕಹಾನಿ.

'ಭರ್ಜರಿ' ಸಿನಿಮಾದ ಕತೆಯೇ ಹಾಗಿದೆ. ನಾಯಕಿಯ ಪಾತ್ರದ ಜತೆಗೆ ಇನ್ನೆರಡು ನಾಯಕಿಯರ ಪಾತ್ರಗಳಿಗೂ ಡಿಂಪಲ್ ಕೆನ್ನೆಯೇ ಬೇಕಿತ್ತಂತೆ. ಹೀಗಾಗಿ ಹರಿಪ್ರಿಯಾರನ್ನು ನಟಿಸುವಂತೆ ಕೇಳಿದ್ದಾರೆ ನಿರ್ದೇಶಕರು. ಹರಿಪ್ರಿಯಾ ಒಪ್ಪಿಯೂ ಆಗಿದೆ. ಶೂಟಿಂಗ್‌ನಲ್ಲೂ ಪಾಲ್ಗೊಂಡಿದ್ದಾರೆ. ಮತ್ತೊಂದು ಕೆನ್ನೆಗುಳಿ ಹುಡುಗಿಗಾಗಿ ನಿರ್ದೇಶಕರು ಹುಡುಕುತ್ತಿದ್ದಾರೆ.

"ಈಗಾಗಲೇ ನಾನು ರಚಿತಾ ಜತೆ ಸ್ಕ್ರೀನ್ ಹಂಚಿಕೊಂಡಿದ್ದೇನೆ. ಅವರು ಕೂಡ ಉತ್ತಮ ನಟಿ. ಹಾಗಂತ 'ಭರ್ಜರಿ' ಸಿನಿಮಾದಲ್ಲಿ ನನ್ನದು ನಾಯಕಿಯ ಪಾತ್ರವಲ್ಲ, ಇಂಪಾರ್ಟೆಂಟ್ ಆಗಿರುವ ಕ್ಯಾರೆಕ್ಟರ್ ಅಷ್ಟೆ. ಹೀಗಾಗಿಯೇ ಒಪ್ಪಿಕೊಂಡೆ. ಇದೇ ಮೊದಲ ಬಾರಿಗೆ ಧ್ರುವ ಜತೆ ನಟಿಸುತ್ತಿದ್ದೇನೆ. ತೆರೆಯ ಮೇಲೆ ಹೇಗೆ ಕಾಣುತ್ತೇನೆ ಅನ್ನುವ ಕುತೂಹಲವೂ ನನಗಿದೆ" ಅಂತಾರೆ ಹರಿಪ್ರಿಯಾ.

ಡಿಂಪಲ್ ಕೆನ್ನೆ ಅನ್ನುವ ಕಾರಣಕ್ಕೆ ರಚಿತಾ ರಾಮ್ ಅವರನ್ನು ಹಲವು ಚಿತ್ರಗಳಿಂದ ಕೈಬಿಟ್ಟ ಸುದ್ದಿಯೂ ಇದೆ. ಈಗ ಅದೇ ಕೆನ್ನೆಗೆ ಸಖತ್ ಡಿಮಾಂಡ್ ಕ್ರಿಯೇಟ್ ಆಗಿದೆ.


ರಚಿತಾ ರಾಮ್

ಶಿವಣ್ಣ ರಾಬಿನ್ ಹುಡ್

ಪಿ.ವಾಸು ನಿರ್ದೇಶನದ 'ಶಿವಲಿಂಗ' ಸಿನಿಮಾ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಇದೇ ಮೊದಲ ಬಾರಿಗೆ ಶಿವರಾಜ್‌ಕುಮಾರ್ ಈ ಚಿತ್ರದಲ್ಲಿ ಸಿಬಿಐ ಆಫೀಸರ್ ಪಾತ್ರದಲ್ಲಿ ಮಿಂಚಿದ್ದಾರೆ. ವಾಸು ಮತ್ತು ಶಿವಣ್ಣ ಕಾಂಬಿನೇಷನ್‌ಗೆ ಪ್ರೇಕ್ಷಕ ಕೂಡ ಜೈಕಾರ ಹಾಕಿದ್ದಾನೆ. ಹೀಗಾಗಿಯೇ ಈ ಜೋಡಿಯ ಮತ್ತೊಂದು ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ. ಶೂಟಿಂಗ್ ಶುರುವಾಗಲು ಇನ್ನೂ ಎರಡು ವರ್ಷ ಬೇಕಾದರೂ, ಚಿತ್ರದ ಕೆಲವು ಅಂಶಗಳನ್ನು ಬಹಿರಂಗಪಡಿಸಿದ್ದಾರೆ ನಿರ್ದೇಶಕರು. ಇದು ರಾಬಿನ್ ಹುಡ್ ಜೀವನ ಆಧರಿಸಿದ ಸಿನಿಮಾವಂತೆ. ಹೀಗಾಗಿ ರಾಬಿನ್ ಪಾತ್ರದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ಸದ್ಯ ಶಿವಣ್ಣನ ಕೈಯಲ್ಲಿ ಹದಿನೇಳು ಚಿತ್ರಗಳಿವೆ. ವರ್ಷಕ್ಕೆ ಮೂರು ಸಿನಿಮಾಗಳು ಸೆಟ್ಟೇರಿದರೂ ಇವುಗಳು ಖಾಲಿಯಾಗಲು ಆರು ವರ್ಷವಾದರೂ ಬೇಕು. ಈ ಮಧ್ಯೆ ರಾಬಿನ್ ಸಿನಿಮಾಗೆ ಡೇಟ್ ಹೊಂದಾಣಿಕೆ ಮಾಡಿಕೊಡುವುದಾಗಿ ಅವರು ಹೇಳಿದ್ದಾರೆ. ಹೀಗಾಗಿ ಚಿತ್ರಕತೆ ಬರೆಯುವಲ್ಲಿ ವಾಸು ಕೂಡ ಬಿಜಿ ಆಗಿದ್ದಾರೆ. ಶಿವಣ್ಣನ ವಯಸ್ಸು ಐವತ್ತು ದಾಟುತ್ತಿದ್ದಂತೆಯೇ ಅನೇಕ ಪ್ರಯೋಗಾತ್ಮಕ ಕತೆಗಳನ್ನು ಒಪ್ಪಿಕೊಂಡಿದ್ದಾರೆ. ಅದರಲ್ಲಿ 'ಸಂತೆಯಲ್ಲಿ ನಿಂತ ಕಬೀರ' ಕೂಡ ಒಂದು. ಈಗಾಗಲೇ ಚಿತ್ರದ ಬಹುತೇಕ ಚಿತ್ರೀಕರಣ ಮುಗಿದಿದ್ದು, ಏಪ್ರಿಲ್‌ನಲ್ಲಿ ತೆರೆ ಕಾಣುವ ಸಾಧ್ಯತೆ ಇದೆ.

ಗುಬ್ಬಿ ಮತ್ತು ವರಲಕ್ಷ್ಮೀ

ನಿರ್ದೇಶಕ ಪ್ರೀತಂ ಗುಬ್ಬಿ 'ಬಾಕ್ಸರ್' ಸಿನಿಮಾದ ನಂತರ ಕೈ ಹಾಕಿದ ಸಿನಿಮಾ 'ನಾನು ಮತ್ತು ವರಲಕ್ಷ್ಮೀ'. ಈ ಸಿನಿಮಾದ ಮೂಲಕ ಅವರು ಜಿ.ಕೆ. ವೆಂಕಟೇಶ್ ಅವರ ಮೊಮ್ಮಗ ಪೃಥ್ವಿಯನ್ನು ಸ್ಯಾಂಡಲ್‌ವುಡ್‌ಗೆ ಕರೆತಂದಿದ್ದಾರೆ. ಅವರಿಗಾಗಿಯೇ ಪ್ರೇಮ ಕಥೆಯೊಂದನ್ನು ಹೆಣೆದಿದ್ದಾರೆ. ಆ ಪ್ರೇಮ ಕಥೆಗೆ ಬೈಕ್ ರೇಸ್ ಕ್ರೇಜ್‌ನ್ನು ಹೆಣೆದು ಕುತೂಹಲ ಮೂಡಿಸಿದ್ದಾರೆ.

ಅಂದುಕೊಂಡಂತೆ ಆಗಿದ್ದರೆ ಈಗಾಗಲೇ ಈ ಸಿನಿಮಾ ರಿಲೀಸ್ ಆಗಬೇಕಿತ್ತು. 'ಬಾಕ್ಸರ್' ರಿಲೀಸ್ ಮಾಡುವ ಅವಸರದಲ್ಲಿದ್ದ ಪ್ರೀತಂ ಸ್ವಲ್ಪ ಕಾಲ 'ನಾನು ಮತ್ತು ವರಲಕ್ಷ್ಮಿ' ಚಿತ್ರದ ಶೂಟಿಂಗ್‌ಗೆ ಬ್ರೇಕ್ ನೀಡಿದ್ದರು. ಹೀಗಾಗಿ ಬಿಡುಗಡೆ ತಡವಾಯಿತು. ಇದೀಗ ಮತ್ತೆ ಚಿತ್ರೀಕರಣವು ವೇಗ ಪಡೆದುಕೊಂಡಿದೆ. ಭಾರತದಲ್ಲಿ ಮೋಟೋ-ಕ್ರಾಸ್ ಬಗೆಗಿನ ಸಿನಿಮಾಗಳು ಬಂದಿರುವುದು ಕಡಿಮೆ. ಅದರಲ್ಲೂ ಸ್ಯಾಂಡಲ್‌ವುಡ್‌ನಲ್ಲಿ ಅಂತಹ ಸಿನಿಮಾಗಳು ತೀರಾ ಕಡಿಮೆ. ಪ್ರೀತಂ ಈ ಬಗೆಗೆ ಹೊಸ ಟ್ರೆಂಡ್‌ಸೆಟ್ ಮಾಡುವತ್ತ ಸಾಗಿದ್ದಾರೆ. ಪ್ರೀತಂ ಗುಬ್ಬಿ ಸಾಕಷ್ಟು ಸಿನಿಮಾಗಳಿಗೆ ಆಕ್ಷನ್ ಕಟ್ ಹೇಳಿದ್ದರೂ, ಹೇಳಿಕೊಳ್ಳುವಂಥ ಗೆಲುವು ಇವರಿಗೆ ಸಿಕ್ಕಿಲ್ಲ. ಅಲ್ಲದೇ ಇವರ ಹಿಂದಿನ ಸಿನಿಮಾ 'ಬಾಕ್ಸರ್' ಕೂಡ ಭರ್ಜರಿ ನೆಲಕಚ್ಚಿತ್ತು. ಹೀಗಾಗಿ ವರಲಕ್ಷ್ಮೀ ಕೃಪಾಕಟಾಕ್ಷ ಚೆನ್ನಾಗಿ ಸಿಗಲಿದೆ ಅನ್ನುವ ಮಾತಿದೆ. ಲ್ಯಾಬ್ ರಿಪೋರ್ಟ್ ಕೂಡ ಚೆನ್ನಾಗಿದೆ. ಪ್ರಕಾಶ್ ರೈ ಅವರಂತಹ ಅನುಭವಿ ಕಲಾವಿದರು ಇದರಲ್ಲಿದ್ದಾರೆ. ಹೀಗಾಗಿ ಈ ಸಿನಿಮಾ ಗುಬ್ಬಿ ವೃತ್ತಿ ಬದುಕಿಗೆ ಬ್ರೇಕ್ ನೀಡಲಿದೆಯಂತೆ.

ವಿಜಯ ಗುಡಿಯ ನೋಡಿರಣ್ಣ

ದುನಿಯಾ ವಿಜಯ್ 'ಮಾಸ್ತಿ ಗುಡಿ' ಚಿತ್ರದಲ್ಲಿ ವಿಭಿನ್ನ ಪಾತ್ರ ಮಾಡುತ್ತಿರುವ ವಿಷಯ ಗುಟ್ಟಾಗಿ ಉಳಿದಿಲ್ಲ. ಆದರೆ, ಆ ಪಾತ್ರ ಯಾವುದು ಅನ್ನುವ ಕುರಿತು ಸ್ಯಾಂಡಲ್‌ವುಡ್‌ನಲ್ಲಿ ಕುತೂಹಲ ಮೂಡಿತ್ತು. ಅದಕ್ಕೀಗ ತೆರೆ ಬಿದ್ದಿದೆ. ಇಲ್ಲಿಯವರೆಗೆ ಮಾಡಿರುವ ಪಾತ್ರಗಳಿಗಿಂತ ವಿಭಿನ್ನವಾದ ಪಾತ್ರದಲ್ಲಿ ವಿಜಯ್ ಇದರಲ್ಲಿ ನಟಿಸಿದ್ದಾರಂತೆ. ಹೀಗಾಗಿ 25 ಹರೆಯದ ಹುಡುಗ, 45 ವಯಸ್ಸಿನವ ಮತ್ತು 65ರ ವೃದ್ಧನ ಪಾತ್ರವನ್ನು ನಿರ್ದೇಶಕ ನಾಗಶೇಖರ್ ಇಲ್ಲಿ ಸೃಷ್ಟಿಸಿದ್ದಾರೆ. ವೃದ್ಧನಂತೆ ಕಾಣಿಸಿಕೊಳ್ಳುವುದಕ್ಕಾಗಿಯೇ ವಿಜಯ್ ಒಂದು ತಿಂಗಳಿನಿಂದ ಲಿಕ್ವಿಡ್ ಆಹಾರ ತೆಗೆದುಕೊಳ್ಳುತ್ತಿದ್ದಾರೆ. ಸದ್ಯ ಈ ಸಿನಿಮಾದ ಮೊದಲ ಲುಕ್ ರಿಲೀಸ್ ಆಗಿದ್ದು, ಇದರಲ್ಲಿ ಬಿಳಿ ಗಡ್ಡ ಬಿಟ್ಟು, ಕೈಯಲ್ಲಿ ಬಂದೂಕು ಹಿಡಿದ ವಿಜಯ್‌ರನ್ನು ನೋಡಬಹುದು. ಸಿನಿಮಾದ ಕತೆಯೇ ವಿಶೇಷವಾಗಿದೆ. ಹುಲಿ ಸಂತತಿಯನ್ನು ಉಳಿಸುವ ಅಭಿಯಾನದಂತೆ ಸಿನಿಮಾ ಕೆಲಸ ಮಾಡಲಿದೆ. ಅಲ್ಲದೇ ಕಾಡುಗಳ್ಳರ ವಿರುದ್ಧ ಹೋರಾಡುವವರಿಗೆ ಸಿನಿಮಾ ಸ್ಫೂರ್ತಿ ನೀಡಲಿದೆ.

ಈಗಾಗಲೇ ಶೂಟಿಂಗ್ ಶುರುವಾಗಿದ್ದು, ವೃದ್ಧನ ಗೆಟಪ್‌ಗಾಗಿ ವಿಜಯ್ ಗಂಟೆಗಟ್ಟಲೆ ಒಂದೆಡೆ ಕೂತು ಮೇಕಪ್ ಮಾಡಿಸಿಕೊಳ್ಳಬೇಕಾಗಿದೆ. ಶೂಟಿಂಗ್‌ಗಿಂತ ಹೆಚ್ಚು ಮೇಕಪ್‌ನಲ್ಲೇ ವಿಜಯ್ ಕಾಲಕಳೆಯುತ್ತಿದ್ದಾರೆ. ಒಂದು ಬಾರಿ ಮೇಕಪ್‌ಗೆ ಬರೋಬ್ಬರಿ 4 ಗಂಟೆಗಳು ಬೇಕು. ಮೇಕಪ್ ಕಂಪ್ಲೀಟ್ ಆದ ಮೇಲೆ 2 ಗಂಟೆ ಮಾತ್ರ ಚಿತ್ರೀಕರಣ ಮಾಡುತ್ತಿದ್ದಾರೆ ನಿರ್ದೇಶಕರು.

ಬಾಲಿವುಡ್‌ಗೆ ಮೈತ್ರೇಯಾ ಗೌಡ

ಸದಾನಂದ ಗೌಡರ ಮಗನ ಜತೆಗಿನ ಸಲುಗೆಯಿಂದಾಗಿ ಸುದ್ದಿಯಾಗಿದ್ದ ನಟಿ ಮೈತ್ರೇಯಾ ಗೌಡ ಮತ್ತೊಂದು ಬ್ರೇಕಿಂಗ್ ಕೊಟ್ಟಿದ್ದಾರೆ. ಅವರು ಸದ್ದಿಲ್ಲದೇ ಬಾಲಿವುಡ್‌ಗೆ ಹಾರಲು ಸಿದ್ಧತೆ ಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಭಾರತದಲ್ಲಿ ವ್ಯಾಂಪೈರ್ ತ್ರಿಡಿ ಸಿನಿಮಾ ನಿರ್ಮಾಣ ಆಗುತ್ತಿದ್ದು, ಈ ಸಿನಿಮಾದಲ್ಲಿ ಇವರು ಪ್ರ ಪಾತ್ರ ನಿರ್ವಹಿಸುತ್ತಿದ್ದಾರೆ.

'ಶಾಪ್' ಹೆಸರಿನ ಈ ಚಿತ್ರದಲ್ಲಿ ನಟಿಸಲು ಆಡಿಷನ್ ನಡೆದಿತ್ತು. ಸಾವಿರ ಹುಡುಗಿಯರು ಆಡಿಷನ್‌ನಲ್ಲಿ ಭಾಗವಹಿಸಿದ್ದರು. ಅಂತಿಮ ಮೈತ್ರೇಯಾ ಗೌಡ ಆಯ್ಕೆಯಾಗಿದ್ದಾರೆ. ತಿಂಗಳ ಹಿಂದೆಯಷ್ಟೇ ಫೋಟೋ ಶೂಟ್ ಮಾಡಿಸಿ, ಅವುಗಳನ್ನು ಚಿತ್ರ ನಿರ್ದೇಶಕ ಫೈಸಲ್ ಅವರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು. ಫೋಟೋ ನೋಡಿದ ತಕ್ಷ ನಿರ್ದೇಶಕರು ಮೈತ್ರೇಯಾರನ್ನು ಕರೆಯಿಸಿಕೊಂಡಿದ್ದಾರೆ. ತಮ್ಮ ಸಿನಿಮ ನಟಿಸಲು ಅವಕಾಶ ಕೊಟ್ಟಿದ್ದಾರೆ.

ಅಂದಹಾಗೆ ಈ ಚಿತ್ರದಲ್ಲಿ ಇವರದ್ದು ನೇಹಾ ಭಾರದ್ವಾಜ್ ಪಾತ್ರ. ರಾಜ್‌ಪಾಲ್ ಯಾದವ್, ದುಬೈ ರಫೀಕ್ ಸೇರಿದಂತೆ ಬಾಲಿವುಡ್ ನಟರು ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಚಿತ್ರಕ್ಕೆ ಮೈತ್ರೇಯಾ ಅವರೇ ಡಬ್ಬಿಂಗ್ ಮಾಡಬೇಕಾಗಿರುವುದ ಹಿಂದಿ ಭಾಷೆಯ ಮೇಲೆ ವರ್ಕ್ ಮಾಡುತ್ತಿದ್ದಾರೆ. ಸಿನಿಮಾದ ಬಹು ಚಿತ್ರೀಕರಣ ಶಿಲ್ಲಾಂಗ್‌ನಲ್ಲಿ ನಡೆಯಲಿದೆ. ಅಲ್ಲದೇ ತಮಿಳಿನಲ್ಲೂ ಈ 'ಸಾಪಂ' ಹೆಸರಿನಲ್ಲಿ ನಿರ್ಮಾಣ ಆಗಲಿದೆ.



ಲಂಕೇಶ್ ಮೀಡಿಯಾದ ಗೈಡ್ ಪ್ರಕಾಶನದ ನೂತನ ಕೊಡುಗೆ



ಜಾಬ್‌ನ್ಯೂಸ್
ಮಾರ್ಚ್ 2016ರ
ಹೊಸ ಸಂಚಿಕೆ
ಈಗ ಎಲ್ಲೆಡೆ ಲಭ್ಯ

ಆಯಾ ಪರೀಕ್ಷೆಗೆ
ನಿಗದಿತ ಸಿಲಬಸ್‌ಗೆ
ಅನುಗುಣವಾಗಿ ಸಮೃದ್ಧ
ಅಧ್ಯಯನ ಸಾಮಗ್ರಿ
ಸರಳ ಕೈಪಿಡಿ
ಸೀಮಿತ ಪ್ರತಿಗಳು ಮಾತ್ರ



ರಾಜ್ಯಾದ್ಯಂತ ಎಲ್ಲಾ ಪುಸ್ತಕ ಅಂಗಡಿಗಳಲ್ಲಿ ಲಭ್ಯ
ಪ್ರತಿಗಳಿಗಾಗಿ: 080-26676427/988030281

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com